ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17 | ಸಂಚಿಕೆ 48 | ರೂ. 2.00 | 26 ನವಂಬರ್ 1995

4 ತಮಿಳುನಾಡು ರಾಜಕೀಯದ ಬಗ್ಗೆ ಕಾಂ.ಪಿ.ರಾಮಚಂದ್ರನ್
4 ಚೌನ್ ತಿದ್ದುಪಡಿಯ ಬಗ್ಗೆ ಕಾಂ.ಪ್ರಕಾಶ್ ಕಾರಟ್
5 ರೂಪಾಯಿಗೆ ಹತ್ತಿದ ಬೆಂಕಿ
2 ಗೋರ್ಬಚೇವ್ ದಾರಿ ದಿವಾಳಿಯಾಯಿತೇಕೆ?

ಕೃಷಿ ನೀತಿ, ಭೂ ನೀತಿಗಳ ಸವಾಲನ್ನು ಎದುರಿಸುವ ದೃಢ ಪ್ರತಿಜ್ಞೆ

ಕರ್ನಾಟಕ ಪ್ರಾಂತ ರೈತ ಸಂಘದ ಸಮ್ಮೇಳನ

ಕಾಂಗ್ರೆಸ್‌ನ ಹೊಸ ಆರ್ಥಿಕ ನೀತಿ ಪ್ರೇರಿತವಾದ ರಾಜ್ಯ ಸರ್ಕಾರದ ಹೊಸ ಕೃಷಿ ನೀತಿ ಹಾಗೂ ಭೂ ಸುಧಾರಣಾ ತಿದ್ದುಪಡಿ ಮಸೂದೆಯನ್ನು ತಿರಸ್ಕರಿಸಲು ಬಹುಸಂಖ್ಯಾತ ರೈತಾಪಿ ಪರವಾದ ಪರ್ಯಾಯ ಕೃಷಿ ನೀತಿಯ ಜಾರಿಗಾಗಿ ಸಂಘರ್ಷ ನಡೆಸಲು ಕರ್ನಾಟಕ ಪ್ರಾಂತ ರೈತ ಸಂಘದ ಹನ್ನೊಂದನೇ ರಾಜ್ಯ ಸಮ್ಮೇಳನದ ಕರೆ ನೀಡಿದೆ.

ಭೂಮಾಲೀಕರ ದಬ್ಬಾಳಿಕೆಯನ್ನು ಧಿಕ್ಕರಿಸಿ, ಗೇಣಿದಾರರ ಭೂಹಕ್ಕುಗಳಿಗಾಗಿ ರಾಜ್ಯದ ಹನ್ನೊಂದು ಜಿಲ್ಲೆಗಳಲ್ಲಿ ಕೆಂಬಾವುಟವನ್ನು ಎತ್ತಿ ಹಿಡಿದು ಉಳುವವನಿಗೆ ಭೂಮಿ ಸಿಗಬೇಕೆಂಬ ಸಂಘರ್ಷದ ಮಧ್ಯೆದಿಂದಲೇ 1957ರಲ್ಲಿ ಉದಯಿಸಿದ ಕರ್ನಾಟಕ ಪ್ರಾಂತ ರೈತ ಸಂಘ ಮತ್ತೊಮ್ಮೆ ಭೂಸುಧಾರಣ ತಿದ್ದುಪಡಿ ರಕ್ಷಣೆಗಾಗಿ ಸಂಘರ್ಷಕ್ಕೆ ಇಳಿಯಲು ಹನ್ನೊಂದನೇ ರಾಜ್ಯ ಸಮ್ಮೇಳನ ಕರೆ ನೀಡಿತು.

ಭೂಮಾಲೀಕರು ಸಂಘಟಿತರಾಗಿ ರಾಜ್ಯ ಸರ್ಕಾರವನ್ನು ತಮ್ಮ ಕಪಿ ಮುಷ್ಠಿಯಲ್ಲಿ ಇಟ್ಟುಕೊಳ್ಳಲು ನಡೆಸಿದ ಪ್ರಯತ್ನವನ್ನು ಹಿಮ್ಮೆಟ್ಟಿಸುವಷ್ಟು ಬಲಿಷ್ಠವಾಗಿ ರೈತಸಂಘದ ಚಳುವಳಿ ನಡೆದು ಪ್ರಜಾಸತ್ತಾತ್ಮಕ ಶಕ್ತಿಗಳು ಧ್ವನಿಗೂಡಿಸಬೇಕಾಯಿತು, ಅದರ ಪರಿಣಾಮವೇ ಭೂಸಂಬಂಧಗಳ ಅಧ್ಯಯನಕ್ಕಾಗಿ ಜತ್ತಿ ಸಮಿತಿ ನೇಮಕಗೊಂಡು ರಾಜ್ಯದಲ್ಲಿ ಭೂಸುಧಾರಣ ಕಾಯ್ದೆ ಜಾರಿಗೆ ಬರುವಂತಾಯಿತು.

ಮೂರು ದಶಕದ ರೈತರ ವೀರೋಚಿತ ಹೋರಾಟದ ಫಲವೇ ದೇವರಾಜ ಅರಸರ ಭೂಸುಧಾರಣ ಮಸೂದೆಯಾಗಿದ್ದು, ಅದು ಯಾವ ರಾಜಕಾರಣಿಯ ಕೃಪಾಕಟಾಕ್ಷವೂ ಆಗಿರಲಿಲ್ಲ.

ಇಂಥ ಹೋರಾಟದ ಪ್ರತಿಫಲವನ್ನು ಜನತಾದಳ ರಾಜ್ಯ ಸರಕಾರ ಒಂದೇ ದಿನದಲ್ಲಿ ತಿದ್ದುಪಡಿ ತಂದು ನಾಶಗೊಳಿಸಿ ಭೂಮಾಲೀಕ, ಬಂಡವಾಳಶಾಹಿ, ಬಹುರಾಷ್ಟ್ರೀಯ ಕಂಪನಿ, ಕಪ್ಪು ಹಣದ ರಾಕ್ಷಸರ ಕೈಗೆ ಇಡೀ ದುಡಿಯುವ ರೈತರ ಭೂಮಿಯನ್ನು ಒಪ್ಪಿಸಲು ಮುಂದಾಗಿರುವುದನ್ನು ಹನ್ನೊಂದನೇ ರಾಜ್ಯ ಸಮ್ಮೇಳನ ಒಕ್ಕೊರಲಿನಿಂದ ಖಂಡಿಸಿ, ತಿದ್ದುಪಡಿ ಮಸೂದೆಯನ್ನು ತಿರಸ್ಕರಿಸಿತು. ಪರ್ಯಾಯ ಕೃಷಿನೀತಿಯನ್ನು ರಾಜ್ಯಸರಕಾರ ಅಳವಡಿಸಿಕೊಳ್ಳಲು ಒತ್ತಾಯಿಸಿ ಮೂರು ಹಂತದ ರಾಜ್ಯವ್ಯಾಪಿ ಚಳುವಳಿಗೆ ಕರೆನೀಡಿತು.

ಕಾಂಗ್ರೆಸ್ ಕೇಂದ್ರ ಸರ್ಕಾರ, ವಿಶ್ವಬ್ಯಾಂಕ್ ಹಾಗೂ ಐ.ಎಂ.ಎಫ್ ಪ್ರೇರಿತವಾದ ಭೂಸಂಬಂಧಗಳನ್ನು ಅಳವಡಿಸಿ ಬಹುಸಂಖ್ಯಾತ ದುಡಿಯುವವರನ್ನು ಭೂಮಿಯಿಂದ ವಂಚಿತರನ್ನಾಗಿ ಮಾಡಿ, ಇಡೀ ಕೃಷಿ ವ್ಯವಸ್ಥೆಯನ್ನು ಬಹುರಾಷ್ಟ್ರೀಯ ಕಂಪನಿಗಳ ಹಿಡಿತಕ್ಕೆ ಕೊಡುವ ಮುಖಾಂತರ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಬೇಕಾದ ಹಣ್ಣು, ಹೂವು ಇತ್ಯಾದಿ ಹಣಕಾಸು ಬೆಳೆಗಳು, ಕೃಷಿ ಕೈಗಾರಿಕೆಯನ್ನು ಒಂದೆಡೆ ಬೆಳೆಸುವಂತಾಗಲು, ಇನ್ನೊಂದೆಡೆ ರಾಷ್ಟ್ರದ ಆಹಾರ ಧಾನ್ಯದ ಉತ್ಪಾದನೆಯನ್ನು ನಾಶ ಮಾಡಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಆಹಾರ ಉತ್ಪಾದನೆಗೆ ಮಾರುಕಟ್ಟೆಯನ್ನು ಒದಗಿಸುವಂತಹ ಹೊಸ ಕೃಷಿನೀತಿಯನ್ನು ಅಳವಡಿಸಿದ್ದು, ಅದರ ಜಾರಿಗಾಗಿ ಮುಂದಾಗಿದೆ.

ಇದೇ ನೀತಿಯನ್ನು ಜನತಾದಳದ ರಾಜ್ಯ ಸರ್ಕಾರ ಸಮರ್ಥಿಸಿ, ತುರ್ತುಗತಿಯಲ್ಲಿ ಜಾರಿಮಾಡಲು ಮುಂದಾಗಿರುವುದನ್ನು ಸಮ್ಮೇಳನ ಗಂಭೀರವಾಗಿ ಚರ್ಚೆನಡೆಸಿತು.

ಇದಕ್ಕೆ ಪರ್ಯಾಯವನ್ನು ರೂಪಿಸಿರುವ ರಾಜ್ಯ ಸಮ್ಮೇಳನ ಅದರ ಜಾರಿಗಾಗಿ ಕೆಂಬಾವುಟವನ್ನು ಎತ್ತಿಹಿಡಿಯಲು ಕರೆ ನೀಡಿದೆ.

ಪ.ಬಂಗಾಳ ಎಡರಂಗ ಸರ್ಕಾರ, ಭೂಕೇಂದ್ರಿಕರಣವನ್ನು ಕಿತ್ತೊಗೆದು 40 ಲಕ್ಷ ಕುಟುಂಬಗಳಿಗೆ ಭೂಮಿಯನ್ನು ಒದಗಿಸುವ ಮುಖಾಂತರ, ಕೃಷಿ ತಂತ್ರಜ್ಞಾನ, ನೀರಾವರಿ, ನೂತನ ಬೀಜ ರಸಗೊಬ್ಬರ ಒದಗಿಸುವ ಮುಖಾಂತರ, ರಾಜ್ಯದ ಕೃಷಿ ಉತ್ಪಾದನೆಯಲ್ಲಿ ದಾಪುಗಾಲು ಹಾಗೆ ರಾಷ್ಟ್ರದಲ್ಲಿಯೇ ಮೊದಲ ಸ್ಥಾನಕ್ಕೇರಿದೆ. ರೈತರ ಕೊಳ್ಳುವ ಶಕ್ತಿಯನ್ನು ಹೆಚ್ಚು ಮಾಡುವ ಮುಖಾಂತರ, ರೈತರ ಮಧ್ಯೆಯಿರುವ ಅಂತರವನ್ನು ಕಡಿಮೆ ಮಾಡಲು ಸಾಧ್ಯವಾಗಿದೆ. ಬಹುಸಂಖ್ಯಾತ ದುಡಿಯುವ ರೈತರ ಆರ್ಥಿಕ ಚೈತನ್ಯದಿಂದ, ವ್ಯಾಪಾರ ವೃದ್ಧಿ ಯಾಗಿ, ಸಣ್ಣ ಕೈಗಾರಿಕೆ ತೀವ್ರ ಅಬಿವೃದ್ಧಿಯಾಗಿ ರಾಷ್ಟ್ರದಲ್ಲಿ ಪ್ರಥಮ ಸ್ಥಾನಕ್ಕೇರಿದೆ.

ಈ ಅನುಭವಗಳ ಆಧಾರದಲ್ಲಿ ಪ್ರಾಂತರೈತ ಸಂಘದ ಹನ್ನೊಂದನೇ ರಾಜ್ಯ ಸಮ್ಮೇಳನ ರಾಜ್ಯದಲ್ಲಿ ಈ ಅಂಶಗಳನ್ನು ಹೊಂದಿರುವ ಪರ್ಯಾಯ ಕೃಷಿನೀತಿಯನ್ನು ರೂಪಿಸಿದೆ.

ಕಾಂಗ್ರೆಸಿನ ಹೊಸ ಆರ್ಥಿಕ ನೀತಿಯ ದಾಳಿ, ಅದೇ ಆರ್ಥಿಕ ನೀತಿಯನ್ನು ಪ್ರತಿಪಾದಿಸುವ ಭಾರತೀಯ ಜನತಾಪಕ್ಷ, ಹೊಸ ಆರ್ಥಿಕ ನೀತಿಯ ಜಾರಿಯನ್ನು ಬಂಡವಾಳವಾಗಿಸಿಕೊಂಡು, ರಾಜ್ಯದಲ್ಲಿ ಒಂದೆಡೆ ಹಿಂದೂ ಕೋಮುವಾದಿ ಘೋಷಣೆಗಳನ್ನು ಹೊತ್ತು ಜಾಥಾಗಳನ್ನು ನಡೆಸುತ್ತಿದೆ. ಇನ್ನೊಂದು, ಗ್ರಾಮೀಣ ಪ್ರದೇಶದಲ್ಲಿ ಪ್ರಚಾರ ಸಭೆಗಳ ಮುಖಾಂತರ, ರಾಜಕೀಯವಾಗಿ ರೈತರ ಮಧ್ಯೆ ಬೆಳೆಯಲು ಪ್ರಯತ್ನಿಸುತ್ತಿದೆ.

ಇಂತಹ ಸಂದರ್ಭದಲ್ಲಿ ಅಸಹಾಯಕರಾಗುತ್ತಿರುವ ಬಹುಸಂಖ್ಯಾತ ದುಡಿಯುವ ರೈತ, ಕೃಷಿಕೂಲಿಕಾರರ ಸಮಸ್ಯೆಗಳನ್ನು ಮುಂದಿಟ್ಟು ಧೀರೋದಾತ್ತ ಚಳುವಳಿಯ ಮುಖಾಂತರ ಅವರ ಸಮಸ್ಯೆಗಳಿಗೆ ಪರಿಹಾರ ಪಡೆಯುವ ಹಾದಿಯಲ್ಲಿಯೇ ಪರ್ಯಾಯ ಕೃಷಿ ನೀತಿಯ ಜಾರಿಗೆ ಒತ್ತಾಯಿಸಬೇಕಾಗಿದ್ದು ಅದಕ್ಕಾಗಿ ಹನ್ನೊಂದನೇ ಸಮ್ಮೇಳನ ರೂಪಿಸಿದ ಪರ್ಯಾಯ ಕೃಷಿ ನೀತಿಯ ವ್ಯಾಪ್ತಿಯ ಬೇಡಿಕೆಗಳನ್ನು ಮುಂದಿಟ್ಟು, ವ್ಯಾಪಕವಾದ ವಿಶಾಲವಾದ ಪ್ರಚಾರಾಂದೋಲನದ ಮುಖಾಂತರ ಬಹುಸಂಖ್ಯೆಯ ರೈತರ ಗಮನವನ್ನೂ ಆಕರ್ಷಿಸುವಂತಾಗಬೇಕಿದೆ ಎಂದು ಸಮ್ಮೇಳನ ಅಭಿಪ್ರಾಯಪಟ್ಟಿತು. ನಂತರದಲ್ಲಿ ಹೆಚ್ಚಿನ ತಾಲೂಕಾ ಕೇಂದ್ರಗಳಲ್ಲಿ ಧರಣಿಯ ಮುಖಾಂತರ ಹೆಚ್ಚಿನ ಹಳ್ಳಿಗಳ ರೈತರನ್ನು ಹೋರಾಟದಲ್ಲಿ ತೊಡಗಿಸುವಂತಾಗಬೇಕು, ಈ ತಯಾರಿಯೊಂದಿಗೆ ರಾಜ್ಯ ಮಟ್ಟದ ಮೇಲ್‌ಸ್ಥರದ ಬೃಹತ್ ಚಳುವಳಿಗೆ ಮುಂದಾಗಬೇಕಿದೆ. ಆ ಮುಖಾಂತರ ರಾಜ್ಯ ಸರಕಾರದ ಪ್ರತಿಗಾಮಿ ಧೋರಣೆಗಳನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಲು, ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯ ಧೋರಣೆಯ ಅನಿವಾರ್ಯತೆಯನ್ನು ಜನತೆಯಲ್ಲಿ ಮೂಡಿಸುವ ಮುಖಾಂತರ, ಎಡಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬೆಳೆಸುವ ಹಾದಿಯತ್ತ ಹೆಜ್ಜೆಯಿಡುವುದು ಇವತ್ತಿನ ತುರ್ತಿನ ಕರ್ತವ್ಯವಾಗಿದೆ ಎಂದು ಇಂತಹ ಚಾರಿತ್ರಿಕ ಜವಾಬ್ದಾರಿಯನ್ನು ನಿರ್ವಹಿಸಲು ಕರೆಕೊಟ್ಟಿದೆ ಹನ್ನೊಂದನೇ ಸಮ್ಮೇಳನ, ಅದಕ್ಕೆ ಬೇಕಾದ ಸಂಘಟನಾ ಯಂತ್ರವನ್ನು, ಹುಮ್ಮಸ್ಸನ್ನು ರೂಢಿಸಿಕೊಳ್ಳಲು ಕರೆಕೊಟ್ಟಿದೆ.

ಸಮ್ಮೇಳನದ ವಿವರಗಳಿಗೆ ಪುಟ 3 ನೋಡಿ

ಆಹಾರ ಉತ್ಪಾದನೆಯಲ್ಲಿ ಪಂಜಾಬನ್ನು ಮೀರಿಸಿದ ಪ.ಬಂಗಾಳ

–ಕಾಂ. ಬಿನೋಯ್ ಚೌಧುರಿ

ಇಂದು ಪ.ಬಂಗಾಳ ಆಹಾರದ ಉತ್ಪಾದನೆಯಲ್ಲಿ ಭಾರತದಲ್ಲಿ ದೀರ್ಘ ಕಾಲ ಕೃಷಿ ಉತ್ಪಾದನೆಯ ಮುಂದಾಳುಗಳಾಗಿದ್ದ ಪಂಜಾಬು ಹರಿಯಾಣಗಳನ್ನು ಮೀರಿಸಿದೆ ಎಂದು ಪ.ಬಂಗಾಳದ ಸಚಿವ ಕಾಂ. ಬಿನೋಯ್ ಚೌಧುರಿಯವರು ಘೋಷಿಸಿದರು.

ಕರ್ನಾಟಕ ಪ್ರಾಂತರೈತ ಸಂಘದ 11ನೇ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಾ ಪ.ಬಂಗಾಳ ತೋರಿಸುತ್ತಿರುವ ಪರ್ಯಾಯ ದಾರಿಯ ಬಗ್ಗೆ ಕಾಂ. ಬಿನೋಯ್ ಚೌಧುರಿ ವಿವರಿಸಿದರು.

7ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಹರ್ಯಾಣದಲ್ಲಿ ಕೃಷಿ ಉತ್ಪಾದನೆಯಲ್ಲಿ ಶೇ. 24ರಷ್ಟು ಹೆಚ್ಚಳವಾಗಿದ್ದರೆ, ಪಂಜಾಬಿನಲ್ಲಿ ಶೇ. 23ರಷ್ಟು. ಆದರೆ ಭಾರತ ಸರಕಾರವೇ ಒಪ್ಪಿದಂತೆ ಪ.ಬಂಗಾಳದ ಆಹಾರ ಉತ್ಪಾದನೆಯಲ್ಲಿ ಶೇ. 33ರಷ್ಟು ಹೆಚ್ಚಳವಾಗಿದೆ.

ಆಶ್ಚರ್ಯವನ್ನು ಪ.ಬಂಗಾಳ ಸಾಧಿಸಿದ್ದು ಹೇಗೆ? ಇನ್ನು ಕರ್ನಾಟಕ ರಾಜ್ಯದೊಡನೆ ಹೋಲಿಸೋಣ. ಕರ್ನಾಟಕದಲ್ಲಿ ಬಿತ್ತನೆ ಪ್ರದೇಶ ಎರಡೂವರೆ ಲಕ್ಷ ಎಕರೆಗಳು. ಪ.ಬಂಗಾಳದಲ್ಲಿ ಕೇವಲ 75 ಲಕ್ಷ ಎಕರೆ ಆದರೆ 1977ರಲ್ಲಿ ಆಹಾರ ಉತ್ಪಾದನೆ ಪ.ಬಂಗಾಳದಲ್ಲಿ 75 ಲಕ್ಷ ಟನ್‌ಗಳು, 1995ರಲ್ಲಿ 131 ಲಕ್ಷ ಟನ್ ಗಳು. ಆದರೆ ಕರ್ನಾಟಕದಲ್ಲಿ ಅಂದೂ 75 ಲಕ್ಷ ಟನ್ ಇಂದೂ ಕೂಡಾ 75 ಲಕ್ಷ ಟನ್‌ಗಳು.

ಇದು ಹೇಗೆ ಸಾಧ್ಯವಾಯಿತು? ಭೂ ಸುಧಾರಣೆಯಿಂದ - 22 ಲಕ್ಷ ಜನರಿಗೆ 9.7 ಲಕ್ಷ ಎಕರೆ ಭೂಮಿ ನೀಡಿದ್ದರಿಂದ ಮತ್ತು 14 ಲಕ್ಷ ಜನ ಬರ್ಗಾದಾರ(ಪಾಲುದಾರ) ರೈತರಿಗೆ 10 ಲಕ್ಷ ಎಕರೆಯಲ್ಲಿ ಪಹಣಿ ದಾಖಲೆಯಲ್ಲಿ ಸೇರಿಸಿದ ಹಕ್ಕನ್ನು ನೀಡಿದ್ದರಿಂದ.

ಈ ರೈತರಿಗೆ ಸರಕಾರವೇ ಗ್ಯಾರಂಟಿಯಾಗಿ ಸಾಲ ಸೌಲಭ್ಯಗಳನ್ನು ನೀಡಿದ್ದರಿಂದ ಹಾಗೂ ಉಚಿತ ಕೃಷಿ ಸಾಮಗ್ರಿಗಳನ್ನು ಸರಬರಾಜು ಮಾಡಿದ್ದರಿಂದ.

ಇದುವೇ ಪ.ಬಂಗಾಳ ತೋರಿಸುವ ಕೃಷಿ ಅಭಿವೃದ್ಧಿಯ ಪರ್ಯಾಯ-ದಾರಿ ಎಂದು ಅವರು ಘೋಷಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ 11ನೇ ರಾಜ್ಯ ಸಮ್ಮೇಳನದ ಅಂಗವಾಗಿ ಬಿಜಾಪುರದಲ್ಲಿ ಸೆ. ೬ರಂದು ನಡೆದ ಸಾರ್ವಜನಿಕ ಸಭೆಯ ಒಂದು ದೃಶ್ಯ



ಡಿವೈಎಫ್ಐ ರಾಷ್ಟ್ರ ಸಮ್ಮೇಳನ- ವರ್ಣರಂಜಿತ ಆರಂಭ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿವೈಎಫ್ಐ)ದ 5ನೇ ಅಖಿಲ ಭಾರತ ಸಮ್ಮೇಳನ ನವಂಬರ್ 14ರಂದು ವರ್ಣಮಯ ಮೆರವಣಿಗೆಯ ಮೂಲಕ ಕಲ್ಕತ್ತೆಯಲ್ಲಿ ಆರಂಭವಾಯಿತು. ನಗರದ ಮಧ್ಯದಲ್ಲಿರುವ ನೇತಾಜಿ ಸುಭಾಶ್ ಚಂದ್ರ ಬೋಸ್‌ರ ಪ್ರತಿಮೆಯ ಬಳಿಯಿಂದ ಆರಂಭವಾದ ವರ್ಣಮಯ, ಭವ್ಯ ಮೆರವಣಿಗೆ ನಗರದ ಮುಖ್ಯ ರಸ್ತೆಗಳ ಮೂಲಕ ಹಾದು ಉದ್ಘಾಟನಾ ಸಮಾರಂಭ ನಡೆದ ಸ್ಥಳಕ್ಕೆ ಆಗಮಿಸಿತು. ಮೆರವಣಿಗೆಯ ಆರಂಭದಲ್ಲಿ ನೇತಾಜಿ ಪ್ರತಿಮೆಯ ಬಳಿ ಅವರ ಆಝಾದ್ ಹಿಂದ್ ಸೇನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ್ತಿ ಲಕ್ಷ್ಮಿ ಸಹಗಲ್ ಸ್ವತಃ ಸಮ್ಮೇಳನದ ಬಾವುಟವನ್ನು ತಂದು ನಿಂತಿದ್ದರು. ಕೇರಳದಿಂದ ತಂದಿದ್ದ ಆ ಬಾವುಟ ಹಾಗೂ ದೀವಟಿಗೆಯನ್ನು(ಬಾಕ್ಸ್ ನೋಡಿ) ಡಿವೈಎಫ್ಐ ಅಧ್ಯಕ್ಷ ಎಂ.ಎ. ಬೇಬಿಯವರಿಗೆ ಒಪ್ಪಿಸುತ್ತಿದ್ದಂತೆ ಘೋಷಣೆಗಳು ಗಗನ ಮುಟ್ಟಿದ್ದವು. ಎದುರಲ್ಲೇ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಕೇಂದ್ರದ ಕಛೇರಿಯಿತ್ತು. ಆರಂಭದಿಂದಲೂ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದ ಭವ್ಯ ಪರಂಪರೆಯಿರುವ ಡಿವೈಎಫ್ಐ ಸಂಗಾತಿಗಳು ಈ ಕೇಂದ್ರದ ಎದುರು ಸಾಮ್ರಾಜ್ಯಶಾಹಿ-ವಿರೋಧಿ ಘೋಷಣೆಗಳನ್ನು ಕೂಗುತ್ತಿದ್ದುದು ಅತ್ಯಂತ ಸಾಂಕೇತಿಕವಾಗಿತ್ತು, ನಗರದ ಯುವ ಕಾರ್ಯಕರ್ತರು ಮತ್ತು ದೇಶದೆಲ್ಲೆಡೆಯಿಂದ ಬಂದಿರುವ ಪ್ರತಿ

ಪುಟ 8 ನೋಡಿ

ವಿಶೇಷ ಲೇಖನ

ಅಕ್ಟೋಬರ್ ಕ್ರಾಂತಿಯ ಸಂದರ್ಭದಲ್ಲಿ ಒಂದು ವಿಶ್ಲೇಷಣೆ

ಗೋರ್ಬಚೇವ್ ದಾರಿ ದಿವಾಳಿಯೆದ್ದಿತೇಕೆ?

ಲೆನಿನ್ ತನ್ನ ಕಾಲದ ವೈರುಧ್ಯಗಳನ್ನು ಚೆನ್ನಾಗಿ ಮನನ ಮಾಡಿ ಆ ಸನ್ನಿವೇಶದಲ್ಲಿ ಮಧ್ಯಪ್ರವೇಶಿಸಬಲ್ಲ ಬೊಲ್ಶೆವಿಕ್ ಪಕ್ಷವನ್ನು ಕಟ್ಟಿ 1917ರಲ್ಲಿ ಯುಗಾಂತರಕಾರಿ ಪರಿವರ್ತನೆ ಬರುವಂತಾಯಿತು. ಗೋರ್ಬಚೇವ್ ಸಮಾಜವಾದದ ಮುನ್ನಡೆಗೆ ಬಾಧಕವಾದ ಸಮಸ್ಯೆಗಳನ್ನು ಗುರುತಿಸಿದರು. ಆದರೆ ಅವರು ಮಧ್ಯಪ್ರವೇಶಿಸಿದ ರೀತಿ ಈ ಕ್ರಾಂತಿಕಾರಿ ಪಕ್ಷವನ್ನು ಕ್ಷೀಣಗೊಳಿಸಿತು. ಹೋರಾಟ ಮುನ್ನಡೆಯಾಗುವ ಬದಲು ಹಿಂದಕ್ಕೆ ಸರಿಯಿತು. ಕ್ರಾಂತಿ-ವಿರೋಧಿಗಳು ವಿಜಯದ ಕೇಕೆ ಹಾಕುವಂತಾಯಿತು. ಮಹಾನ್ ಅಕ್ಟೋಬರ್ ಕ್ರಾಂತಿಯ 78ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಹತ್ತು ವರ್ಷಗಳ ಹಿಂದೆ ಪ್ರತಿಪಾದಿಸಲ್ಪಟ್ಟ ಗೋರ್ಬಚೇವ್ 'ಸುಧಾರಣೆ'ಗಳ ವಿಶ್ಲೇಷಣೆ.

- ಸೀತಾರಾಂ ಯೆಚೂರಿ

ಹತ್ತು ವರ್ಷಗಳ ಹಿಂದೆ 1985ರಲ್ಲಿ ಮಿಖಾಯಿಲ್ ಗೋರ್ಬಚೇವ್ ಸೋವಿಯತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷ(ಸಿಪಿಎಸ್ ಯು)ದ ಪ್ರಧಾನ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡರು. ಈ ಹುದ್ದೆ ಸೋವಿಯತ್ ಒಕ್ಕೂಟಕ್ಕೆ ಮಾತ್ರವಲ್ಲ, ಇತರ ಹಲವಾರು ಸಮಾಜವಾದಿ ದೇಶಗಳಿಗೂ, ವಿಶೇಷವಾಗಿ ಪೂರ್ವ ಯುರೋಪಿನ ದೇಶಗಳಿಗೂ ಒಂದು ಪ್ರಭಾವಶಾಲೀ ಹುದ್ದೆಯಾಗಿತ್ತು.

ಸಾಮಾನ್ಯವಾಗಿ ವ್ಯಕ್ತಿಗಳ ಸಕಾರಾತ್ಮಕ ಅಥವಾ ನಕಾರಾತ್ಮಕ ಕೊಡುಗೆಗಳ ವಿಮರ್ಶೆ ನಡೆಯುವುದು ಅವರುಗಳ ಸಾವಿನ ನಂತರ. ಇನ್ನೂ ಬದುಕಿರುವವರು ಇಂತಹ ವಿಮರ್ಶೆಗೆ ಪಾತ್ರರಾಗುವುದು ಬಹಳ ಅಪರೂಪ. ಗೋರ್ಬಚೇವ್ ಇಂತಹ ಅಪರೂಪದ ಉದಾಹರಣೆಗಳಲ್ಲೊಂದು. ನಿಜ, ಒಂದು ಅತ್ಯಂತ ನಕಾರಾತ್ಮಕ ಅರ್ಥದಲ್ಲಿ.

ಇಂತಹ ಒಂದು ವಿಮರ್ಶೆಯನ್ನು ನಡೆಸಲು ಮಾನವ ನಾಗರಿಕತೆಯಲ್ಲಿ ಹೊಸ ಯುಗ ಆರಂಭಿಸಿದ ಮಹಾನ್ ಅಕ್ಟೋಬರ್ ಕ್ರಾಂತಿಯ ವಾರ್ಷಿಕೋತ್ಸವದ ಸಂದರ್ಭದ ಬಹಳ ಸೂಕ್ತ.

ಗೋರ್ಬಚೇವ್ ಒಂದು ಶಕ್ತಿಶಾಲೀ ಸಮಾಜವಾದಿ ಕೊತ್ತಳದ ಮುಖಂಡತ್ವಕ್ಕೆ ಉತ್ತರಾಧಿಕಾರಿಯಾಗಿ ಬಂದರು. ಆದರೆ ವಿಶ್ವದ ಪ್ರತಿಗಾಮಿಗಳೆಲ್ಲಾ ಒಟ್ಟಾಗಿ ಸೇರಿಕೊಂಡು ನಡೆಸಿದ ಎಲ್ಲಾ ರೀತಿಯ ಧಾಳಿಗಳನ್ನೆಲ್ಲಾ ಯಶಸ್ವಿಯಾಗಿ ಹಿಮ್ಮೆಟ್ಟಿಸಿ ನಿಂತ ಬಲಿಷ್ಠ ಸೋವಿಯತ್ ಒಕ್ಕೂಟ ಈ ಶತಮಾನದ ಕೊನೆಯ ದಶಕದ ಆರಂಭದಲ್ಲಿ ಈ ವ್ಯಕ್ತಿ ಆರಂಭಿಸಿದ ಪ್ರಕ್ರಿಯೆಯಲ್ಲಿಯೇ ವಿಘಟನೆಗೊಂಡಿತು. ಪೂರ್ವ ಯುರೋಪಿನ ಸಮಾಜವಾದಿ ದೇಶಗಳು ಕಳಚಿ ಬಿದ್ದವು.

"ಮಂತ್ರ ಮುಗ್ಧ"

ಗೋರ್ಬಚೇವ್ ಅಧಿಕಾರಕ್ಕೆ ಬಂದಾಗ ಅವರನ್ನು ಹಾಡಿ ಹೊಗಳದ ಪಾಶ್ಚಿಮಾತ್ಯ ಮುಖಂಡರಿಲ್ಲ. ಸಿಪಿಎಸ್‌ಯು ಹೇಳಿದ್ದನ್ನು ಪುನರುಚ್ಚರಿಸುವ ಕಮ್ಯುನಿಸ್ಟ್ ಪಕ್ಷಗಳಿಗೆ ಖುಷಿಯೋ ಖುಷಿ. ಕೆಲವೇ ಕಮ್ಯುನಿಸ್ಟ್ ಪಕ್ಷಗಳು ಮಾತ್ರ ಸಂಶಯ ವ್ಯಕ್ತಪಡಿಸಿದವು. ಆಗಸ್ಟ್ ಬೇಬಲ್ ಬಹಳ ಹಿಂದೆ ಒಂದು ಎಚ್ಚರಿಕೆ ನೀಡಿದ್ದರು - "ನಿಮ್ಮ ಶತ್ರು ನಿಮ್ಮನ್ನು ಹೊಗಳುವಾಗ ಎಚ್ಚರದಿಂದಿರಿ!" ಈ ಎಚ್ಚರಿಕೆ ಬಹಳ ಜನರ ನೆನಪಿಗೆ ಬರಲಿಲ್ಲ. ಕೆಲವು ವರ್ಷ ಈ ವ್ಯಕ್ತಿ ಹಲವರನ್ನು "ಮಂತ್ರಮುಗ್ಧ"ರನ್ನಾಗಿಸಿದರು - "ಗೋರ್ಬಚೇವಿಸಂ" ಎಂಬ ಪದವನ್ನು ಸೃಷ್ಟಿಸಲಾಯಿತು. "ಟೈಮ್" ಪತ್ರಿಕೆ ಆತನಿಗೆ 'ದಶಕದ ವ್ಯಕ್ತಿ' ಎಂಬ ಬಿರುದನ್ನು ನೀಡಿತು.

ಆದರೆ 1991ರ ವೇಳೆಗೆ ಗೋರ್ಬಚೇವ್ ಈ ಬಲಿಷ್ಠ ಸಮಾಜವಾದಿ ಕೊತ್ತಳದ ವಿನಾಶದ ಕ್ರಿಯೆಯ 'ಅಧ್ಯಕ್ಷತೆ' ವಹಿಸಿದಾಗಲೇ ವಿಶ್ವಕ್ಕೆ ಎಲ್ಲವೂ ಅರಿವಾಯಿತು; ಸಾಮ್ರಾಜ್ಯಶಾಹಿ ಮಾಧ್ಯಮಗಳು ಅನಾದಿಕಾಲದಿಂದಲೂ ಹೊಂದಿದ್ದ ಈ ಉದ್ದೇಶ ಸಾಧನೆಯಾಗುತ್ತಿತ್ತು. ಮಿಲಿಯಗಟ್ಟಲೆ ಜನರಿರುವ ಒಂದು ದೇಶ ಆಶ್ಚರ್ಯಜನಕವಾಗಿ, ಯಾವುದೇ ಪ್ರತಿರೋಧವಿಲ್ಲದೆ ಪ್ರತಿ-ಕ್ರಾಂತಿಯ ಕೈಗೆ ಹೇಗೆ ಹೋಗಬಲ್ಲದು ಎನ್ನುವುದನ್ನು ಇನ್ನು ವಿವರಿಸಬೇಕಾಗಿದೆ ಎಂದು ಕಾರ್ಲ್ ಮಾರ್ಕ್ಸ್ "ಲೂಯಿ ಬೋನಾಪಾರ್ಟೆಯ ಹದಿನೆಂಟನೇ ಬ್ರೂಮೇರ್" ನಲ್ಲಿ ಹೇಳುತ್ತಾರೆ. ಸೋವಿಯತ್ ಒಕ್ಕೂಟದ ಬಗ್ಗೆ ಇಂತಹ ವಿವರಣೆ ನೀಡಲು ಸಿಪಿಐ(ಎಂ) 1992ರಲ್ಲಿ ತನ್ನ ಹದಿನಾಲ್ಕನೇ ಮಹಾಧಿವೇಶನದಲ್ಲಿ ಪ್ರಯತ್ನಿಸಿತು. ಈ ಬಗ್ಗೆ ನಮ್ಮ ಓದುಗರಿಗೆ ತಿಳಿದಿದೆ. ಆದ್ದರಿಂದ ಅವನ್ನಿಲ್ಲಿ ಪುನರುಚ್ಚರಿಸಿಲ್ಲ.

1985ರಲ್ಲಿ ಗೋರ್ಬಚೇವ್ ಅಧಿಕಾರಕ್ಕೇರಿದಾಗ ಸೃಷ್ಟಿಯಾದ ಕೆಲವು ಭ್ರಮೆಗಳ ಆಧಾರದಲ್ಲಿ 1995ರ ವಾಸ್ತವತೆಗಳು ಹೋಲಿಸಿ ನೋಡುವ ಪ್ರಯತ್ನವನ್ನು ಇಲ್ಲಿ ಮಾಡೋಣ.

ಎರಡು ಪ್ರಧಾನ ಭ್ರಮೆಗಳು

ಈ ರೀತಿಯ ಸೃಷ್ಟಿಯಾದ ಹಲವು ಭ್ರಮೆಗಳಲ್ಲಿ ಎರಡರ ಬಗ್ಗೆ ಒಂದು ದಶಕದ ನಂತರ ಈಗ ಪರೀಕ್ಷಿಸುವುದು ಸೂಕ್ತ. ಮೊದಲನೆಯ ಭ್ರಮೆ ಎಂದರೆ ಗೋರ್ಬಚೇವ್ ಮುಖಂಡತ್ವದಲ್ಲಿ ಸಂಘರ್ಷಗಳು, ಶಸ್ತ್ರಾಸ್ತ್ರ ಪೈಪೋಟಿ ಕಮ್ಮಿಯಾಗಿ ವಿಶ್ವ ಒಂದು ಹೆಚ್ಚು ವಾಸಯೋಗ್ಯ ಸ್ಥಳವಾಗುತ್ತದೆ ಎಂಬುದು. ಎರಡನೆಯದಾಗಿ, ಸಮಾಜವಾದವನ್ನು ನವೀಕರಿಸುವ ಗೋರ್ಬಚೇವ್ ರ ಸುಧಾರಣೆಗಳು ಸಮಾಜವನ್ನು ಬಲಪಡಿಸುತ್ತದೆ ಎಂಬುದು. ನಿಜವಾಗಿಯೂ ಇದು ಈಡೇರಿತೇ? ಇದನ್ನು ಪರಿಶೀಲಿಸೋಣ.

ಶಸ್ತ್ರಾಸ್ತ್ರಗಳ ಪೈಪೋಟಿ ಕಮ್ಮಿಯಾಗಿ ಅಭಿವೃದ್ಧಿಗೆ ಹೆಚ್ಚಿನ ಹಣ ಸಿಗುವಂತಾಗಿದೆ, ಇದರಿಂದ ಮೂರನೇ ಜಗತ್ತಿನ ಸ್ಥಿತಿ ಸುಧಾರಿಸುತ್ತದೆ ಎಂದು ನಂಬಲಾಗಿತ್ತು. ಆದರೆ

ಈಗಿನ ವಾಸ್ತವತೆಯೇನು? ಮೂರನೇ ಜಗತ್ತಿನ ದೇಶಗಳ ಜನಜೀವನ ಮಟ್ಟ ಇಳಿಯುತ್ತಿದೆ, ಬಡವ-ಶ್ರೀಮಂತರ ನಡುವೆ ಅಸಮಾನತೆ ಬೆಳೆಯುತ್ತಿದೆ ಎಂಬುದರ ಬಗ್ಗೆ ಇಲ್ಲಿ ವಿವರ ನೀಡಬೇಕಾಗಿಲ್ಲ. ಒಂದು ಹೆಚ್ಚು ಉತ್ತಮವಾದ ವಿಶ್ವದ ಬದಲು ನಾವು ಕಾಣುತ್ತಿರುವುದು ಸಮಾಜವಾದದ ತಡೆಯಿಲ್ಲದ್ದರಿಂದ ಸಾಮ್ರಾಜ್ಯಶಾಹಿಯ ಹೊಸ ಆಕ್ರಮಣ-ಅಮೇರಿಕಾದ ಹೊಸ ವಿಶ್ವ ವ್ಯವಸ್ಥೆಯ ದೃಷ್ಟಿಕೋಣದ ಪ್ರಕಾರ ಹೊಸ ಆಕ್ರಮಣ. ಗ್ಯಾಟ್ 1994ರ ಸಂಧಿಯ ಮೂಲಕ ನವ-ವಸಾಹತುಶಾಹಿ ಶೋಷಣೆಗೆ ಒಂದು ಕಾನೂನಿನ ಚೌಕಟ್ಟನ್ನು ಕೂಡಾ ಹೇರಲಾಗಿದೆ. ಇವೆಲ್ಲದರ ಫಲವೆಂದರೆ ಲ್ಯಾಟಿನ್ ಅಮೇರಿಕಾದ 61% ಜನ, ಆಫ್ರಿಕಾದ 50% ಜನ ಅತ್ಯಂತ ಕೀಳುಮಟ್ಟದಲ್ಲಿರುವ ಬಡತನದ ರೇಖೆಗಿಂತಲೂ ಕೀಳುಮಟ್ಟದಲ್ಲಿ ಬದುಕುತ್ತಿದ್ದಾರೆ. 2000 ಇಸ್ವಿ ವೇಳೆಗೆ ವಿಶ್ವದ ಅರ್ಧದಷ್ಟು ಜನ ಹಸಿವಿನಿಂದ ನರಳುತ್ತಿರುತ್ತಾರೆ. ಈಗ ಅನಕ್ಷರಸ್ಥರ ಸಂಖ್ಯೆ ನೂರು ಕೋಟಿ, ಕೆಲಸ ಮಾಡಬಲ್ಲವರಲ್ಲಿ 30%ಗೂ ಹೆಚ್ಚು ಮಂದಿ ನಿರುದ್ಯೋಗಿಗಳು - ಇವೆಲ್ಲಾ ಐಎಲ್‌ಒ ಅಂಕಿ ಸಂಖ್ಯೆಗಳು.

ಸುಭಿಕ್ಷವೂ ಇಲ್ಲ
ಶಾಂತಿಯೂ ಇಲ್ಲ

1989ರ ವೇಳೆಗೆ ಮೂರನೇ ಜಗತ್ತು ಐಎಂಎಫ್ ಮತ್ತಿತರ ಅಂತರ್‍ರಾಷ್ಟ್ರೀಯ ಸಾಲ ನೀಡಿಕೆ ಸಂಸ್ಥೆಗಳಿಂದ ಪಡೆದ ಒಟ್ಟು ಸಾಲದ ಮೊತ್ತಕ್ಕಿಂತಲೂ ಹೆಚ್ಚಿನ ಬಡ್ಡಿ ಅದರ ಮೇಲೆ ತೆತ್ತಿತ್ತು. ಆದರೂ ಸಾಲ 1662 ಶತಕೋಟಿ ಡಾಲರುಗಳು!! ನಂತರ ಪ್ರತಿ ವರ್ಷ 6.5% ದರದಲ್ಲಿ ಇದು ಏರುತ್ತಾ ಹೋಗುತ್ತದೆ ಎಂದೂ ಅಂದಾಜು ಮಾಡಿದೆ. 1994ರ ಮೊದಲ ಆರು ತಿಂಗಳಲ್ಲಿ ಮೂರನೇ ಜಗತ್ತಿನಿಂದ ಸಾಮ್ರಾಜ್ಯಶಾಹಿ ದೇಶಗಳಿಗೆ 78.1 ಕೋಟಿ ಡಾಲರು ಹರಿದು ಹೋಯಿತು.

ಗೋರ್ಬಚೇವ್‌ರ 'ಸುಧಾರಣೆ' ತರುತ್ತದೆನ್ನಲಾದ ಶಾಂತಿ-ಸುಭಿಕ್ಷ 'ಶಾಂತಿ ಡಿವಿಡೆಂಡ್'. ಇದೇ ಏನು? ಶಾಂತಿ ಡಿವಿಡೆಂಡ್ ಸಿಗಲಿಲ್ಲ, ಬದಲು ಲೂಟಿ ಹೆಚ್ಚಿತು.

ಇನ್ನು ಸಂಘರ್ಷಗಳಾದರೂ ಕಮ್ಮಿಯಾದವೇ? ವಾಸ್ತವವಾಗಿ ಶೀತಲ ಯುದ್ಧ ಮುಗಿದ ನಂತರ ಅಂತರ್ಯುದ್ಧಗಳ ಹೊಸ ಘಟ್ಟವೇ ಶುರುವಾದಂತಿದೆ. ಹಿಂದಿನ ಯುಗೋಸ್ಲಾವಿಯಾವನ್ನು ಆರು ದೇಶಗಳಾಗಿ ಒಡೆದ ಮೇಲೆ ಅವನ್ನು ಮತ್ತಷ್ಟು ಹೋಳು ಮಾಡುವ ಪ್ರಯತ್ನದಲ್ಲಿ ಸಾವಿರಾರು ಜನ ಬಲಿಯಾಗುತ್ತಿದ್ದಾರೆ. ಹಿಂದಿನ ಸೋವಿಯತ್ ಒಕ್ಕೂಟದ ಹಲವು ಭಾಗಗಳು-ಮುಖ್ಯವಾಗಿ ಆರ್ಮೇನಿಯಾ, ಅಝರ್‌ಬೈಜಾನ್, ಚೆಚೆನ್ಯಾ ಇತ್ಯಾದಿ- ಲಕ್ಷಾಂತರ ಜನ ಸಾಯುತ್ತಿರುವುದನ್ನು ನೋಡಬೇಕಾಗಿ ಬಂದಿದೆ. ಅಫಘಾನಿಸ್ತಾನದಲ್ಲಿ ಅಂತರ್ಯುದ್ಧ, ಅರಾಜಕತೆಯೇ ರಾರಾಜಿಸುತ್ತಿದೆ. ಮೊಝಾಂಬಿಕ್, ಸೊಮಾಲಿಯಾ, ಅಂಗೋಲಾ, ಇಥಿಯೋಪಿಯಾ, ರ್‍ವಾಂಡಾ ಇತ್ಯಾದಿ ಹಲವು ಆಫ್ರಿಕಾ ದೇಶಗಳಲ್ಲಿ ಸಾಮ್ರಾಜ್ಯಶಾಹಿ ಪ್ರೇರಿತ ಯುದ್ಧಗಳು ಸಾಗಿವೆ- ಸಾಮ್ರಾಜ್ಯಶಾಹಿ ಪ್ರೇರಿತ ಭಯೋತ್ಪಾದಕತೆ ಭಾರತ ಉಪಖಂಡದಲ್ಲಿ ಮಾತ್ರವಲ್ಲ, ಲ್ಯಾಟಿನ್ ಅಮೇರಿಕಾದಲ್ಲಿ ಸಾವಿರಾರು ಜನಗಳನ್ನು ಬಲಿ ತೆಗೆದುಕೊಳ್ಳುತ್ತಿದೆ. ಬಹುಶಃ ಈ ಅವಧಿಯಲ್ಲಿ ಈ ಎಲ್ಲಾ ಪ್ರಾದೇಶಿಕ ಸಂಘರ್ಷಗಳಲ್ಲಿ ಸತ್ತವರ ಸಂಖ್ಯೆ ಈ ಶತಮಾನದ ಉಳಿದ ಭಾಗದಲ್ಲಿ ಹೀಗೆ ಸತ್ತವರ ಸಂಖ್ಯೆಯನ್ನು ಮೀರಿಸಿರಬೇಕು.

ಮುಂದುವರಿದ ಬಂಡವಾಳಶಾಹಿ ದೇಶಗಳ ದುಡಿಯುವ ಜನರ ಜೀವನ ಪರಿಸ್ಥಿತಿ ಕೂಡಾ ಸುಧಾರಿಸಿಲ್ಲ. ಅಲ್ಲಿಯ ಅರ್ಥಶಾಸ್ತ್ರಜ್ಞರು ಹೇಳುವಂತೆ ಅಲ್ಲೀಗ ಕಾಣುವುದು "ಉದ್ಯೋಗಾವಕಾಶ ಸೃಷ್ಟಿಸದ ಬೆಳವಣಿಗೆ" ಮಾತ್ರ. ಆದ್ದರಿಂದ ನಿರುದ್ಯೋಗ ಹಿಂದೆಂದೂ ಇಲ್ಲದಷ್ಟು ಹೆಚ್ಚಿದೆ. ಏಳು ಅತ್ಯಂತ ಶ್ರೀಮಂತರ ದೇಶಗಳಲ್ಲೇ ನಿರುದ್ಯೋಗಿಗಳ ಸಂಖ್ಯೆ 2.5 ಕೋಟಿ. ಅತ್ತ ಸಮಾಜವಾದಿ ಸವಾಲನ್ನು ಎದುರಿಸಲು ಎರಡನೇ ಮಹಾಯುದ್ಧಾನಂತರ ಈ ದೇಶಗಳಲ್ಲಿ ಜಾರಿಗೆ ತರಲಾದ ಕಲ್ಯಾಣ ಕ್ರಮಗಳನ್ನೆಲ್ಲಾ ಒಂದೊಂದಾಗಿ ಕಳಚಿ ಹಾಕಲಾಗುತ್ತಿದೆ-ಆರೋಗ್ಯ, ಶಿಕ್ಷಣ, ನಿರುದ್ಯೋಗ ಭತ್ಯೆ, ವಸತಿ ಇವೆಲ್ಲವುದರ ಮೇಲಿನ ಖರ್ಚಿನಲ್ಲಿ ತೀವ್ರ ಕಡಿತ ತರುತ್ತಿರುವ ಕಾರಣ ಜರ್ಮನಿಯಲ್ಲಿ 72.5 ಲಕ್ಷ ಜನ ಬಡತನ ರೇಖೆಯ ಕೆಳಗೆ ಬದುಕಬೇಕಾಗಿ ಬಂದಿದೆ. ನ್ಯೂಯಾರ್ಕ್ ಮನೆ-ಮಾರಿಲ್ಲದವರ ಸಮಸ್ಯೆಗಳಿಗೆ ಕುಖ್ಯಾತವಾಗಿದೆ.

ಸಮಾಜವಾದದ ಸುಧಾರಣೆ!

ಒಂದೊಮ್ಮೆ ಇಡೀ ಸಾಮ್ರಾಜ್ಯಶಾಹಿ ಸವಾಲನ್ನು ಎದುರಿಸಿ ನಿಂತಿತು ಸೋವಿಯತ್ ಒಕ್ಕೂಟ. ಗೋರ್ಬಚೇವ್‌ರ ನೇತೃತ್ವದ ಆರು ವರ್ಷಗಳಲ್ಲಿ ಕುಸಿದು ಮಣ್ಣುಗೂಡಿತು. ಪೂರ್ವ ಯುರೋಪಿನಲ್ಲಿ(ರುಮಾನಿಯಾ ಇದಕ್ಕೊಂದು ಅಪವಾದ) ಒಂದೇ ಒಂದು ಗುಂಡು ಹಾರದೆ ಪ್ರತಿಗಾಮಿಗಳು ಅಧಿಕಾರಕ್ಕೇರಿಸಿದರು. ಸಾಮ್ರಾಜ್ಯಶಾಹಿ ಜಗತ್ತು ಇದು ಈ ಜನಗಳ 'ವಿಮೋಚನೆ' ಎಂದು ಸಾರಿತು. ಭವ್ಯ ಭವಿಷ್ಯತ್ತಿನ ಭರವಸೆ ನೀಡಿತು.

ಆದರೆ ಈಗಿನ ವಾಸ್ತವತೆಯೇನು? ಹಸಿವು, ಬಡತನ, ನಿರುದ್ಯೋಗವೆಂದರೇನೆಂದೇ ತಿಳಿಯದ ತಲೆಮಾರಿನ ಜನ ಈಗ ಗೋರ್ಬಚೇವ್ 'ಸುಧಾರಣೆ'ಯಿಂದ ಅವನ್ನೆಲ್ಲಾ ಅನುಭವಿಸಬೇಕಾಗಿ ಬಂತು. ಎರಡನೇ ಮಹಾಯುದ್ಧದಲ್ಲಿ ಅತ್ಯಂತ ಭೀಕರ ಸಮರಗಳು ನಡೆಯುತ್ತಿದ್ದಾಗಲೂ ಹಾಲಿನ ಅಭಾವ ಕಾಣದ ದೇಶದಲ್ಲಿ ಈಗ ತಾಯಂದಿರು ಹಾಲು ನೀಡಿ ಎಂದು ಒತ್ತಾಯಿಸಿ ಮಾಸ್ಕೋದಲ್ಲಿ ಮೆರವಣಿಗೆ ನಡೆಸಬೇಕಾಗಿ ಬಂದಿದೆ. ಹಸುಳೆಗಳ ಸಾವಿನ ದರ, ಒಟ್ಟಾರೆ ಸಾವಿನ ದರ 1917ರ ಕ್ರಾಂತಿಯ ಮೊದಲಿದ್ದ ಮಟ್ಟಕ್ಕೆ ಹೋಗುತ್ತಿದೆ. ಸಮಾಜವಾದ ನವೀಕರಿಸಿ ಬಲಗೊಳ್ಳುವ ಬದಲು ಆದಿ ಕಾಲದ ಬಂಡವಾಳಶಾಹಿ ಹಾಗೂ ಅದರೊಂದಿಗೆ ಇದ್ದ ಕುತ್ಸಿತ ಲೂಟಿ ಮನೋಭಾವವನ್ನು ಜನ ಸಹಿಸಬೇಕಾಗಿ ಬಂದಿದೆ. ಕ್ರಿಮಿನಲ್ ಪ್ರಕರಣಗಳು, ಸಾಮಾಜಿಕ ಅವನತಿಯನ್ನು ಎದುರಿಸಬೇಕಾಗಿ ಬಂದಿದೆ.

ಹೀಗೆ ಸಮಾಜವಾದದ ಪರಿವರ್ತನೆ ಮಾಡಲೆಂದು ಹೊರಟ ಗೋರ್ಬಚೇವ್ ಸಮಾಜವಾದವನ್ನು ಕಳಚಿಹಾಕಿ ಜಗತ್ತನ್ನು ನಕಾರಾತ್ಮಕ ಅರ್ಥದಲ್ಲಿ ಪರಿವರ್ತಿಸುವ ಪಾತ್ರ ವಹಿಸಿದರು; ಎಲ್ಲಾ ಸಾಮ್ರಾಜ್ಯಶಾಹಿ ದೇಶಗಳು ಒಟ್ಟು ಸೇರಿದ್ದರೂ ಈತನಷ್ಟು ದಕ್ಷತೆಯಿಂದ ಅವರು ಈ ಕೆಲಸ ಸಾಧಿಸಲಾಗುತ್ತಿರಲಿಲ್ಲ. ಸಿಪಿಐ(ಎಂ) ಹದಿನಾಲ್ಕನೇ ಮಹಾಧಿವೇಶನ ಆತನ ಈ ಪಾತ್ರವನ್ನೇ ಸಾಮ್ರಾಜ್ಯಶಾಹಿ ಮತ್ತು ಪರಿಷ್ಕರಣಾವಾದದ ನಡುವಿನ ಕಾನೂನುಬಾಹಿರ ಸಂಬಂಧ ಎಂದು ವರ್ಣಿಸಿರುವುದು.

ಇಬ್ಬರು ವ್ಯಕ್ತಿಗಳು
ಲೆನಿನ್ ಮತ್ತು ಗೋರ್ಬಚೇವ್

ಆದರೆ ಇವೆಲ್ಲದಕ್ಕೂ ಒಬ್ಬ ವ್ಯಕ್ತಿಯಷ್ಟೇ ಕಾರಣ ಎನ್ನುವುದು ವೈಜ್ಞಾನಿಕವೇ? ಇತಿಹಾಸ ನಿರ್ಮಿಸುವವರು ಅಥವಾ ನಾಶಗೊಳಿಸುವವರು ಒಬ್ಬೊಬ್ಬ ವ್ಯಕ್ತಿಗಳಲ್ಲ ಎಂದು ಚಾರಿತ್ರಿಕ ಭೌತವಾದ ನಮಗೆ ಕಲಿಸಿದೆ. "ಮನುಷ್ಯರು ತಮ್ಮ ಇತಿಹಾಸವನ್ನು ತಾವೇ ನಿರ್ಮಿಸುತ್ತಾರೆ..... ಆದರೆ ತಾವೇ ಆರಿಸಿದ ಸನ್ನಿವೇಶದಲ್ಲಿ ಅಲ್ಲ ನೇರವಾಗಿ ಎದುರಿಸಬೇಕಾದ ತಮ್ಮೆದುರಿರುವ ಹಾಗೂ ಹಿಂದಿನಿಂದ ಬಂದ ಸನ್ನಿವೇಶದಲ್ಲಿ" ಎಂದಿದ್ದಾರೆ ಮಾರ್ಕ್ಸ್.

ನಿಜ, ವ್ಯಕ್ತಿಗಳಿಗೂ ಇದರಲ್ಲಿ ಪಾತ್ರವಿದೆ-ಸನ್ನಿವೇಶವನ್ನು ವಿಶ್ಲೇಷಿಸುವ, ವೈರುಧ್ಯಗಳ ಚಲನೆಯನ್ನು ಗುರುತಿಸುವ ಹಾಗೂ ಇವದರಲ್ಲಿ ಮಧ್ಯಪ್ರವೇಶಿಸಿ ವರ್ಗ ಹೋರಾಟವನ್ನು ಮುನ್ನಡೆಸಬಲ್ಲ ಒಂದು ಶಕ್ತಿಯನ್ನು ನಿರ್ಮಿಸುವ ಪಾತ್ರ ಅದು. ಲೆನಿನ್ ಈ ರೀತಿ ತಮ್ಮ ಕಾಲದ ವೈರುಧ್ಯಗಳನ್ನು ಚೆನ್ನಾಗಿ ಅರಿತು ಆ ಸನ್ನಿವೇಶದಲ್ಲಿ ಮಧ್ಯಪ್ರವೇಶಿಸಬಲ್ಲ ಒಂದು ಶಕ್ತಿಯಾಗಿ ಬೊಲ್ಶೆವಿಕ್ ಪಕ್ಷವನ್ನು ಕಟ್ಟಿ 1917ರ ಯುಗಾಂತರಕಾರಿ ಪರಿವರ್ತನೆಯನ್ನು ತಂದರು. ತದ್ವಿರುದ್ಧವಾಗಿ ಗೋರ್ಬಚೇವ್ ಎಂಬ ವ್ಯಕ್ತಿ ಸಮಾಜವಾದದ ಮುನ್ನಡೆಗೆ ಬಾಧಕವಾದ ಸಮಸ್ಯೆಗಳನ್ನು ಗುರುತಿಸಿದರೂ ಯಾವ ರೀತಿ ಮಧ್ಯಪ್ರವೇಶಿಸಿದರೆಂದರೆ ಕ್ರಾಂತಿಕಾರಿ ಪಕ್ಷವನ್ನು ಬಲಗೊಳಿಸುವ ಬದಲು ಅದನ್ನು ಕ್ಷೀಣಗೊಳಿಸಿದರು, ಹೋರಾಟವನ್ನು ಮುನ್ನಡೆಸುವ ಬದಲು ಹಿಂದಕ್ಕೆ ತಳ್ಳಿದರು, ಕ್ರಾಂತಿ ವಿರೋಧಿಗಳ ವಿಜಯಕ್ಕೆ ಅವಕಾಶ ಮಾಡಿಕೊಟ್ಟರು. ಆತ ಅಮೋಘ ಸಮಾಜವಾದಿ ಇತಿಹಾಸದ ಅವಹೇಳನ ಮಾಡಿದರು, ಸಮಾಜವಾದದ ಸಮಸ್ಯೆಗಳಿಗೆ ಬಂಡವಾಳಶಾಹಿ ಪರಿಹಾರ ಪ್ರತಿಪಾದಿಸಿದರು. ತನ್ಮೂಲಕ ಸೋವಿಯತ್ ಸಮಾಜವಾದಿ ಗಣತಂತ್ರಗಳ ಒಕ್ಕೂಟದ ವಿಘಟನೆಯ ಕ್ರಿಯೆಯ ಅಧ್ಯಕ್ಷತೆ ವಹಿಸಿದರು.

ಗೋರ್ಬಚೇವ್ ಮತ್ತವರ ಬಳಗ ತಾವಾಗಿಯೇ ಸೈದ್ಧಾಂತಿಕ ಆಕ್ರಮಣ ಆರಂಭಿಸಿ ಸಾಮ್ರಾಜ್ಯಶಾಹಿಗಳು ಮತ್ತೆ ತಮ್ಮ ಹಳೆಯ ಆಕ್ರಮಣಶೀಲತೆಯನ್ನು ನವೀಕರಿಸಿ ಹೊಸ ಉನ್ಮಾದದಿಂದ ಆಕ್ರಮಣ ಮಾಡಲು ಸೂಕ್ತವಾದ ಪರಿಸ್ಥಿತಿಯನ್ನು ನಿರ್ಮಿಸಿದರು ಎಂಬುದನ್ನು ಮರೆಯಲು ಸಾಧ್ಯವಿಲ್ಲ. ಹಲವು ಕಮ್ಯುನಿಸ್ಟ್ ಪಕ್ಷಗಳು ಈ ದಾಳಿಗಳೆದುರು ಬೆನ್ನು ಬಾಗಿಸಿದವು. ಸಮಾಜವಾದ ಸತ್ತಿತು, ಬಂಡವಾಳಶಾಹಿ ಶಾಶ್ವತ ಎಂಬ ವಿಜಯದ ಕೇಕೆ ನಮ್ಮ ಭೂಗೋಳವನ್ನೆಲ್ಲಾ ವ್ಯಾಪಿಸಿತು.

ಸಾಮ್ರಾಜ್ಯಶಾಹಿ ಕನಸು
ನನಸಾಗಿಲ್ಲ

ಆದರೆ ಕೆಲವೇ ವರ್ಷಗಳಲ್ಲಿ 1995ರಲ್ಲಿ ನಾವೀಗ ಏನು ಕಾಣುತ್ತಿದ್ದೇವೆ? 1991ರಲ್ಲಿ ಅಂತರ್‍ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನದಲ್ಲಿದ್ದ ಅಸ್ತವ್ಯಸ್ತತೆ ಕ್ರಮೇಣ ಮಾಯವಾಗುತ್ತಿದೆ. ಮೂರನೇ ಜಗತ್ತಿನ ದೇಶಗಳಿಂದ ಹಿಡಿದು ಮುಂದುವರಿದ ಬಂಡವಾಳಶಾಹಿ ದೇಶಗಳವರೆಗೆ ದಮನಕ್ಕೊಳಗಾದ ಜನ ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ. ಈ ಹೋರಾಟಗಳಿಗೆ ಅಲ್ಲಲ್ಲಿ ಅತ್ಯಂತ ಕಷ್ಟಕರ ಸಂದರ್ಭಗಳಲ್ಲೂ ಯಶಸ್ಸು ದೊರೆಯುತ್ತಿದೆ-ಚುನಾವಣಾ ವಿಜಯದ ರೂಪದಲ್ಲಿ ಅಥವಾ ಬೇರೆ ರೂಪಗಳಲ್ಲಿ. ಉಕ್ರೇನ್, ಬೈಲೋರಶ್ಯಾ, ಅಝರ್‌ಬೈಜಾನ್, ಲ್ಯಾಟ್ವಿಯಾ, ಲಿಥುವೇನಿಯಾಗಳಲ್ಲಿ ಹಂಗರಿ, ಪೋಲೆಂಡ್, ಬಲ್ಗೇರಿಯಾ ಮತ್ತು ಮಂಗೋಲಿಯಾಗಳಲ್ಲಿ ಹಿಂದಿನ ಕಮ್ಯುನಿಸ್ಟರು ಮುನ್ನಡೆ ಸಾಧಿಸುತ್ತಿದ್ದಾರೆ, ಚುನಾವಣಾ ವಿಜಯ ಗಳಿಸುತ್ತಿದ್ದಾರೆ. ರಶ್ಯಾದಲ್ಲಿ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ಮಿತ್ರರು ಮುಂಬರುವ ಚುನಾವಣೆಗಳಲ್ಲಿ ದೊಡ್ಡ ಬಹುಮತ ಗಳಿಸುವರೆಂದು ಅಭಿಪ್ರಾಯ ಸಂಗ್ರಹಣೆಗಳಿಂದ ಕಂಡು ಬರುತ್ತಿದೆ.

ಸಮಾಜವಾದಿ ದೇಶಗಳಾದ ಚೀನಾ, ಕ್ಯೂಬಾ, ವಿಯೆಟ್ನಾಂ ಮತ್ತು ಉತ್ತರ ಕೊರಿಯಾಗಳಲ್ಲಿ ಅಪಾರ ಸಾಮ್ರಾಜ್ಯಶಾಹಿ ಒತ್ತಡಗಳನ್ನು ಎದುರಿಸಿಯೂ ಸಮಾಜವಾದ ತನ್ನನ್ನು ರಕ್ಷಿಸಿಕೊಂಡು ಮುನ್ನಡೆಯುತ್ತಿದೆ.

ಪಶ್ಚಿಮ ಯುರೋಪಿನ ಕಮ್ಯುನಿಸ್ಟ್ ಪಕ್ಷಗಳು, ಅದೇ ರೀತಿ ಲ್ಯಾಟಿನ್ ಅಮೇರಿಕಾ ಮತ್ತು ಆಫ್ರಿಕಾದ ಕಮ್ಯುನಿಸ್ಟ್ ಪಕ್ಷಗಳು ತಮ್ಮ ಚಟುವಟಿಕೆಗಳನ್ನು ಸಂಯೋಜಿಸಿಕೊಳ್ಳುತ್ತಿವೆ.

ಅಂದರೆ ಕಮ್ಯುನಿಸಂ ಅನ್ನು ನಿರ್ನಾಮಗೊಳಿಸುವ ಸಾಮ್ರಾಜ್ಯಶಾಹಿ ಕನಸು ನನಸಾಗಿಲ್ಲ ಎಂಬುದನ್ನು ನಾವೀಗ ಕಾಣುತ್ತಿದ್ದೇವೆ. 1995ರಲ್ಲಿ ವಿಶ್ವದ ಹೋರಾಟ ನಿರತ ಜನ ಒಂದು ಸ್ಪಷ್ಟ ಸಂದೇಶ ನೀಡುತ್ತಿದ್ದಾರೆ. ಹಿಂಜರಿತ, ಸೋಲುಗಳು ಮತ್ತು ಗೋರ್ಬಚೇವ್ ರನ್ನು ಎದುರಿಸಿದರೂ ದಮನಕ್ಕೊಳಗಾದ ಜನ ತಮ್ಮ ಹೋರಾಟವನ್ನು ಮುಂದುವರಿಸುತ್ತಾರೆ; ಈ ಹೋರಾಟದಲ್ಲಿ ಅವರಿಗೆ ದಾರಿ ತೋರುವ ಧ್ರುವತಾರೆ ಮಾರ್ಕ್ಸ್‌ವಾದ-ಲೆನಿನ್‌ವಾದ. ಮಾನವನಿಂದ ಮಾನವ, ಒಂದು ದೇಶದಿಂದ ಇನ್ನೊಂದು ದೇಶದ ಶೋಷಣೆಯನ್ನು ಅಂತ್ಯಗೊಳಿಸುವವರೆಗೂ ಎಲ್ಲಾ ದಮನಗಳನ್ನು ಎದುರಿಸಿ ಹೋರಾಟ ಮುಂದುವರಿಯುತ್ತದೆ.

ರೈತ-ವಿರೋಧಿ ಹೊಸ ಕೃಷಿ ನೀತಿಗೆ ತಿರಸ್ಕಾರ

ಕರ್ನಾಟಕ ಪ್ರಾಂತ ರೈತ ಸಂಘದ 11ನೇ ಸಮ್ಮೇಳನ

ಬಿಜಾಪುರ ಸಮ್ಮೇಳನಕ್ಕೆ ಮುಂಚಿನ ಮೂರು ವರ್ಷಗಳು ಇಡೀ ಭಾರತದ ಜನ ಸಮುದಾಯಕ್ಕೆ ಅದರೊಂದು ವಿಪುಲ ಭಾಗವಾದ ರೈತರಿಗೆ ಸವಾಲೆಸೆದ ವರ್ಷಗಳು.

ಭಾರತ ಸ್ವಾತಂತ್ರ್ಯದ ನಂತರದ 40 ವರ್ಷಗಳ ಬದುಕಿನ ಬವಣೆಯನ್ನು ಪರಿಹರಿಸಿಕೊಳ್ಳುವ ತಹತಹದ ದೀರ್ಘ ಹೋರಾಟದಲ್ಲಿದ್ದ ರೈತ ಸಮುದಾಯಕ್ಕೆ ತಮ್ಮ ಜೀವನದ ಅಡಿಪಾಯವನ್ನೇ ಅಲುಗಾಡಿಸುವಂತಹ ಸವಾಲೆಸೆದ ವರ್ಷಗಳಿವು.

ಈ ಸವಾಲನ್ನು ಹೊಸ ಆರ್ಥಿಕ ನೀತಿಯಬೃಹತ್ ಸವಾಲನ್ನು ಗ್ಯಾಟ್, ಡಂಕೆಲ್, ಐಎಂಎಫ್‌ಗಳ ಗುಲಾಮತನ ಮಾಡುವ ಹೊಸ ಕೃಷಿ ನೀತಿಯ ಸವಾಲನ್ನು ಎದುರಿಸುವಲ್ಲಿ ನಮ್ಮ ಹೋರಾಟ, ಚಟುವಟಿಕೆಗಳು ಇನ್ನು ಬಹಳ ಎತ್ತರಕ್ಕೆ ಏರಬೇಕಾಗಿತ್ತಲ್ಲಾ ನಾವು ಅದನ್ನು ಮಾಡಲಾಗಲಿಲ್ಲವೇ ಎಂಬ ಭಾವನೆಯೊಂದಿಗೆ ಆರಂಭವಾದ 11ನೆ ರೈತ ಸಮ್ಮೇಳನ ನಮ್ಮೆದುರಿನ ಸವಾಲನ್ನು ಎದುರಿಸುತ್ತೇವೆ, ರೈತರನ್ನು ಎಚ್ಚರಿಸಲು ಭೂಹೋರಾಟಗಳನ್ನು, ನೀರಾವರಿಗಾಗಿ, ವಿವಿಧ ಬೆಳೆಗಾರರ ಸಮಸ್ಯೆಗಳ ಪರಿಹಾರಕ್ಕಾಗಿ ಹೂಡುತ್ತೇವೆ. ಅದಕ್ಕೆ ಬೇಕಾದ ಬಲವಾದ ರೈತ ಸಂಘಟನೆಯನ್ನು ಕಟ್ಟುತ್ತೇವೆ ಎಂದು ದೃಢ ಪ್ರತಿಜ್ಞೆ ಮಾಡುವುದರೊಂದಿಗೆಮುಕ್ತಾಯವಾಯಿತು.

ಸಮ್ಮೇಳನ ನವೆಂಬರ್ 6ರ ಸಂಜೆನಡೆದ ರ್‍ಯಾಲಿ ಬಹಿರಂಗ ಸಭೆಯೊಂದಿಗೆ ಉದ್ಘಾಟನೆಯಾಯಿತು. ಮರುದಿನ ಮುಂಜಾನೆ 9.30ಕ್ಕೆ ದ.ಕನ್ನಡ ಜಿಲ್ಲೆಯ ರೈತ ಸಂಘದ ಹಿರಿಯ ಮುಂದಾಳು, ಹಿಂದೆ ರೈತ ಸಂಘ ನಾಯಕತ್ವದ ಮುಂಚೂಣಿಯಲ್ಲಿದ್ದು ಅನಾರೋಗ್ಯದಿಂದ ಹಿಂದಕ್ಕೆ ಸರಿದ, ಈಗ ಮತ್ತೆ ರೈತರ ಸಂಘಟನೆಗಾಗಿ ದುಡಿಯಲು ಮರಳಿ ಬಂದಿರುವ ಶ್ರದ್ಧಾವಂತ ಕಾಂ. ಜನಾರ್ಧನ ನಾಯಕ್‌ರವರುಧ್ವಜಾರೋಹಣಮಾಡಿದರು.

ಕ್ರಾಂತಿಕಾರಿ ಘೋಷಣೆಗಳೊಂದಿಗೆ ಸಮ್ಮೇಳನದ ಕಾಂ. ಪಾಪಣ್ಣ ಸಭಾಂಗಣವನ್ನು ಸೇರಿ ಸಮ್ಮೇಳನ ಆರಂಭವಾಯಿತು. ಪ್ರ.ಕಾರ್ಯದರ್ಶಿ ಕಾಂ. ಸಿ.ಎಸ್. ಬಾಳೆ ಎಲ್ಲರನ್ನು ಸ್ವಾಗತಿಸಿದರು.

ಪ್ರಾಂತ ರೈತ ಸಂಘದ ಕಾರ್ಯದರ್ಶಿಗಳಲ್ಲೊಬ್ಬರಾದ ಕಾಂ. ಮಾರುತಿ ಮಾನ್ಪಡೆ, ಸಮ್ಮೇಳನದ ಮುಂದೆ, ತೆಲಂಗಾಣ ವೀರ ಹೋರಾಟದ ನಾಯಕ ಕಾಂ. ಎಂ. ಬಸವಪುನ್ನಯ್ಯ, ಕೋಲಾರ ರೈತ ಚಳುವಳಿಯ ವೀರ ನಾಯಕ ರಾಜ್ಯಕ್ಕೆಲ್ಲಾ ಮಾದರಿಯಾಗುವಂತೆ ಭೂ ಹೋರಾಟ, ಸಹಕಾರಿ ಚಳುವಳಿಗಳ ಧುರೀಣ ಕಾಂ. ಪಾಪಣ್ಣ, 10ನೆಯ ರಾಜ್ಯ ಸಮ್ಮೇಳನವಾದ ಕೆಲವೇ ತಿಂಗಳಲ್ಲಿ ಆಳಂದ ತಾಲ್ಲೂಕಿನ ರೈತ ಚಳುವಳಿಯ ವ್ಯಾಪಕ ಪ್ರಭಾವದಿಂದ ಕ್ರುದ್ಧರಾದ ಭೂಮಾಲಕರ ಅಟ್ಟಹಾಸಕ್ಕೆ ತುತ್ತಾದ ಕಾಂ. ಮಾಧುರಾಯ್ ಧನ್ನೂರ್ ಮೊದಲಾದ ಅಗಲಿದ ಸಂಗಾತಿಗಳಿಗೆ ಸಂತಾಪ ಸೂಚನೆಯನ್ನು ಮಂಡಿಸಿದರು.

ಕಾಂ. ಬಿನೋಯ್ ಚೌಧುರಿಯವರು ಸಮ್ಮೇಳನದ ಚರ್ಚೆಗೆ ಮಾದರಿಯಾಗುವಂತೆ ಅಖಿಲ ಭಾರತ ಕಿಸಾನ್ ಸಭಾದ ಹಿಂದಿನ ಹಿಸ್ಸಾರ್‌ಮಹಾಧಿವೇಶನದಲ್ಲಿಅಂಗೀಕರಿಸಿದ 22 ಕರ್ತವ್ಯಗಳನ್ನು ನೆನಪಿಸಿದರು. ಒಂದೊಂದಾಗಿ ವಿವರಿಸಿದರು. ತಮ್ಮ ಶ್ರೀಮಂತ ಜೀವನಾನುಭವದ ಬುತ್ತಿಯನ್ನು ಬಿಚ್ಚಿದರು. ಮಾರು ಹೋಯಿತು ಇದೇ ಸಮ್ಮೇಳನ.

ನಂತರ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಬಾಳೆ ವರದಿಯನ್ನು ಮಂಡಿಸಿದರು. ಅದಕ್ಕೆ ಪೂರಕವಾಗಿ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ಕಾಂ.ಜಿ.ಎನ್. ನಾಗರಾಜ್ ಕರ್ನಾಟಕ ಸರಕಾರದ ಹೊಸ ಕೃಷಿ ನೀತಿಯನ್ನು ವಿಶ್ಲೇಷಿಸಿ ಅದು ಕರ್ನಾಟಕದ ರೈತರ ಮೇಲೆ ಬೀರುವ ಪ್ರಭಾವವನ್ನು ಅದಕ್ಕಾಗಿ ರೈತಸಂಘ-ಕೂಲಿಕಾರ ಸಂಘಗಳು ರೂಪಿಸಿರುವ ಪರ್ಯಾಯವನ್ನು ವಿವರಿಸಿದರು.

ಅಂದು ಮಧ್ಯಾಹ್ನ ಊಟದ ಬಿಡುವಿನಲ್ಲಿ ಪ್ರತಿನಿಧಿಗಳು ಜಿಲ್ಲಾವಾರು ಗುಂಪಾಗಿ ವರದಿಯ ಚರ್ಚೆ ನಡೆಸಿದರು. ನಂತರ ಚರ್ಚೆ ಆರಂಭವಾಯಿತು.

188 ಪ್ರತಿನಿಧಿಗಳು ಭಾಗವಹಿಸಿದ್ದ ಸಮ್ಮೇಳನದಲ್ಲಿ ಒಟ್ಟು 4 ಗಂಟೆಗಳಿಗೂ ಹೆಚ್ಚು ಕಾಲ ಚರ್ಚೆ ನಡೆಯಿತು. ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿಯ ಭೂ ಹೋರಾಟದ ಅನುಭವ, ಲಂಬಾಣಿಗಳ ಮೇಲಿನ ಹಲ್ಲೆಯನ್ನು ಕಾಂ. ಭೀಮಶೆಟ್ಟಿ ಎಂಪಳ್ಳಿ ವಿವರಿಸಿದರೆ; ಕೋಲಾರದ ಕಬ್ಬು ಬೆಳೆಗಾರರ ಹೋರಾಟ, ಇಡೀ ಸಮಸ್ಯೆಯ ಬುಡ ಬೇರುಗಳನ್ನು ಕೋಲಾರ ಜಿಲ್ಲೆಯ ಕಾಂ. ಸಿದ್ದಗಂಗಪ್ಪ ಬಿಂಗಡಿಸಿ ವಿವರಿಸಿದರು. ದ.ಕನ್ನಡ ಜಿಲ್ಲೆಯ ಕಾಂ.ಜನಾರ್ಧನ ನಾಯಕ್, ಗುಲ್ಬರ್ಗಾ ಜಿಲ್ಲೆಯ ಜಿ.ಪಂಚಾಯತ್ ಸದಸ್ಯ ಮೇಘರಾಜ್ ಕಠಾರೆ, ಕೋಲಾರ ಜಿಲ್ಲೆಯ ಜಿ.ಪಂಚಾಯತ್ ಸದಸ್ಯ ಸಿ.ಡಿ.ಗಂಗೂಲಪ್ಪ, ರೈತ ಚಳುವಳಿಗೆ ಬಂದ ಹೊಸ ನೀರು ಕಾಂ. ಜಿ.ಸಿ.ಬಯ್ಯಾರೆಡ್ಡಿ, ಬಳ್ಳಾರಿಯಲ್ಲಿ ಹಿಂದೆ ರೈತ ಸಂಘದ ಜಿಲ್ಲಾ ಕಾರ್ಯದರ್ಶಿಯಾಗಿದ್ದು ಮತ್ತೆ ಚಳುವಳಿಗೆ ಮರಳಿಬಂದಿರುವಕಾಂ.ಪಿ.ಆರ್ ವೆಂಕಟೇಶ್, ಗುಲ್ಬರ್ಗಾ ಜಿಲ್ಲೆಯ ಹಳ್ಳೆಪ್ಪ ಹವಾಲ್ದಾರ್, ರಾಯಚೂರು ಜಿಲ್ಲೆಯ ವೀರನಗೌಡ, ಬಿಜಾಪುರದ ಅಣ್ಣಾರಾಯ ಈಳಿಗೇರ, ಸಿದ್ದಣ್ಣ ಐರೋಡಗಿ, ಬೆಂಗಳೂರಿನ ಮಲ್ಲೇಶ್, ಚಂದ್ರ ತೇಜಸ್ವಿ, ಬೀದರಿನ ಸಂಗ್ರಾಮ್, ಮೈಸೂರಿನ ಶಿವಣ್ಣ ಮೊದಲಾದ ಅನೇಕ ಸಂಗಾತಿಗಳು ಚರ್ಚೆಯಲ್ಲಿ ಭಾಗವಹಿಸಿದರು.

ನಿರ್ಣಯ ಸಮಿತಿ ಸಂಚಾಲಕರಾಗಿ ಕಾಂ. ಯು.ಬಸವರಾಜ್, ಅರ್ಹತಾ ಪರಿಶೀಲನಾ ಸಮಿತಿಯ ಸಂಚಾಲಕರಾಗಿ ಕಾಂ. ಲಕ್ಷ್ಮಣ್ಣ ಕಾರ್ಯನಿರ್ವಹಿಸಿದರು.

ಹೊಸ ರಾಜ್ಯ ಸಮಿತಿ ಹಾಗೂ ಅಖಿಲ ಭಾರತ ಸಮ್ಮೇಳನದ ಪ್ರತಿನಿಧಿಗಳು ಆಯ್ಕೆಯಾದ ಮೇಲೆ ಅಧ್ಯಕ್ಷ ಕಾಂ. ರಾಮಚಂದ್ರ ರಾವ್ ಮಾತನಾಡಿದರು ಹಾಗೂ ಹೊಸದಾಗಿ ಆಯ್ಕೆಯಾದ ಅಧ್ಯಕ್ಷ ಮಾರುತಿ ಮಾನ್ಪಡೆಯವರಿಗೆ ಅಧ್ಯಕ್ಷತೆ ವಹಿಸಿಕೊಟ್ಟರು. ಕಾಂ. ಮಾನ್ಪಡೆಯವರ ಅಧ್ಯಕ್ಷತೆಯಲ್ಲಿ ಕಾಂ. ಜಿ.ಎನ್. ನಾಗರಾಜ್ ಸಮಾರೋಪ ಭಾಷಣ ಮಾಡಿದರು.

ಹನ್ನೊಂದನೇ ರಾಜ್ಯ ಸಮ್ಮೇಳನವು 24 ಜನರ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿದ್ದು, ಒಂಬತ್ತು ಜನರ ಪದಾಧಿಕಾರಿಗಳ ಸಮಿತಿಯನ್ನು ಆಯ್ಕೆಮಾಡಿದೆ.

19 ಪ್ರತಿನಿಧಿಗಳನ್ನು ಕಟಕ್‌ನಲ್ಲಿ ನಡೆಯುತ್ತಿರುವ ಅಖಿಲ ಭಾರತ ಕಿಸಾನ್‌ಸಭಾದ 28ನೇ ಸಮ್ಮೇಳನಕ್ಕೆ ಆರಿಸಲಾಗಿದೆ.

ಬಿಜಾಪುರ ಸಮ್ಮೇಳನದ ವಿಶಿಷ್ಟತೆ

ಇತಿಹಾಸ ಪ್ರಸಿದ್ಧವಾದ ವಿಜಾಪುರದಲ್ಲಿ ನಡೆದ ಕರ್ನಾಟಕ ಪ್ರಾಂತ ರೈತ ಸಂಘದ 11ನೇ ರಾಜ್ಯ ಸಮ್ಮೇಳನ ಒಂದು ವೈಶಿಷ್ಟಪೂರ್ಣ ಸಮ್ಮೇಳನ.

1986ರಲ್ಲಿ ನಡೆದ 8ನೇ ರಾಜ್ಯ ಸಮ್ಮೇಳನದಿಂದ ಆರಂಭವಾಗಿ ನಾಲ್ಕುಸಮ್ಮೇಳನಗಳು ಉತ್ತರ ಕರ್ನಾಟಕದ ಅತ್ಯಂತ ಹಿಂದುಳಿದ ನಾಲ್ಕು ಜಿಲ್ಲೆಗಳಲ್ಲಿಯೇ ನಡೆದದ್ದು ರೈತ ಸಂಘದ ಇತಿಹಾಸದಲ್ಲಿಯೇಒಂದುವಿಶಿಷ್ಟತೆ.

8ನೇ ಸಮ್ಮೇಳನ 1986 - ರಾಯಚೂರು
9ನೇ ಸಮ್ಮೇಳನ 1989 - ಬಳ್ಳಾರಿ
10ನೇ ಸಮ್ಮೇಳನ 1992 - ಗುಲ್ಬರ್ಗಾ
11ನೇ ಸಮ್ಮೇಳನ 1995 - ಬಿಜಾಪುರ

ಇವುಗಳಲ್ಲಿ ಮೊದಲ ಮೂರು ಜಿಲ್ಲೆಗಳು ಪಾಳೆಯಗಾರಿ ಭೂಮಾಲಕರ - ದೇಸಾಯಿ, ಸರ್ದೇಸಾಯಿ, ಮುಲ್ಕಿ ಪಾಟೀಲ, ಪೋಲೀಸ್ ಪಾಟೀಲರುಗಳ- ದಬ್ಬಾಳಿಕೆಯಲ್ಲಿ ನಲುಗುತ್ತಿರುವ ರೈತ-ಕೂಲಿಕಾರ ನಿಜಾಂ ಕರ್ನಾಟಕ ಅಥವಾ ಹೈದರಾಬಾದ್ ಕರ್ನಾಟಕಕ್ಕೆ ಸೇರಿದ ಇಡೀ ಕರ್ನಾಟಕದಲ್ಲಿಯೇ ಭೂ ಸುಧಾರಣೆಯ ಪ್ರಗತಿಯಲ್ಲಿ, ಶಿಕ್ಷಣದಲ್ಲಿ ಸಾಕ್ಷರತೆಯಲ್ಲಿ ಅತೀ ಹಿಂದುಳಿದ ಜಿಲ್ಲೆಗಳು ಹಾಗೆಯೇ ಬಿಜಾಪುರವೂ. ಈ ಜಿಲ್ಲೆಗಳಲ್ಲಿ ರೈತ ಸಂಘ ವ್ಯಾಪಕವಾಗಿ ಬೆಳೆಯುತ್ತಿರುವುದನ್ನು ಸೂಚಿಸಿದ್ದು ಈ ಸಮ್ಮೇಳನದ ವೈಶಿಷ್ಟ.

ಬಿಜಾಪುರ ಜಿಲ್ಲೆ ಭೂಮಾಲಿಕತ್ವ ಮತ್ತು ಅದರ ಅಟ್ಟಹಾಸ ಉತ್ತುಂಗದಲ್ಲಿರುವ ಜಿಲ್ಲೆ. ಅಂತಹ ಪರಿಸ್ಥಿತಿಯಲ್ಲಿ ಭೂಮಿಯ ಹೋರಾಟಕ್ಕಾಗಿ ಕಾಳಗದ ಕರೆ ಮೊಳಗಿದ್ದು ಈ ಸಮ್ಮೇಳನದ ವೈಶಿಷ್ಟ.

5 ನದಿಗಳು ತುಂಬಿ ಹರಿದರೂ ಬರಗಾಲದ ಬವಣೆಯಿಂದ ಬಳಲಿ ಬೆಂಡಾದ ರೈತರ ನಾಡು, ನೀರಾವರಿಯಲ್ಲಿ ರಾಜ್ಯದಲ್ಲಿ ಕನಿಷ್ಠ ಸ್ಥಾನದಲ್ಲಿರುವ ಜಿಲ್ಲೆಯಾದ ಬಿಜಾಪುರದಲ್ಲಿ ನೀರಾವರಿಗಾಗಿ ಕರೆ ಮೊಳಗಿದ್ದು ಮತ್ತೊಂದು ವೈಶಿಷ್ಟ.

ನೀರಾವರಿಗಾಗಿ ಹಿಂದೆ ತೀವ್ರ ಹೋರಾಟಗಳು ಸಾಗಿ ಮತ್ತೆ ರೈತ ಸಂಘದಡಿಯಲ್ಲಿ ನೀರಾವರಿ ಸಮಾವೇಶ, ನೀರಾವರಿ ನಿರ್ಮಾಣದಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಯುತ್ತಿರುವ ಬಿಜಾಪುರ ಜಿಲ್ಲೆಯಲ್ಲಿ ಸಮ್ಮೇಳನ ನಡೆದದ್ದು ಇಲ್ಲಿಯ ವೈಶಿಷ್ಟ.

86 ವರ್ಷದ ಕ್ರಾಂತಿಕಾರಿ, ಪಶ್ಚಿಮ ಬಂಗಾಳದ ಭೂ ಸುಧಾರಣೆ ಹಾಗೂ ಯೋಜನಾ ಮಂತ್ರಿ ಕಾಂ.ಬಿನೋಯ್ ಚೌಧುರಿಯವರಿಂದ ಅವರ ಹೋರಾಟ ಜೀವನದ ಅನುಭವದ ನಿಧಿ ಪಡೆದದ್ದು ಈ ಸಮ್ಮೇಳನದ ವೈಶಿಷ್ಟ.

ನಮ್ಮ ನಡುವಿನ 80 ವರ್ಷ ವಯಸ್ಸಿನ ಕ್ರಾಂತಿಕಾರಿ ಕಾಂ.ಎನ್ನೆ ಯುವಕರಿಗೂ ಮಿಗಿಲಾದ ಉತ್ಸಾಹದಿಂದ ತಮ್ಮ ಪತ್ನಿ ಚಂಪಾಬಾಯಿಯವರೊಡಗೂಡಿ ದುಡಿದು ಸ್ಫೂರ್ತಿ ಪಡೆದದ್ದು ಈ ಸಮ್ಮೇಳನದ ವೈಶಿಷ್ಟ.

ಬರಿಗಾಲ ಭೀಮಸಿ ಎಂದು ಪ್ರಸಿದ್ಧರಾದ ಅಣ್ಣಾವ್ರ ಹಳ್ಳಿ ಹಳ್ಳಿ ಜಾಥಾ ಮಾಡಿ ಸಮ್ಮೇಳನದ ಹಿನ್ನೆಲೆಯಲ್ಲಿ ರೈತ ಸಂಘದ ಪ್ರಚಾರ ನಡೆಸಿದ್ದು ಮತ್ತೊಂದು ವೈಶಿಷ್ಟ.



ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿರುವ ಕಾಂ.ಬಿನೋಯ್ ಚೌಧುರಿ. ವೇದಿಕೆಯ ಮೇಲಿರುವ ಇತರರು ಎಡದಿಂದ ಕಾಂ.ಜಿ.ಎನ್.ನಾಗರಾಜ್, ಕಾಂ.ಪಿ.ಜಗನ್ನಾಥ್, ಕಾಂ. ಪಿ.ರಾಮಚಂದ್ರರಾವ್ ಮತ್ತು ಕಾಂ. ಎನ್.ಕೆ.ಉಪಾಧ್ಯಾಯ

ನೂತನ ರಾಜ್ಯ ಕಾರ್ಯಕಾರಿ ಸಮಿತಿ

ಮಾರುತಿ ಮಾನ್ಪಡೆ(ಗುಲ್ಬರ್ಗಾ), ಪಿ.ರಾಮಚಂದ್ರರಾವ್(ರಾಜ್ಯ ಕೇಂದ್ರ), ಭೀಮಸೀ ಕಲಾದಗಿ(ಬಿಜಾಪುರ), ಚಂದ್ರಶೇಖರ ಬಾಳೆ(ರಾಜ್ಯ ಕೇಂದ್ರ), ಕೆ.ಎಂ. ವೆಂಕಟೇಶ್(ಕೋಲಾರ), ಪಿ.ಜಗನ್ನಾಥ್ (ರಾಜ್ಯ ಕೇಂದ್ರ), ಯು.ಬಸವರಾಜ್ (ಬಳ್ಳಾರಿ), ರಾಮಚಂದ್ರ ಉಚ್ಚಿಲ (ದ.ಕ.), ಅಬ್ರಹಾಂ ಕರ್ಕಡ (ದ.ಕ.), ಎನ್. ವೆಂಕಟಾಚಲಯ್ಯ(ಬೆಂಗಳೂರು), ಲಕ್ಷ್ಮಣ್ಣ(ಬೆಂಗಳೂರು), ದಾಸ್ ಭಂಡಾರಿ(ದ.ಕ.), ವಿ.ಪಿ. ಕುಲಕರ್ಣಿ (ಬೆಳಗಾಂ), ಜಿ.ಸಿ.ಬಯ್ಯಾರೆಡ್ಡಿ(ಕೋಲಾರ), ಸಿ.ಡಿ.ಗಂಗೂಲಪ್ಪ (ಕೋಲಾರ), ಸಿದ್ದಗಂಗಪ್ಪಾ (ಕೋಲಾರ), ಚನ್ನಪ್ಪ ಆನೆಗುಂದಿ (ಗುಲ್ಬರ್ಗಾ), ಮೇಘರಾಜ್ ಕಠಾರೆ (ಗುಲ್ಬರ್ಗಾ), ಅಣ್ಣಾರಾಯ ಈಳಿಗೇರಾ (ಬಿಜಾಪುರ), ಸಿದ್ದಣ್ಣಾ ಐರೋಡಗಿ(ಬಿಜಾಪುರ), ಮಲ್ಲಯ್ಯ ಜಾಲಹಳ್ಳಿ (ರಾಯಚೂರು), ವೀರನಗೌಡ(ರಾಯಚೂರು), ಸಂಗ್ರಾಮ್(ಬೀದರ್), ಶಿವಣ್ಣ (ಮೈಸೂರು).

ನಿರ್ಣಯಗಳು

ಅಕ್ರಮ ಭೂಮಿ ಸಕ್ರಮಗೊಳಿಸುವುದು, ರಾಜ್ಯದಲ್ಲಿರುವ ಸರಕಾರಿ ಭೂಮಿಯನ್ನು ಭೂ ರಹಿತರಿಗೆ ಹಂಚುವುದು, ಪ್ರಸ್ತುತ ಭೂ ಸುಧಾರಣಾ ತಿದ್ದುಪಡಿಗಳನ್ನು ರದ್ದುಗೊಳಿಸಿ ಪಶ್ಚಿಮ ಬಂಗಾಳದ ಅನುಭವದ ಆಧಾರದಲ್ಲಿ ಪ್ರಗತಿಪರ ಭೂ ಸುಧಾರಣೆಗಳನ್ನು ತರುವುದು, ರಾಜ್ಯದ ನೀರಾವರಿಯ ಬಗ್ಗೆ ಶ್ವೇತ ಪತ್ರಕ್ಕೆ ಕುರಿತು, ಅರಣ್ಯ ಭೂಮಿಯ ಹೆಸರಲ್ಲಿ ನಡೆಯುವ ಅರಣ್ಯ ಇಲಾಖೆಯ ನೂರಾರು ಕೋಟಿಯ ಲೂಟಿಯನ್ನು ತಡೆಯಲು, ಅರಣ್ಯ ಭೂಮಿಯನ್ನು ಭೂ ರಹಿತರಿಗೆ ಕೊಟ್ಟು ಅರಣ್ಯ ಬೆಳೆಯುವಂತಾಗಲು, ದಲಿತರ ಮೇಲೆ ದೌರ್ಜನ್ಯವನ್ನು ವಿರೋಧಿಸಿ, ಮಾಜೀ ವಾಲೀಕಾರರಿಗೆ ಪೆನ್ಶನ್ ನೀಡುವ ಕುರಿತು, ವಸತಿ ಪ್ರಶ್ನೆಯ ಕುರಿತು, ವಿದ್ಯುತ್ ಸಮಸ್ಯೆಯ ಕುರಿತು, ಹಾನಗಲ್ ಭೂ ಹೋರಾಟಗಾರರ ಮೇಲೆ ಪೋಲೀಸ್ ಕೇಸ್ ಹಾಕಿ ದೌರ್ಜನ್ಯವನ್ನು ವಿರೋಧಿಸಿ, ಹೊಸ ಆರ್ಥಿಕ ನೀತಿಯನ್ನು ವಿರೋದಿಸಿ, ಹೊಸಕೃಷಿ ನೀತಿಯನ್ನು ವಿರೋಧಿಸಿ, ಪರ್ಯಾಯ ಕೃಷಿ ನೀತಿಯನ್ನು ರಾಜ್ಯದಲ್ಲಿ ಅಳವಡಿಸುವ ಕುರಿತು, ಪ್ರಗತಿಪರ ಪಡಿತರ ಪದ್ಧತಿಗಾಗಿ, ಹೊಸ ಸಾಲ ನೀತಿಯನ್ನು ವಿರೋಧಿಸಿ, ಸಹಕಾರಿ ಚಳುವಳಿಯನ್ನು ಬೆಂಬಲಿಸಿ, ವಿಜಾಪುರ, ಬಾಗಲಕೋಟೆ, ನೂಲಿನ ಗಿರಣಿ ಮುಚ್ಚಿ ಸಾಗುವದನ್ನು ವಿರೋಧಿಸಿ, ಕೃಷಿ ಕೂಲಿಕಾರರಿಗೆ ಕನಿಷ್ಟ ಕೂಲಿ ಕಾಯ್ದೆ ಜಾರಿ, ಕೃಷ್ಣಾ ಮೇಲ್ದಂಡೆ ಅಡಿಯಲ್ಲಿರುವ ಗುತ್ತಿಗೆ ಇಂಜಿನಿಯರುಗಳನ್ನು ಖಾಯಂಗೊಳಿಸಲು ಒತ್ತಾಯಿಸಿ, ಗ್ರಾಮೀಣ ಆರೋಗ್ಯ ಕಾಪಾಡಲು ಆಸ್ಪತ್ರೆಗಳನ್ನು ತೆರೆಯಲು, ಕೋಮುವಾದ ವಿರೋಧಿಸಿ, ಕಾ.ವಿ.ಐ.ಲೆನಿನ್ನರ ಹಳೆಯ ಬಡವರ ವೃತ್ತವನ್ನು ಕಾರ್ಯಕರ್ತರು ಅಭ್ಯಸಿಸುವ ಕುರಿತು, ಹೊಸ ಕೃಷಿ ನೀತಿ, ಭೂ ಸುಧಾರಣಾ ತಿದ್ದುಪಡಿಯನ್ನು ವಿರೋಧಿಸಿ, ಮೇಲಿನ ಬೇಡಿಕೆಗಳನ್ನು ಒತ್ತಾಯಿಸಲು, ಪರ್ಯಾಯ ಕೃಷಿ ನೀತಿಯನ್ನು ಜಾರಿಗೊಳಿಸಲು ಒತ್ತಾಯಿಸಿ ಮೂರು ಹಂತದ ಹೋರಾಟಕ್ಕೆ ಕರೆ ನೀಡಿದೆ.

ವೈಯಕ್ತಿಕ ಕ್ರಾಂತಿಕಾರಿ ಹೋರಾಟದಿಂದ ಜನ ಸಮೂಹದ ಸಂಘಟನೆಯೆಡೆಗೆ

ಕಾಂ. ಬಿನೋಯ್ ಚೌಧುರಿ

ಈ ಬಾರಿಯ ರೈತ ಸಮ್ಮೇಳನದ ಉದ್ಘಾಟನಾಕಾರರು ಪಶ್ಚಿಮ ಬಂಗಾಳದ ಭೂ ಸುಧಾರಣಾ ಸಚಿವ ಹಾಗೂ ಅಖಿಲ ಭಾರತ ಕಿಸಾನ್ ಸಭಾದ ಹಿಂದಿನ ಅಧ್ಯಕ್ಷ, ಈಗಿನ ಉಪಾಧ್ಯಕ್ಷ ಕಾಂ. ಬಿನೋಯ್ ಚೌಧುರಿಯವರು.

ಭಗತ್ ಸಿಂಗ್ ಮತ್ತು ಅವರ ಸಹ ಕ್ರಾಂತಿಕಾರಿಗಳ ಪರಿಚಯ ನಮ್ಮೆಲ್ಲರಿಗೂ ಇದೆ. ವೈಯಕ್ತಿಕ ಭೂಗತ ಕ್ರಾಂತಿಕಾರಿ ಹೋರಾಟದ ಹಾದಿಯಿಂದ ಮಾರ್ಕ್ಸ್‌ವಾದದತ್ತ ಒಲಿಯುತ್ತಿದ್ದ ಅವರ ತುಡಿತದ ಬಗ್ಗೆ ಕೂಡ ಕೇಳಿದ್ದೇವೆ.

ಕಾಂ. ಬಿನೋಯ್ ಚೌಧುರಿಯವರು ಅಂತಹ ಕ್ರಾಂತಿಕಾರಿಗಳಾಗಿ "ಯುಗಾಂತರ" ಎಂಬ ಬಂಗಾಲದ ಪ್ರಸಿದ್ಧ ಕ್ರಾಂತಿಕಾರಿ ಗುಂಪಿನಲ್ಲಿ ವಿವೇಕಾನಂದರ ತಮ್ಮ ಭೂಪೇಂದ್ರನಾಥ ದತ್ತರ ನೇತೃತ್ವದಲ್ಲಿ ಭೂಗತ ಕ್ರಾಂತಿಕಾರಿ ಜೀವನ ಆರಂಭಿಸಿ ಮಾರ್ಕ್ಸ್‌ವಾದದ ಕಡೆಗೊಲಿದವರು. ಜನಸಮೂಹದ ಎಚ್ಚರದ ಪ್ರಜ್ಞೆಯ ಸಾಮೂಹಿಕ ಹೋರಾಟವೇ ನಿಜವಾದ ಕ್ರಾಂತಿಯ ದಾರಿ ಎಂದು ಕಂಡುಕೊಂಡು ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದವರು.

ಅಂದಿನ ಪಕ್ಷದ ಆದೇಶದಂತೆ ಪ.ಬಂಗಾಳದ ಅಸ್ಸಾನ್ಸೋಲ್ ಪ್ರದೇಶದ ಗಣಿ ಕಾರ್ಮಿಕರನ್ನು ಸಂಘಟಿಸಲು ದುಡಿದವರು ಅಲ್ಲಿ ಗಿರಿಜನರ ಪ್ರದೇಶದ ನಡುವಿದ್ದ ಕಾರ್ಮಿಕರೊಡನೆ ಅವರಂತೆಯೇ ಬದುಕಿ ಗಣಿ ಕಾರ್ಮಿಕರ ಒಂದು ಪ್ರಬಲ ಹೋರಾಟ ರೂಪಿಸಿದವರು.

ಆರಂಭದ ಕೆಲವು ವರ್ಷಗಳ ಈ ಕಾರ್ಮಿಕ ಸಂಘಟನೆಯ ನಂತರ ರೈತ-ಕೃಷಿ ಕೂಲಿಕಾರರ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಅಸಾನ್‌ಸೋಲ್ ಪ್ರದೇಶದಲ್ಲಿ ರೈತರನ್ನು, ಗಿರಿಜನರನ್ನು ಸಂಘಟಿಸಿದರು.

ಅದಕ್ಕಾಗಿ ಒಬ್ಬ ಬಡ ವಿದ್ಯಾವಂತ ಯುವಕನಂತೆ ವೇಷ ಮರೆಸಿ ಅಲ್ಲಿಯ ಹಳ್ಳಿಗಳ ಬಾಲಕರಿಗೆ ವಿದ್ಯೆ ಕಲಿಸುವ ಕೆಲಸ ಮಾಡುತ್ತಾ ಜೀವನ ಸಾಗಿಸಿ ರೈತರನ್ನು ಸಂಘಟಿಸಿದವರು. ಅಲ್ಲಿಯ ದನಗಾಹಿ ಬಾಲಕರೊಂದಿಗೆ ಕೂಡಾ ಯಾವ ಸಂಕೋಚವಿಲ್ಲದಂತೆ ಬೆರೆತ ಅವರ ಜೀವನ ಪರಿ ನಮಗೆಲ್ಲರಿಗೆ ಮಾದರಿ.

ಮುಂದೆ ಅವರು ಬದ್ವಾನ್ ಜಿಲ್ಲೆಯಲ್ಲಿ ರೈತರನ್ನು ಸಂಘಟಿಸಿದ್ದು, ನೀರಾವರಿಗಾಗಿ, ನೀರಿನ ಕರಗಳನ್ನು ಇಳಿಸಲಿಕ್ಕಾಗಿ ಹೋರಾಟ ಮಾಡಿದ್ದು ಅವರ ಜೀವನದ ಮತ್ತೊಂದು ಅಧ್ಯಾಯ.

ಪ.ಬಂಗಾಳದ ಎಡರಂಗ ಸರಕಾರ 1977ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಇಲ್ಲಿಯವರೆಗೆ ಭೂ ಸುಧಾರಣಾ ಹಾಗೂ ಪಂಚಾಯತ್ ಮಂತ್ರಿಯಾಗಿ 19 ಲಕ್ಷ ಎಕರೆ ಜಮೀನನ್ನು 36 ಲಕ್ಷ ಜನರಿಗೆ ಹಂಚಿದ ಕೆಲಸದ ನೇತೃತ್ವ ಹಿಡಿದ ಕಾಂ. ಬಿನೋಯ್ ದಾ ಬರ್ಗಾದಾರರ ಚಳುವಳಿಯ ಹಾಗೂ ಪಂಚಾಯ್ತಿಗಳ ಅಧಿಕಾರ ವಿಕೇಂದ್ರೀಕರಣದ ರೂವಾರಿ.

ಇವರು ತಮ್ಮ ಅನುಭವದ ಆಳವನ್ನು, ವಿಸ್ತಾರವನ್ನು, ಪ.ಬಂಗಾಳ ಸರಕಾರದ ಸಾಧನೆಗಳನ್ನು ಪ್ರತಿನಿಧಿಗಳಿಗೆ ಬಿಜಾಪುರದ ನಾಗರಿಕರೊಡನೆ ಹಂಚಿಕೊಂಡದ್ದು ಒಂದು ಅಪೂರ್ವ ಅನುಭವ.

ತಮಿಳುನಾಡು ರಾಜಕೀಯ ಎತ್ತ ಸಾಗಿದೆ?

ತಮಿಳುನಾಡಿನಲ್ಲಿ ಡಿಸೆಂಬರ್ ಮೊದಲ ವಾರದಲ್ಲಿ ಪಂಚಾಯತು ಚುನಾವಣೆಗಳು ನಡೆಯಲಿವೆ. ಇದು ಮುಂಬರಲಿರುವ ಲೋಕಸಭಾ ಹಾಗೂ ವಿಧಾನಸಭಾ ಚುನಾವಣೆಗಳ ಬಗ್ಗೆ ಸಂಕೇತವನ್ನು ನೀಡುತ್ತದೆ ಎಂದು ಬಗೆಯಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ತಮಿಳುನಾಡಿನಲ್ಲಿ ಕಳೆದ ಮೂರು ತಿಂಗಳ ಘಟನೆಗಳು ಈ ರಾಜ್ಯದ ರಾಜಕೀಯ ಹಿಡಿದಿರುವ ದಿಕ್ಕಿನ ಬಗ್ಗೆ ಊಹಾ-ಪೋಹಗಳನ್ನು ಎಬ್ಬಿಸಿದೆ.

ಜನಗಳಲ್ಲಿ ಜುಗುಪ್ಸೆ ಮೂಡಿಸಿದ ಘಟನೆಯೆಂದರೆ ಜಯಲಲಿತಾರ ದತ್ತು ಮಗನ ವೈಭವೋಪೇತ ಮದುವೆ, ಅದಕ್ಕೆ ಮಾಡಿದ ನಂಬಲಸಾಧ್ಯವಾದಷ್ಟು ಭಾರೀ ಖರ್ಚು ಹಾಗೂ ಸರಕಾರೀ ಯಂತ್ರದ ಭಾರೀ ದುರುಪಯೋಗ. ಭ್ರಷ್ಟಾಚಾರ ಹಾಗೂ ಸರಕಾರೀ ಮೂಲಗಳ ದುರುಪಯೋಗದಿಂದಲೇ ಸಂಗ್ರಹವಾದ ಹಣ ಇದೆಲ್ಲಾ ಎಂದು ಜನ ಮಾತಾಡಿಕೊಳ್ಳುತ್ತಿದ್ದಾರೆ, ಪತ್ರಿಕೆಗಳು ಹೇಳುತ್ತಿವೆ. ಈಗ ಆದಾಯ ತೆರಿಗೆ ಅಧಿಕಾರಿಗಳು ಈ ಅಪಾರ ಸಂಪತ್ತಿನ ಮೂಲದ ಗಂಭೀರ ಪರೀಕ್ಷೆಯಲ್ಲಿ ತೊಡಗಿದ್ದಾರಂತೆ.

ಇದರ ಬೆನ್ನ ಹಿಂದೆಯೇ ಮುಖ್ಯಮಂತ್ರಿಗಳ ನಿಕಟ ಸಹವರ್ತಿ ಶಶಿಕಲಾರವರ ಕಛೇರಿ ಮತ್ತು ನಿವಾಸದ ಮೇಲೆ ಆದಾಯ ತೆರಿಗೆ, ರೆವಿನ್ಯೂ ಇಲಾಖೆ, ಸಿಬಿಐ ಇತ್ಯಾದಿ ವಿಭಾಗಗಳ ಧಾಳಿ, ಫೆರಾ ಉಲ್ಲಂಘನೆ ಹಾಗೂ ಜಯಲಲಿತಾರ ದತ್ತು ಪುತ್ರನ ಸೋದರನಾದ ಭಾಸ್ಕರನ್ ಮತ್ತು ದಿನಕರನ್ ಬಂಧನ ನಡೆದಿವೆ. ಇವು ಪರೋಕ್ಷವಾಗಿ ಮುಖ್ಯಮಂತ್ರಿಗಳ ವಿರುದ್ಧವೇ ನಿರ್ದೇಶಿತವಾದ ಕ್ರಮಗಳು ಎಂಬುದೊಂದು ಈಗ ಬಹಿರಂಗ ಗುಟ್ಟು.

ಎಐಡಿಎಂಕೆಯ ದಕ್ಷಿಣ ಮದ್ರಾಸ್ ಜಿಲ್ಲೆಯ ಕಾರ್ಯದರ್ಶಿ ಹಾಗೂ ಸರಕಾರಿ ಕಾರ್ಪೋರೇಶನ್ ಒಂದರ ಅಧ್ಯಕ್ಷ ಆದಿ ರಾಜಾರಾಂ ವಿರುದ್ಧ ಸಿಬಿಐ ಗಂಭೀರ ಕ್ರಿಮಿನಲ್ ಮೊಕದ್ದಮೆಗಳನ್ನು ಹಾಕಿದೆ. ತಮಿಳುನಾಡು ಸರಕಾರದ ಮೀಸಲಾತಿ ನೀತಿಗೆ ಸಂಬಂಧಪಟ್ಟಂತೆ ಒಂದು ಕೇಸಿನ ಮೇಲೆ ವಾದ ಮಂಡಿಸಲು ದಿಲ್ಲಿಗೆ ಹೊರಟಿದ್ದ ಯುವ ವಕೀಲ ವಿಜಯನ್ ಮೇಲೆ ಹಲ್ಲೆ ಮಾಡಿದ್ದಕ್ಕಾಗಿ ಹಾಕಿರುವ ಈ ಮೊಕದ್ದಮೆ ರಾಜ್ಯ ಸರಕಾರದ ಸಂಪೂರ್ಣ ನಿರ್ಲಕ್ಷದ ಹಾಗೂ ಕ್ರಿಮಿನಲ್ ನಿಲುವಿನ ಒಂದು ದ್ಯೋತಕವಷ್ಟೇ.

ಒಟ್ಟಿನಲ್ಲಿ ಇವೆಲ್ಲಾ ಎಐಡಿಎಂಕೆ ಸರಕಾರದ ಜನವಿರೋಧಿ, ಪ್ರಜಾಪ್ರಭುತ್ವ ವಿರೋಧಿ, ಭ್ರಷ್ಟ ಹಾಗೂ ಕಾನೂನುಬಾಹಿರ ಆಚರಣೆಗಳನ್ನು ಬಯಲಿಗೆಳೆದಿವೆ. ತಮಿಳುನಾಡಿನ ಜನತೆ ಕೇಂದ್ರದ ಕಾಂಗ್ರೆಸರಕಾರ ಹಾಗೂ ರಾಜ್ಯದ ಎಐಡಿಎಂಕೆ ಸರಕಾರದ ಜನವಿರೋಧಿ ಧೋರಣೆಗಳ ಹೊರೆ ಹೊರಬೇಕಾಗಿದೆ.

ರಾಜಕೀಯ ಶಕ್ತಿಗಳ ಮರು ಹೊಂದಾಣಿಕೆ

ಈ ಹಿನ್ನೆಲೆಯಲ್ಲಿ ರಾಜಕೀಯ ಶಕ್ತಿಗಳ ಮರು ಹೊಂದಾಣಿಕೆಗಳು ಮೂಡಿ ಬರುವಂತೆ ಕಾಣುತ್ತಿದೆ. ಆಂತರಿಕವಾಗಿ ಕೂಡಾ ಎಐಡಿಎಂಕೆಯದ್ದು ಪ್ರಜಾಪ್ರಭುತ್ವ-ವಿರೋಧಿ ಸ್ವರೂಪ-ಇದರಿಂದಾಗಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಲ್ಲಿ ಅಸಂತೃಪ್ತಿ ವ್ಯಾಪಕವಾಗಿತ್ತು. ಈಗ ಇವೆಲ್ಲಾ ಬಹಿರಂಗವಾಗಿ ವ್ಯಕ್ತವಾಗುವ ಘಟ್ಟ ತಲುಪಿವೆ. ಎಂ.ಜಿ.ರಾಮಚಂದ್ರನ್‌ರ ನಿಕಟ ಸಹವರ್ತಿಯಾಗಿದ್ದ ಆರ್.ಎಂ.

- ಪಿ.ರಾಮಚಂದ್ರನ್

ವೀರಪ್ಪನ್ ಹಾಗೂ ಜಯಲಲಿತಾರ ಸ್ವೇಚ್ಛಾಚಾರಣೆಯಿಂದಾಗಿ ಹೊರದಬ್ಬಲ್ಪಟ್ಟ ಇತರ ಹಲವು ಮಾಜಿ ಮಂತ್ರಿಗಳು, ಮುಖಂಡರು ಸೇರಿಕೊಂಡು ಈಗ ಹಳೆಯ ಎಂ.ಜಿ.ಆರ್. ಮನ್ರಂ(ವೇದಿಕೆ)ಗಳನ್ನು ಮತ್ತೆ ಆರಂಭಿಸುವ ಪ್ರಯತ್ನದಲ್ಲಿದ್ದಾರೆ. ಹಿಂದೆ ಎಂ.ಜಿ.ಆರ್. ಇನ್ನು ಡಿಎಂಕೆ ಪಕ್ಷದಲ್ಲಿದ್ದಾಗ 1970ರ ದಶಕದಲ್ಲಿ ಈ ಮನ್ರಂಗಳನ್ನು ಆತನ ಪ್ರಭಾವದ ಸಾಧನವಾಗಿ ರಚಿಸಲಾಗಿತ್ತು. ಡಿಎಂಕೆಯಿಂದ ಸಿಡಿದು ಹೋದ ಮೇಲೆ ಎಐಡಿಎಂಕೆ ರಚನೆಯಲ್ಲಿ ಈ ಮನ್ರಂಗಳು ಪ್ರಮುಖ ಪಾತ್ರ ವಹಿಸಿದವು. ನಂತರ ಅವನ್ನು ವಿಸರ್ಜಿಸಲಾಯಿತು. ಈಗ ಇವುಗಳ ಪುನರುತ್ಥಾನ ಎಐಡಿಎಂಕೆಯನ್ನು ಬಹಳಷ್ಟು ದುರ್ಬಲಗೊಳಿಸಬಹುದು.

ಇತ್ತೀಚೆಗೆ ಜನಪ್ರಿಯ ಚಿತ್ರ ನಟ ರಜನಿಕಾಂತ್ ರಾಜಕೀಯ ಪ್ರವೇಶಿಸುವ ನಿರೀಕ್ಷೆ ತಮಿಳುನಾಡಿನ ರಾಜಕೀಯದಲ್ಲೊಂದು ತಿರುಗುಬಿಂದು ಎನ್ನಲಾಗುತ್ತಿದೆ. ಸಾರ್ವಜನಿಕ ರಾಜಕೀಯ ಚಟುವಟಿಕೆಗಳಿಂದ ದೂರವಿದ್ದ ಈತ ಜಯಲಲಿತಾರ ಸರ್ವಾಧಿಕಾರಿ ವರ್ತನೆಯಿಂದ ಬೇಸತ್ತು ರಾಜಕೀಯದಲ್ಲಿ ಸಕ್ರಿಯ ಪಾತ್ರ ವಹಿಸಲು ನಿರ್ಧರಿಸಿರುವುದಾಗಿ ಹೇಳಲಾಗುತ್ತಿದೆ. ತಮಿಳುನಾಡು ಜನತೆ ಜಯಲಲಿತಾರನ್ನು ಮತ್ತೆ ಮುಖ್ಯಮಂತ್ರಿಯಾಗಿ ಆರಿಸಿದರೆ ದೇವರೂ ತಮಿಳುನಾಡನ್ನು ಕಾಪಾಡಲಾರ ಎಂದು ಆತ ಹೇಳಿಕೆಯನ್ನು ನೀಡಿದ ನಂತರ ವೀರಪ್ಪನ್ ನೇತೃತ್ವದ ಎಐಡಿಎಂಕೆ ಗುಂಪು ಆತನೊಡನೆ ಮಾತುಕತೆ ಆರಂಭಿಸಿವೆ. ಕಾಂಗ್ರೆಸ್(ಐ) ಕೂಡಾ ಹಿಂದೆ ಬೀಳಲಿಲ್ಲ. ಇದರ ಪ್ರಯತ್ನಗಳಿಂದಾಗಿ ಇತ್ತೀಚೆಗೆ ರಜನಿಕಾಂತ್-ಪ್ರಧಾನ ಮಂತ್ರಿ ಭೇಟಿ ನಡೆಯಿತು. ಮುಂಬರುವ ಚುನಾವಣೆಗಳಲ್ಲಿ ರಜನಿಕಾಂತ್ ಜಯಲಲಿತಾ ವಿರುದ್ಧ ಕಾಂಗ್ರೆಸ್(ಐ) ಹಾಗೂ ಮನ್ರಂಗಳ ಪರವಾಗಿ ತೀವ್ರ ಪ್ರಚಾರ ನಡೆಸಲು ಒಪ್ಪಿದ್ದಾರಂತೆ. ಇದರ ಉದ್ದೇಶ ತಮಿಳುನಾಡಿನಲ್ಲಿ ಕಾಮರಾಜ್-ಎಂಜಿಆರ್ ಆಳ್ವಿಕೆ ಸ್ಥಾಪಿಸುವುದು ಎಂದು ಹೇಳಲಾಗಿದೆ. ನಿಜ, ಈ ಮೈತ್ರಿ ಕೂಟದಲ್ಲೂ ಸಾಕಷ್ಟು ಸಮಸ್ಯೆಗಳು ಉದ್ಭವಿಸುತ್ತದೆ. ಆದರೆ ಸದ್ಯಕ್ಕಂತೂ ಕಾಂಗ್ರೆಸ್(ಐ)ಗೆ ತಮಿಳುನಾಡಿನಲ್ಲಿ ಚುನಾವಣೆ ಎದುರಿಸಲು ಮಿತ್ರರು ದೊರಕಿದಂತಾಗಿದೆ.

ಮತ್ತೊಮ್ಮೆ ರಾವ್ ಸಮಯಸಾಧಕತನ

ರಾಜ್ಯದಲ್ಲಿ ನರಸಿಂಹರಾಯರು ಕಳೆದ 3 ವರ್ಷಗಳಲ್ಲಿ ಅನುಸರಿಸಿಕೊಂಡು ಬಂದ ಚುನಾವಣಾ ತಂತ್ರ ಸಂಪೂರ್ಣ ಕುಸಿದ ಹಿನ್ನೆಲೆಯಲ್ಲಿ ಈ ರಜನೀಕಾಂತ್-ಮನ್ರಂ ಮೈತ್ರಿ ಏರ್ಪಟ್ಟಿದೆ. ಜಯಲಲಿತಾರ ಎಐಡಿಎಂಕೆಯೊಂದಿಗೆ ಮೈತ್ರಿ ಮುಂದುವರಿಸಲು ತಮಿಳುನಾಡಿನ ಹೆಚ್ಚಿನ ಕಾಂಗ್ರೆಸ್ಸಿಗರ ವಿರೋಧವಿದ್ದರೂ ನರಸಿಂಹರಾಯರು ಅದನ್ನು ಮುಂದುವರಸಲು ಬಹಳ ಆಸಕ್ತಿ ಹೊಂದಿದ್ದರು ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ವಿವಿಧ ರೀತಿಯಲ್ಲಿ ಕಾಂಗ್ರೆಸ್‌ಗಳ ಪ್ರತಿರೋಧವನ್ನು ಬದಿಗೊತ್ತಬಹುದು ಎಂದು ಅವರು ಲೆಕ್ಕ ಹಾಕಿದ್ದರು. ಈಗಲೂ ಕೂಡಾ ಹಿರಿಯ ಕಾಂಗ್ರೆಸ್ ಮುಖಂಡ ಸೀತಾರಾಂ ಕೇಸರಿ ಹಾಗೂ ಕೇಂದ್ರ ಮಂತ್ರಿ ತಂಗಬಾಲು ಈ ದಿಕ್ಕಿನಲ್ಲಿ ಭಾರೀ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಜನಪ್ರಿಯ ತಾರೆ ರಜನಿಕಾಂತ್ ನರಸಿಂಹರಾಯರನ್ನು ಉಳಿಸಲು ಬರುವ ಲಕ್ಷಣಗಳಿರುವುದರಿಂದ ಜಯಲಲಿತಾರಿಗೆ ಕೈಕೊಡಲು ನಿರ್ಧರಿಸಲಾಗಿದೆ. ನರಸಿಂಹರಾಯರ ಪಕ್ಕಾ ಸಮಯ

ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಒದಗಿಸ
ಅಮೇರಿಕ
ಮೊಣಕಾ
ನರಸಿಂಹರಾವ್ ಸ
ಕಟಕಟೆಗೆ ಎಳೆದು

ಆಮೇರಿಕಾದೊಡನೆ ನಿಕಟ ಸಂಬಂಧ ಬೆಳೆಸಬೇಕೆಂದು ವಾದಿಸುವವರು ಮತ್ತೊಮ್ಮೆ ಗಲಿಬಿಲಿಗೊಳ್ಳುವಂತಾಗಿದೆ. ಶಸ್ತ್ರಾಸ್ತ್ರ ಪೂರೈಕೆಗೆ ತಡೆ ಹಾಕಿದ್ದ ಅಮೇರಿಕಾದ ಸಂಸತ್ತಿನ ಪ್ರೆಸ್ಲರ್ ತಿದ್ದುಪಡಿಯಿಂದ ಪಾಕಿಸ್ತಾನಕ್ಕೆ "ಈಗೊಂದು ಬಾರಿ" ವಿನಾಯ್ತಿ ನೀಡುವ ಬ್ರೌನ್ ತಿದ್ದುಪಡಿ ಅಂಗೀಕಾರವಾಗಿದೆ. ಅಮೇರಿಕಾ ಹೀಗೆ ಮತ್ತೆ ಮತ್ತೆ ತನ್ನ ಬೆಂಬಲಿಗರನ್ನು ಇಕ್ಕಟ್ಟಿಗೆ ಏಕೆ ಸಿಕ್ಕಿಸುತ್ತದೆ? ಭಾರತ ಒಂದು ಆರ್ಥಿಕ ಶಕ್ತಿಯಾಗಿ, ಮಿಲಿಟರಿ ಶಕ್ತಿಯಾಗಿ ಸ್ವತಂತ್ರ ಸಾಮರ್ಥ್ಯ ಬೆಳೆಸಿಕೊಳ್ಳಬಾರದೆಂಬುದೇ ಅಮೇರಿಕಾದ ಮೂಲ ಆಶಯ ಎನ್ನುತ್ತಾರೆ ಇತ್ತೀಚಿನ ಈ ಬೆಳವಣಿಗೆಯನ್ನು ವಿಶ್ಲೇಷಿಸಿರುವ ಕಾಂ. ಪ್ರಕಾಶ್ ಕಾರಟ್. ಇಂತಹ ಒಂದು ದೇಶದ ಆಡಳಿತದೆದುರು ಶರಣಾಗಿ ನರಸಿಂಹರಾವ್ ಸರಕಾರ ದೇಶವನ್ನು ತೀವ್ರ ಅಪಾಯದ ಕಂದರದತ್ತ ತಳ್ಳುತ್ತಿದೆ. ಜನತೆ ಇದನ್ನು ಪ್ರತಿಭಟಿಸಬೇಕು.

ಕ್ಲಿಂಟನ್ ಆಡಳಿತ ತನ್ನ ಸಾಮರಿಕ ತಂತ್ರಗಳನ್ನು ಈಡೇರಿಸಿಕೊಳ್ಳಲು ಪಾಕಿಸ್ತಾನವನ್ನು ಒಂದು ಪ್ರಮುಖ ನೆಲೆಯಾಗಿ ಮಾಡಿಕೊಳ್ಳುವ ದೃಢ ನಿರ್ಧಾರ ಮಾಡಿದೆ. ಇತ್ತೀಚೆಗೆ ಅಮೇರಿಕನ್ ಸಂಸತ್ತು 37 ಕೋಟಿ ಡಾಲರುಗಳ ಶಸ್ತ್ರಾಸ್ತ್ರಗಳನ್ನು ಪಾಕಿಸ್ತಾನಕ್ಕೆ ಒದಗಿಸಲು ಅನುವು ಮಾಡಿಕೊಳ್ಳಲು ತಾನೇ ಅಂಗೀಕರಿಸಿದ ಪ್ರೆಸ್ಲರ್ ತಿದ್ದುಪಡಿಯಿಂದ ಪಾಕಿಸ್ತಾನಕ್ಕೆ ವಿನಾಯ್ತಿ ನೀಡಿರುವುದು ಇದಕ್ಕೆ ಸಾಕ್ಷಿ. ಭಾರತದ ಮೇಲೆ ಇದರ ದುಷ್ಪರಿಣಾಮಗಳು ಬಹಳ. ಸೋವಿಯತ್ ಒಕ್ಕೂಟ ಇಲ್ಲವಾದ ನಂತರದ ಅವಧಿಯಲ್ಲಿ ದಕ್ಷಿಣ ಏಶ್ಯಾ ಪ್ರದೇಶದಲ್ಲಿ ಅಮೇರಿಕನ್ ಕಾರ್ಯತಂತ್ರದಲ್ಲಿ ಭಾರತ ಹೆಚ್ಚಿನ ಅನುಕೂಲ ಪಡೆಯುವ ದೇಶವಾಗಲಿದೆ ಎಂದು ವಾದ ಮಾಡುತ್ತಿದ್ದವರಿಗೂ ಈಗ ಈ ಸುದ್ದಿಯಿಂದ ಆಘಾತವಾಗಿದೆ. ಸೋವಿಯತ್ ಬೆದರಿಕೆ ಮಾಯವಾಗಿ, ಅಫಘಾನಿಸ್ತಾನದಲ್ಲಿ ನಜೀಬ್ ಸರಕಾರವನ್ನು ಇಳಿಸಿದ ಮೇಲೆ ಅಮೇರಿಕಾಕ್ಕೆ ಪಾಕಿಸ್ತಾನದ ಅಗತ್ಯ ಗಮನಾರ್ಹವಾಗಿ ಕಮ್ಮಿಯಾಗಿದೆ ಎಂದು ಭಾರತದಲ್ಲಿನ ಅಮೇರಿಕಾ-ಪರ ವಕೀಲಿ ಮಾಡುವವರು ವಾದಿಸುತ್ತಿದ್ದರು. ಭಾರತ ಮೊದಲ ಹೆಜ್ಜೆ ಇಟ್ಟರೆ ಭಾರತ ಒಂದು ಪ್ರಾದೇಶಿಕ ಶಕ್ತಿ ಎಂದು ಅಮೇರಿಕಾದಿಂದ ಅಧೃತ ಪಡೆಯಲು ಸಾಧ್ಯ, ಅದಕ್ಕಾಗಿ ಅಮೇರಿಕಾದೊಂದಿಗೆ ಆರ್ಥಿಕ, ರಾಜಕೀಯ ಮಿಲಿಟರಿ ಇತ್ಯಾದಿ ಸರ್ವತೋಮುಖ ಸಂಬಂಧಗಳನ್ನು ಬೆಸೆಯಲು ಮುಂದಾಗಬೇಕು ಎಂದು ಈ ಗುಂಪಿನ ವಾದ. ಉದಾರೀಕರಣದ ಪ್ರತಿಪಾದಕರೂ ಇದೇ ವಿಚಾರಧಾರೆಯನ್ನು ಬೆಂಬಲಿಸುವವರು. ಇದಕ್ಕೆ ಅವರು ಭಾರತ ಆರ್ಥಿಕದಲ್ಲಿ ಹಾಗೂ ಮಾರುಕಟ್ಟೆಯಲ್ಲಿ ಅಮೇರಿಕಾದ ಹಿತಾಸಕ್ತಿಗಳು ಹೆಚ್ಚುತ್ತಿದೆ ಎಂದು ಬೊಟ್ಟು ಮಾಡಿ ತೋರುತ್ತಾರೆ.

ಅಸಮಾನ ಸಂಬಂಧ

ನರಸಿಂಹರಾವ್ ಸರಕಾರ ಮತ್ತು ಕಾಂಗ್ರೆಸ್ ಪಕ್ಷವಂತೂ ಈ ವಾದವನ್ನು ಮುಂದಿಡುತ್ತಾ ಬಂದಿದೆ. ಅವರಷ್ಟೇ ಅಲ್ಲ, ಆಳುವ ವರ್ಗಗಳ ಇನ್ನೂ ಹಲವಾರು ವಿಭಾಗಗಳು ಈ ವಾದ ಹೂಡುತ್ತಿವೆ. ಭಾರತದ ಆರ್ಥಿಕವನ್ನು ಅಮೇರಿಕಾದ ಬಹುರಾಷ್ಟ್ರೀಯ ಕಂಪೆನಿಗಳಿಗೆ, ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ತೆರೆದಿಟ್ಟ ನಂತರ ಭಾರತ-ಅಮೇರಿಕಾ ಬಾಂಧವ್ಯದಲ್ಲಿ ಹೊಸದೊಂದು ಸಂಬಂಧ ಮೂಡಿ ಬಂದಿದೆ. ಆದರೆ ಇದೊಂದು ಅಸಮಾನ ಸಂಬಂಧ, ಭಾರತದ ಸಾರ್ವಭೌಮತೆಗೆ, ರಕ್ಷಣಾ ಹಿತಾಸಕ್ತಿಗಳ ಮೇಲೆ ಸರ್ವತೋಮುಖ ಅಮೇರಿಕನ್ ಒತ್ತಡ ಹೆಚ್ಚುತ್ತಿರುವ ಒಂದು ಸಂಬಂಧ.

ಅತ್ತ ಉದಾರೀಕರಣದೊಂದಿಗೆ ಭಾರತದ ಆರ್ಥಿಕ ನೀತಿ ನಿರ್ಧಾರಣೆಯಲ್ಲಿ ಅಮೇರಿಕಾದ ಪ್ರಭಾವ ಹೆಚ್ಚುತ್ತಿದ್ದಂತೆ ಇತ್ತ ನರಸಿಂಹರಾವ್ ಸರಕಾರ ಒಂದಾದ ಮೇಲೊಂದರಂತೆ ಹಲವು ಪ್ರಶ್ನೆಗಳ ಮೇಲೆ ಅಮೇರಿಕನ್ ಒತ್ತಡಗಳಿಗೆ ಮಣಿಯುತ್ತಿರುವುದನ್ನೂ ಕಾಣಬೇಕಾಗಿ ಬಂದಿದೆ. ಭಾರತದ ಸ್ವತಂತ್ರ ಪರಮಾಣು ಹಾಗೂ ರಕ್ಷಣಾ ತಂತ್ರಜ್ಞಾನವನ್ನು ಮೊಟಕು ಮಾಡಲು ಅಮೇರಿಕಾ ಯೋಜನಾಬದ್ಧವಾಗಿ ಕೆಲಸ ಮಾಡುತ್ತಿದೆ; ಭಾರತದೊಳಗೆ ಹರಿದು ಬರುವ ಮುಂದುವರಿದ ತಂತ್ರಜ್ಞಾನದ ಮೇಲೆ ಹತೋಟಿ ಹೊಂದುವುದು, ಅದೇ ವೇಳೆಗೆ ಸ್ವದೇಶೀ ತಂತ್ರಜ್ಞಾನ ಸಾಮರ್ಥ್ಯ ಬೆಳೆಯದಂತೆ ನೋಡಿಕೊಳ್ಳುವುದು, ಈ ಮೂಲಕ ಈ ಕ್ಷೇತ್ರದಲ್ಲಿ ಸಾಮ್ರಾಜ್ಯಶಾಹಿಯ ಗುತ್ತೇದಾರಿಕೆಗೆ ಸವಾಲು ಬರದಂತೆ ಮಾಡುವುದು ಅಮೇರಿಕಾದ ಬಯಕೆ. ಅಮೇರಿಕಾದ ಜಾಗತಿಕ ತಂತ್ರದಲ್ಲಿ ಭಾರತ ದಕ್ಷಿಣ ಏಶ್ಯಾದಲ್ಲಿ ಅದರ ಪಾಲುದಾರನಾಗಬೇಕು ಎಂಬ ಶರತ್ತನ್ನು ಒಪ್ಪಿದರೆ ಮಾತ್ರವೇ ಇಂತಹ ಸಂಬಂಧಗಳು ವಿಸ್ತಾರಗೊಳ್ಳಬಹುದು ಎಂದು ಅಮೇರಿಕನ್ ಆಡಳಿತ ಹೇಳುತ್ತಿದೆ. 1991ರಲ್ಲಿ ಅಮೇರಿಕನ್ ಸೇನಾಧಿಕಾರಿ ಕಿಕ್ ಲೈಟರ್‌ನ ಭೇಟಿಯ ನಂತರ ಭಾರತ ಈ ಗಾಳಕ್ಕೆ ಬಲಿ ಬಿದ್ದು ಭಾರತ-ಅಮೇರಿಕಾ ಮಿಲಿಟರಿ ಸಹಕಾರವೆಂಬ ಹೊಸ ಅಪಾಯಕಾರೀ ರಂಗವನ್ನೂ ಪ್ರವೇಶಿಸಿತು. ಕೊನೆಗ ಇದು ಜನವರಿ 1995ರಲ್ಲಿ ಭಾರತ-ಅಮೇರಿಕಾ ಮಿಲಿಟರಿ ಸಹಕಾರಿ ಒಪ್ಪಂದ ಏರ್ಪಡುವ ಮಟ್ಟದವರೆಗೂ ಹೋಯಿತು.

ಅಮೇರಿಕಾಕ್ಕೆ ಭಾರತ, ಪಾಕಿಸ್ತಾನಗಳೆಂಬ ಕುದುರೆಗಳು!

ಇಷ್ಟೆಲ್ಲಾ ಆಗುವಾಗ ಅಮೇರಿಕಾ-ಪರ ವಾದಿಸುವವರು ನಮ್ಮೆರಡು ದೇಶಗಳ ನಡುವೆ ಸಾಮರಿಕ ಸಹಕಾರದಿಂದ ಹೆಚ್ಚೆಚ್ಚು ಪ್ರಯೋಜನ ಸಿಗಲಿದೆ ಎಂದು ಎತ್ತಿ ತೋರಲು ಪ್ರಯತ್ನಿಸುತ್ತಿದ್ದರು. ಆದರೆ ಅದೇ ವೇಳೆಯಲ್ಲಿ ಅದೇ ರೀತಿಯ ಸಂಬಂಧಗಳನ್ನು ಅಮೇರಿಕಾ ಪಾಕಿಸ್ತಾನದೊಂದಿಗೂ ಬೆಸೆಯುತ್ತಿತ್ತು ಎಂಬುದು ಮಾತ್ರ ಈ ಮಂದಿಯ ಕಣ್ಣಿಗೆ ಕಾಣಲಿಲ್ಲ ಅಥವಾ ಕಂಡರೂ ಅಡಗಿಸಿಟ್ಟಿದ್ದರು. ಅಮೇರಿಕಾದ ಆಂತರಿಕ ವ್ಯವಹಾರಗಳು ಹಾಗೂ ರಕ್ಷಣಾ ವ್ಯವಹಾರಗಳ ಇಲಾಖೆಗಳ ಅಧಿಕಾರಿಗಳು ನವ ದೆಹಲಿಗೆ ಭೇಟಿ ನೀಡಿದಾಗಲೆಲ್ಲಾ ತಪ್ಪದೇ ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ಗೂ ಭೇಟಿ ನೀಡುತ್ತಾ ಬಂದಿದ್ದಾರೆ. ನಮಗೇನು ಕೊಡುತ್ತೇವೆಂದಿದ್ದರೋ ಅವನ್ನೆಲ್ಲಾ ಅವರಿಗೆ ಕೊಡುವುದಾಗಿ ಹೇಳುತ್ತಾ ಬಂದಿದ್ದಾರೆ ಎಂಬುದನ್ನು ಮರೆ ಮಾಚುವಂತಿಲ್ಲ. ಅಮೇರಿಕಾದ ಆಡಳಿತಗಾರರ ಬಯಕೆಯೆಂದರೆ ಭಾರತ ಮತ್ತು ಪಾಕಿಸ್ತಾನ

- ಪ್ರಕಾಶ್ ಕಾರಟ್

ಎರಡನ್ನೂ ತಮ್ಮ ನೊಗಕ್ಕೆ ಕಟ್ಟುವುದು. ಈ ಜೋಡಿ ಕುದುರೆಗಳು ಈ ಇಡೀ ಪ್ರದೇಶದಲ್ಲಿ ಅಮೇರಿಕಾದ ರಥ ಎಳೆಯುವಂತಾಗಬೇಕು ಎಂದು ಅವರ ಲೆಕ್ಕಾಚಾರ.

ರಿಂದ ಈಗ ಮತ್ತೊಮ್ಮೆ ... ಯಲಲಿತಾ ಕೂಡಾ ... ರಿಗೆ ಕಳೆದ ಮೂರು ವರ್ಷ ... ಬಚ್ಚಾಲೆಯಾಡುತ್ತಿದ್ದಾರೆ. ... , ಸಮಜಾಯಿಷಿ ಇತ್ಯಾ ... ಕಾಂಗ್ರೆಸ್-ಎಐಡಿಎಂಕೆ ... ರಿಸುವಂತೆ ಮಾಡಿದರು. ... ಸಮು ... ಬಿಜೆಪಿಯೊಂ ... ತಿಸಿದರು. ನಂತರ ರಾಷ್ಟ್ರೀ ... ಖಂಡರು ಆಕೆಯನ್ನು ರಂಗ ... ಪ್ರಯತ್ನ ಆರಂಭಿಸಿದಾಗ ... ವಂತೆ ... ಡರು: ... ತನ್ನನ್ನು ... ಆಕೆಯ ... ಗಿತ್ತು. ... ಸಿಪಿಐ ... ಬೆದ ... ಂಗ್ರೆಸ್ ... ತಿಳು ... ನರ ... ಮೇಲೆ ... ತ್ತಿದ್ದರು. ಆದರೆ ರಜನಿ ... ದಾಗಿ ಆ ಸಾಧ್ಯತೆ ಮಬ್ಬಾ ... ಸರಕಾರದ ಸಂಪೂರ್ಣ ... ದಿಂದ ರಾಶಿ ಹಾಕಿದ ... ದ ಹಣದ ಸಹಾಯ ... ಗಿ ಚುನಾವಣೆ ಎದುರಿ ... ಹಾಕುತ್ತಿದ್ದಾರೆ. ನಿಜ, ... ಯೂನಿಯನ್ ಮುಸ್ಲಿಂ ... ಚಿಕ್ಕ ಪಕ್ಷಗಳನ್ನು ಜತೆಗೆ ... ದು. ... ಪ್ರತಿರೋಧ ... ರಂಗದ ಮುಖಂಡರ ... ತನಗೆಷ್ಟೊಂದು ಪ್ರಭಾ

ವವಿದೆಯೆಂದು ಆಕೆ ಜಂಭಕೊಚ್ಚಿಕೊಂಡರೂ ಈಗ ಆಕೆಗೆ ರಾಷ್ಟ್ರೀಯರಂಗ ಸೇರುವ ಉತ್ಸಾಹ ತೋರುತ್ತಿಲ್ಲ. ಆಕೆಯ ಪ್ರಕಾರ ರಾಜ್ಯದಲ್ಲಿ ಬೆಳೆಯುತ್ತಿರುವ ಶಕ್ತಿಯಾದ ಸಿಪಿಐ(ಎಂ) ರಾಜ್ಯಮಟ್ಟದಲ್ಲಿ ತನ್ನೊಂದಿಗೆ ಮೈತ್ರಿಗೆ ಒಪ್ಪಿದರೆ ಮಾತ್ರ ತಾನು ರಾಷ್ಟ್ರೀಯ ರಂಗ ಸೇರುವುದಕ್ಕೆ ಏನಾದರೂ ಅರ್ಥವಿದೆ ಎಂದು ಆಕೆ ರಾಷ್ಟ್ರೀಯ ರಂಗ ನಾಯಕರಿಗೆ ಹೇಳಿರುವುದಾಗಿ ವರದಿಯಾಗಿದೆ. ಏಕೆಂದರೆ ರಾಷ್ಟ್ರೀಯರಂಗದ ಪಕ್ಷಗಳ ಪ್ರಭಾವ ರಾಜ್ಯದಲ್ಲಿ ಕಡಿಮೆ.

ನೆರೆರಾಜ್ಯ ತಮಿಳುನಾಡಿನ ಪ್ರಸ್ತುತ ರಾಜಕೀಯ ಸನ್ನಿವೇಶದ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಪಿ.ರಾಮಚಂದ್ರನ್‌ರವರ ವಿಶ್ಲೇಷಣೆ.

ಸಿಪಿಐ(ಎಂ)ನ ದೃಢ ಘೋಷಣೆಯಿಂದಾಗಿ ಆಕೆ ಸಂಪೂರ್ಣ ಹತಾಶರಾಗಿದ್ದಾರೆ. ಕುತೂಹಲದ ಸಂಗತಿಯೆಂದರೆ ಜನತಾದಳದ ರಾಜ್ಯ ಮುಖಂಡರಲ್ಲಿ ಈಗ ಆಕೆಯನ್ನು ರಾಷ್ಟ್ರೀಯರಂಗಕ್ಕೆ ಸೇರಿಸಿಕೊಳ್ಳುವ ಬಗ್ಗೆ ಪ್ರತಿರೋಧ ಹೆಚ್ಚುತ್ತಿದೆ. ಸಿಪಿಐ(ಎಂ) ಮತ್ತು ಎಂಡಿಎಂಕೆ ಮೈತ್ರಿ ಬೆಳೆಸಬೇಕೆಂದು ಬಹಳಷ್ಟು ರಾಜ್ಯ ಜನತಾದಳದ ಮುಖಂಡರು ಬಯಸುತ್ತಿರುವಾಗ ಜನತಾದಳದ ರಾಷ್ಟ್ರೀಯ ಮುಖಂಡರು ಹೇಗೆ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ ಎಂದು ಕಾದು ನೋಡಬೇಕು.

ಡಿಎಂಕೆ ರಂಗ

ಕರುಣಾನಿಧಿ ನೇತೃತ್ವದ ಡಿಎಂಕೆ ಪಂಚಾಯುತು ಚುನಾವಣೆಗಳಲ್ಲಂತೂ ಏಳು ಪಕ್ಷಗಳ ಮೈತ್ರಿಕೂಟ ರಚಿಸಿಕೊಂಡಿದೆ. ಪಿಎಂಕೆ, ಪಿ.ರಾಮಮೂರ್ತಿ ನೇತೃತ್ವದ ಕಾಂಗ್ರೆಸ್ ಗುಂಪು, ಸಿಪಿಐ, ಇಂಡಿಯನ್ ಮುಸ್ಲಿಂ ಲೀಗ್ ಮುಂತಾದ ಪಕ್ಷಗಳು ಈ ರಂಗದಲ್ಲಿವೆ. ಕಳೆದ ಮೂರು ವರ್ಷಗಳಲ್ಲಿ ಕರುಣಾನಿಧಿ ಕಾಂಗ್ರೆಸ್‌ನೊಂದಿಗೆ ಮೈತ್ರಿ ಬೆಳೆಸಲು ನೇರ-ಪರೋಕ್ಷ ಪ್ರಯತ್ನ ನಡೆಸಿಯೇ ನಡೆಸಿದರು. ಕೇಂದ್ರ ರಾಜ್ಯ ಸರಕಾರಗಳೆರಡರ ವಿರುದ್ಧವೂ ಜಂಟಿ ಕಾರ್ಯಾಚರಣೆ ನಡೆಸುವ ಸಿಪಿಐ(ಎಂ) ಸಲಹೆಯನ್ನು ತಿರಸ್ಕರಿಸಿದರು. ಅವರೀಗ ಸಿಪಿಐ(ಎಂ) ಮತ್ತು ಎಂಡಿಎಂಕೆ ವಿರುದ್ಧ ದ್ವೇಷ ಕಾರುತ್ತಿದ್ದಾರೆ. ಆದರೆ ಈಗ ರಜನಿಕಾಂತ್-ಆರ್.ಎಂ. ವೀರಪ್ಪನ್ ಅಂಶ ಮೂಡಿ ಬಂದ ಮೇಲೆ ಕಾಂಗ್ರೆಸ್(ಐ) ಇಲ್ಲದ ರಂಗ ಕಟ್ಟಿಕೊಂಡಿದ್ದಾರೆ. ಆದರೆ ಈಗಲೂ ಸಿಪಿಐ(ಎಂ) ಮತ್ತು ಪಶ್ಚಿಮ ಬಂಗಾಳದ ಎಡ ಸರಕಾರದ ವಿರುದ್ಧ ಅವರು ವಿಷ ಕಾರುವುದು ನಿಂತಿಲ್ಲ.

ಈ ರಂಗದೊಳಗೂ ಕೆಲವು ಗಂಭೀರ ಸಮಸ್ಯೆಗಳೆದ್ದಿವೆ. ಪಿ.ರಾಮಮೂರ್ತಿ ಈ ಮೈತ್ರಿ ಕೇವಲ ಪಂಚಾಯತು ಚುನಾವಣೆಯಲ್ಲಿನ ಚುನಾವಣಾ ಮೈತ್ರಿಯೆಂದಷ್ಟೇ ಹೇಳಿದ್ದಾರೆ. ಈ ಗುಂಪಿನ ಕೆಲವು ಪ್ರಮುಖ ಮುಖಂಡರು ರಾಮಮೂರ್ತಿಯವರ ಈ ರಾಜಕೀಯ ವ್ಯವಹಾರಕ್ಕೂ ತಮಗೂ ಸಂಬಂಧವಿಲ್ಲವೆಂದು ಹೇಳುತ್ತಿದ್ದಾರೆ.


ಒಂದು ನೈಜ ಶಕ್ತಿ

ಇಂತಹ ಸನ್ನಿವೇಶದಲ್ಲಿ ಕೇಂದ್ರ-ರಾಜ್ಯ

ಪುಟ 8 ನೋಡಿ

ರೂಪಾಯಿಗೆ ಹತ್ತಿದ ಬೆಂಕಿ

ರೂಪಾಯಿಗೆ ಬಂದಿರುವ ಪರಿಸ್ಥಿತಿ ಉದಾರೀಕರಣದ ಪರಿಣಾಮದ ಸ್ಯಾಂಪಲು ಮಾತ್ರ ಎನ್ನಬಹುದು. ರೂಪಾಯಿಯ ಪೂರ್ಣ ಪರಿವರ್ತನೆ ಬಂದರೂ ಅದು ಡಾಲರಿನೆದುರು ಸ್ಥಿರವಾಗಿದೆ. ನಮ್ಮ ವಿದೇಶೀ ವಿನಿಮಯ ಶಿಲ್ಕು ಸಾಕಷ್ಟಿದೆ. ಆದ್ದರಿಂದ ಯಾವುದೇತರಹದ ಪರಿಸ್ಥಿತಿಯನ್ನೂ ಹತೋಟಿಗೆ ತರಬಲ್ಲೆವು ಎಂದು ನರಸಿಂಹರಾಯರ ಸರ್ಕಾರ ಮತ್ತು ಉದಾರೀಕರಣವಾದಿಗಳು ಹೇಳುತ್ತಲೇ ಬಂದಿದ್ದರು, ಓದುವವರಿಗೆ ಮತ್ತು ಕೇಳುವವರಿಗೆ ಇದು ನಿಜವೇನೊ ಎನಿಸತೊಡಗಿತ್ತು. ಉದಾರೀಕರಣದ ಟೀಕೆ ಮಾಡುವವರು ಸುಮ್ಮನೆ ಬೊಬ್ಬೆ ಹಾಕುತ್ತಿದ್ದಾರೆ ಅದಕ್ಕೆ ಅರ್ಥವಿಲ್ಲ ಎಂಬಂತಹ ಭಾವನೆ ನಮ್ಮ ಸುಶಿಕ್ಷಿತ ಮಧ್ಯಮ ವರ್ಗದವರಲ್ಲಂತೂ ಸ್ಪಷ್ಟವಾಗಿ ಕಾಣುತ್ತಿತ್ತು.



ನರಸಿಂಹರಾವ್ ಸರಕಾರದ 53ನೇ ತಿಂಗಳಲ್ಲಿ

ಒಮ್ಮೇಲೆ ರೂಪಾಯಿ ಡಾಲರಿಗೆದುರು ಕುಸಿಯತೊಡಗಿತು, ಬೇರೆ ದಾರಿಯಿಲ್ಲದೇ ಭಾರತೀಯ ರಿಸರ್ವ್ ಬ್ಯಾಂಕ್ ದೊಡ್ಡ ಪ್ರಮಾಣದಲ್ಲಿ ಮಧ್ಯಪ್ರವೇಶಮಾಡಿತು. ಆದರೂ ರೂಪಾಯಿ ಕುಸಿಯುತ್ತಲೇ ಇತ್ತು. ಈ ಕುಸಿತದ ಪ್ರಮಾಣ, ಅದರ ಗತಿ ಹೇಗಿತ್ತೆಂದರೆ ಭಾರತೀಯ ರಿಸರ್ವ್ ಬ್ಯಾಂಕೇ ಕಂಗಾಲಾಗಿ ಹೋಯಿತು. ಮೊದಲು ಈ ಕುಸಿತ ಪ್ರಾರಂಭವಾದಾಗ ಹೌದು ರೂಪಾಯಿಯ ಬೆಲೆಯಲ್ಲಿ ಇಂತಹ ಏರಿಳಿತವಾಗುವುದು ಸಹಜವೇ ಆ ಮೂಲಕವೇ ರೂಪಾಯಿಯ ನಿಜಬೆಲೆಯ ಅರಿವಾಗುವುದು, ಮಾರುಕಟ್ಟೆ ನಿರ್ಧಾರಿತ ಬೆಲೆ ನಿಜವಾದ ಬೆಲೆ ಆದ್ದಿರಂದ ಈ ಬಗ್ಗೆ ಆತಂಕ ಪಡಬೇಕಾಗಿಲ್ಲ ಎಂದೆಲ್ಲಾ ಧೈರ್ಯದ ಮಾತಾಡಿದವರೂ ಹೆದರತೊಡಗಿದರು.

ಭಾರತೀಯ ರಿಜರ್ವ್ ಬ್ಯಾಂಕ್ ಈಗ ಯುದ್ಧೋಪಾದಿಯಲ್ಲಿ ತನ್ನ ಕಾರ್ಯಾಚರಣೆ ಪ್ರಾರಂಭಿಸಿತು. ಮಾರುಕಟ್ಟೆಯಲ್ಲಿ ಅದು ಡಾಲರನ್ನು ಮಾರಿ ರೂಪಾಯಿಯನ್ನು ಸೆಳೆದುಕೊಳ್ಳತೊಡಗಿತು. ಒಂದು ಡಾಲರಿಗೆ 34.50 ರೂಪಾಯಿಯ ಆಜು ಬಾಜೂ ರೂಪಾಯಿಯನ್ನು ನಿಲ್ಲಿಸಲು ಸ್ವಲ್ಪ ಮಟ್ಟಿಗೆ ಸಫಲವಾಯಿತು. ಈ ಕಾರ್ಯಚರಣೆಯಿಂದ ಸುಸ್ತಾದ ಭಾರತೀಯ ರಿಸರ್ವಬ್ಯಾಂಕ್ ನಿಟ್ಟುಸಿರು ಬಿಡುತ್ತಿರುವಂತೆಯೇ ಆಂತರಿಕ ಹಣಕಾಸು ಮಾರುಕಟ್ಟೆಯಲ್ಲಿ ಬಡ್ಡಿದರದ ಏರುವಿಕೆಯ ಇನ್ನೊಂದು ಅಗಾಧ ಸಮಸ್ಯೆ ಹುಟ್ಟಿಕೊಂಡಿತು.

ದಿನನಿತ್ಯ ಅವಶ್ಯವಿರುವ ಹಣವನ್ನು ಉದರಿ ಪಡೆಯುವ/ನೀಡುವ ಮಾರುಕಟ್ಟೆಯೊಂದಿಗೆ ಇದನ್ನು ಕಾಲ್ ಮನಿ ಮಾರ್ಕೆಟ್ ಎನ್ನುತ್ತಾರೆ. ಇಲ್ಲಿ ಅಲ್ಪಕಾಲಕ್ಕೆ ಹಣಸಾಲ ನೀಡಲಾಗುತ್ತದೆ. ಹಣಕಾಸಿನ ಪೂರೈಕೆ ಎಷ್ಟಿದೆ ಎನ್ನುವುದರ ಮೇಲೆ ಬಡ್ಡಿಯ ದರ ನಿರ್ಧಾರಿತವಾಗುತ್ತಿರುತ್ತದೆ. ಹಣಕಾಸಿನ ಪೂರೈಕೆ ಸಾಕಷ್ಟಿದ್ದರೆ ಬಡ್ಡಿ ದರ ಬಹಳ ಕಡಿಮೆ ಇರುತ್ತದೆ. ಇದು ಎರಡೊ ಮೂರೊ ಇರಬಹುದು ಅಥವಾ ನೂರೂ ಇರಬಹುದು-ಹಣಕಾಸಿನ ಪೂರೈಕೆ ಕಡಿಮೆ ಇದ್ದಾಗ.

ಮೊನ್ನೆ ಆದದ್ದೂ ಇದೆ. ಭಾರತೀಯ ರಿಸರ್ವಬ್ಯಾಂಕ್ ಡಾಲರನ್ನು ಮಾರುತ್ತ ರೂಪಾಯಿಯನ್ನು ಮಾರುಕಟ್ಟೆಯಿಂದ ಹೀರಿಕೊಂಡಿತು. ಮಾರುಕಟ್ಟೆಯಲ್ಲಿ ರೂಪಾಯಿಯ ಕೊರತೆ ಕಾಣತೊಡಗಿತು. ಬೇಡಿಕೆ ಹೆಚ್ಚಾಗತೊಡಗಿತು. ವಿದೇಶೀ ಬ್ಯಾಂಕುಗಳು ಭಾರತೀಯ ರಿಸರ್ವಬ್ಯಾಂಕ್‌ನೆ ನಗದು ಶಿಲ್ಕು ಪ್ರಮಾಣವನ್ನು ಉಳಿಸಿಕೊಳ್ಳುವಲ್ಲಿ ವಿಫಲವಾದವು. ದೇಶೀ ಬ್ಯಾಂಕುಗಳೂ ಹಲವು ಹಣಕಾಸಿನ ಕೊರತೆ ಅನುಭವಿಸಿದವು.

ಬಡ್ಡಿಯ ದರ ಗಗನಕ್ಕೇರತೊಡಗಿತು. ಅದು ಶೇ. 135 ರವರೆಗೂ ಏರಿತು!! ಈಗ ಮತ್ತೆ ಭಾರತೀಯ ರಿಸರ್ವ ಬ್ಯಾಂಕ್ ಮತ್ತೆ ಕಂಗಾಲಾಗಿ ಮಧ್ಯಪ್ರವೇಶಮಾಡಿತು. ಈಗ ಅದು ಹಲವು ಕ್ರಮಗಳನ್ನೂ ಕೈಗೊಂಡಿದೆ. ಆದರೆ ಇನ್ನೂ ಈ ಬಡ್ಡಿದರ ಎತ್ತರದಲ್ಲೇ ಇದೆ. ಇನ್ನೂ ಎಂತೆಂತಹ ಸಮಸ್ಯೆಗಳು ಉದ್ಭವಿಸುತ್ತವೊ ಯಾರಿಗೆ ಗೊತ್ತು?

ಒಂದಂತೂ ಇದರಿಂದ ಬಹಳ ಸ್ಪಷ್ಟವಾಗಿದೆ. ಪೂರ್ತಿ ದೇಶದ ಆರ್ಥಿಕ ತಮ್ಮ ಹತೋಟಿಯಲ್ಲಿದೆ. ಉದಾರೀಕರಣದ ಟೀಕಾಕಾರರು ಹೇಳಿದಂತೆ ಏನೂ ಆಗುವುದಿಲ್ಲ ಎಂದವರ ಮಾತುಗಳು ಟೊಳ್ಳು ಎಂಬುದು.

ದೇಶದ ಆರ್ಥಿಕದ ಮೇಲಂತೂ ಇದರಿಂದ ತೀವ್ರ ದುಷ್ಪರಿಣಾಮಗಳು ಉಂಟಾಗುತ್ತವೆ. ಅದನ್ನು ದೇಶದ ಜನಸಾಮಾನ್ಯರ ತಲೆಗೇ ದಾಟಿಸಲಾಗುತ್ತದೆ. ಅದೇ ಉದಾರೀಕರಣ!!

ಇಂಗ್ಲೀಷಿನಲ್ಲಿ ಇವನ್ನು ಫಾಸ್ಟ್‌ಟ್ರಾಕ್ ಯೋಜನೆಗಳು ಎನ್ನುತ್ತಾರೆ. ಬಹುರಾಷ್ಟ್ರೀಯ ಕಂಪನಿಗಳು ನಮ್ಮ ದೇಶದೊಳಗೆ ಅನುಷ್ಠಾನಗೊಳಿಸಬಂದಿರುವ ವಿದ್ಯುತ್ ಯೋಜನೆಗಳೆಲ್ಲ ಈ ವರ್ಗಕ್ಕೇ ಸೇರಿದ ಯೋಜನೆಗಳು. ಆದರೆ ಇವು ನಿಜಕ್ಕೂ ಶೀಘ್ರ ಯೋಜನೆಗಳೇ?

ಎನ್ರಾನ್‌ನ ದಾಭೋಲ್ ವಿದ್ಯುತ್ ಯೋಜನೆ ನೋಡಿದರೆ ಈ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಶೀಘ್ರತೆ ಏನು ಎಂಬುದು ಗೊತ್ತಾಗುತ್ತದೆ. ಇಲ್ಲಿ ಶೀಘ್ರವಾಗಿ ಆಗುವ ಒಂದು ಅಂಶವಿದೆ. ಅದು ಈ ಕಂಪನಿಗಳಿಗೆ ಆಗುವ ಲಾಭ. ಈ ವಿಷಯದಲ್ಲಿ ಇವು ನಿಜಕ್ಕೂ ಶೀಘ್ರ ಯೋಜನೆಗಳೇ. ವಿದ್ಯುತ್ ಯೋಜನೆಗಳು ಹೇಗೆ ಅನುಷ್ಠಾನಗೊಳ್ಳಲಿ, ಅಂತಿಮವಾಗಿ ಅದರ ಬೆಲೆ ಎಷ್ಟೇ ಆಗಿರಲಿ ಅದರ ಬಗ್ಗೆ ಈ ಕಂಪನಿಗಳಿಗೆ ಕಾಳಜಿಯಿಲ್ಲ. ಅವರ ಲಾಭ ಮಾತ್ರ ಅವರಿಗೆ ಬರಬೇಕು. ಇದು ಈ ಕಂಪನಿಗಳ ಗುರಿ.

ಎನ್ರಾನ್ ಒಂದು ಉದಾಹರಣೆಯಾದರೆ ಬಹುರಾಷ್ಟ್ರೀಯ ಕಂಪನಿಗಳ ಬಹುತೇಕ ಯೋಜನೆಗಳಲ್ಲಿ ಹೀಗೆ ಇವೆ. ಕೊಜೆಂಟ್ರಿಕ್ಸ್ ಯೋಜನೆ ಸಹ ಅಂತಹದ್ದೇ. ಈ ಯೋಜನೆಗಳು ಹುಟ್ಟು ಹಾಕುವ ಸಮಸ್ಯೆಗಳು ಅವು ಹೇರುವ ಹೊರೆ ನೋಡಿದರೆ ಅವು ಶೀಘ್ರ ಯೋಜನೆಗಳಂತೂ ಅಲ್ಲ. ಬಹಳ ನಿಧಾನ ಯೋಜನೆಗಳಾಗಲೇ ಲಾಯಕ್ಕು.

ಉಕ್ಕು ಪ್ರಾಧಿಕಾರದ ಪಾಲನ್ನು ಮೂರುಕಾಸಿಗೆ ಮಾರಿದ ಸರ್ಕಾರ •

ಭಾರತೀಯ ಉಕ್ಕು ಪ್ರಾಧಿಕಾರದ ಪಾಲನ್ನು ವಿದೇಶಿ ಹೂಡಿಕೆದಾರರಿಗೆ ಮಾರಿರುವ ಕೇಂದ್ರ ಸರ್ಕಾರ ಈ ವ್ಯವಹಾರದಿಂದ ಒಂದು ಸಾವಿರ ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸಿದೆಯಂತೆ. ಇಂದಿರಾ ಗಾಂಧಿ ಅಭಿವೃದ್ಧಿ 'ಸಂಶೋಧನಾ ಸಂಸ್ಥೆ ಅಧ್ಯಯನವೊಂದರಿಂದ ಇದು ಹೊರಬಂದಿದೆ.

ಖಾಸಗಿ ವಿದೇಶೀ ಹೂಡಿಕೆದಾರರಿಗೆ ಮೂರು ಕಾಸಿಗೆ ಈ ಅತ್ಯುತ್ತಮ ಪ್ರಾಧಿಕಾರದ ಪಾಲನ್ನು ಮಾರಿದ ಸರ್ಕಾರ ಅವರಿಗೆ ಅಪಾರ ಲಾಭ ಮಾಡಿಕೊಟ್ಟು ದೇಶಕ್ಕೆ ಹಾನಿ ತಂದಿದೆ.

ಈಗ ಸರ್ಕಾರ ಈ ನಷ್ಟದ ಸಾಧ್ಯತೆಯನ್ನೂ ಅಲ್ಲಗಳೆದು 1991-92 ರಲ್ಲಿ 3400 ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸಿರುವುದು ನಿಜ. ಆದರೆ ಈ ಸಾರಿ ಅಲ್ಲ ಎಂದಿದೆ, ವಿದೇಶೀ ಕಂಪನಿಗಳಿಗೆ ಲಾಭ ಮಾಡಿಕೊಟ್ಟಿರುವ ಸರ್ಕಾರ ಖಂಡಿತವಾಗಿಯೂ ಅದನ್ನು ಒಪ್ಪಕೊಳ್ಳಲು ಸಿದ್ಧವಿಲ್ಲ. ಆದ್ದರಿಂದ ಇದು ನಷ್ಟವೇ, ಪಾಲು ಮಾರುವಲ್ಲಿ ಸರಿಯಾದ ವಿಧಾನವನ್ನೇ ಅನುಸರಸಲಾಗಿದೆ ಎಂದೆಲ್ಲಾ ಪ್ರಲಾಪದಲ್ಲಿ ತೊಡಗಿದೆ. ಆದರೆ ದೇಶಕ್ಕೆ 1000 ಕೋಟಿ ರೂಪಾಯಿಗಳ ಹಾನಿಯನ್ನಂತು ಸರ್ಕಾರ ತಂದಿರುವುದು ಸ್ಪಷ್ಟ.

ಬಂಡವಾಳಿಗರಿಗೂ ಈಗ ನಡುಕ

ಉದಾರೀಕರಣದ ನಂತರ ದೇಶದ ಅರ್ಥವ್ಯವಸ್ಥೆಯಲ್ಲಿ ಆಗುತ್ತಿರುವ ಏರುಪೇರಿನಿಂದ ಬಂಡವಾಳಿಗರಿಗೂ ಹೆದರಿಕೆ ಉಂಟಾಗಿರುವುದು ಈಗ ಸ್ಪಷ್ಟ. ಉದ್ಯಮ ಮತ್ತು ವಾಣಿಜ್ಯೋದ್ಯಮಿಗಳ ಮಹಾ ಮಂಡಳ(ಫಿಕ್ಕಿ) ಅಧ್ಯಕ್ಷ ಎ.ಕೆ. ರುಂಗ್ಟಾ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ವಿದೇಶೀ ಹೂಡಿಕೆ ಕಡಿಮೆ ಆಗುತ್ತಿರುವುದು, ಹಣಕಾಸಿನ ಕೊರತೆ, ಡಾಲರಿನೆದುರು ರೂಪಾಯಿಯ ಬೆಲೆಯ ಕುಸಿತ, ಏರಿರುವ ಬಡ್ಡಿ ದರ ಇವೆಲ್ಲಾ ದೇಶದ ಅರ್ಥ ವ್ಯವಸ್ಥೆಯಲ್ಲಿನ ಏರುಪೇರನ್ನು ತೋರುತ್ತಿವೆ. ಇವುಗಳನ್ನು ಸರಿಪಡಿಸಲು ಕೂಡಲೇ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದು ಅವರ ಪತ್ರದ ಒಕ್ಕಣೆ.

ಅಂದರೆ ಉದಾರೀಕರಣದಿಂದ ಆಗುತ್ತಿರುವ ಪರಿಣಾಮಗಳು ಇವರಿಗೂ ಖುಷಿ ತಂದಿಲ್ಲ, ಬದಲಿಗೆ ಅವರ ಆತಂಕವನ್ನು ಹೆಚ್ಚಿಸಿವೆ.

ಇದಲ್ಲದೆ ನಮ್ಮ ಅಂತರಚನಾ ಸೌಕರ್ಯಗಳಾದ ವಿದ್ಯುತ್, ಟೆಲಿ ಸಂಪರ್ಕ, ರಸ್ತೆಗಳು, ಬಂದರುಗಳು, ರೈಲುಗಳು ಮತ್ತು ವಿಮಾನಯಾನ ಈ ಕ್ಷೇತ್ರಗಳಲ್ಲೂ ಅಂತಹ ಅಭಿವೃದ್ಧಿ ಕಾಣುತ್ತಿಲ್ಲ. ಆದ್ದರಿಂದ ಈ ಎಲ್ಲವುಗಳಿಗೆ ನೀವು ಗಮನ ನೀಡುವ ಅವಶ್ಯಕತೆ ಇದೆ ಎಂದಿದ್ದಾರೆ.

ಉದಾರೀಕರಣವಾದಿಗಳು ಉದಾರೀಕರಣದಿಂದ ಏನೆಲ್ಲ ಸಾಧಿತವಾಗುತ್ತದೆ ಎಂದು ಹೇಳಿದರೂ ಅವೆಲ್ಲವೂ ಆಗಿಲ್ಲ ಎಂಬುದು ಸ್ಪಷ್ಟ ಅಲ್ಲವೇ.

...ನ್ ತಿದ್ದುಪಡಿ ...ದುರು ...ರುವ ...ರವನ್ನು ...ತನ್ನಿ

ಸಂಬಂಧ ಕುದುರಿಸುವ ಯಾವುದೇ ಪ್ರಯತ್ನವನ್ನು ನಿರುತ್ಸಾಹಗೊಳಿಸುವುದು, ಏಶ್ಯಾದ ಏಳು ಶ್ರೀಮಂತರ ರಾಷ್ಟ್ರಗಳ ಗುಂಪು ಒಟ್ಟಾಗಿ ಅಣು-ಪ್ರಸರಣ ನಿಷೇಧ ಹಾಗೂ ಕ್ಷಿಪಣಿ ಹತೋಟಿ ನೀತಿಗಳಿಗೆ ಬದ್ಧವಾಗಿರುವಂತೆ ಬೆದರಿಸುವುದು-ಇವೆಲ್ಲವನ್ನೂ ರಾವ್ ಸರಕಾರ ಉಪೇಕ್ಷಿಸಿ ಭಾರತದ ರಕ್ಷಣಾ ವ್ಯವಸ್ಥೆಯಲ್ಲಿ ಅಮೇರಿಕಾ ತಲೆ ತೂರಿಸಿ ತನ್ನ ಪ್ರಭಾವ ಬೀರಲು ಅವಕಾಶ ನೀಡುವ ಈ ಅಪಾಯಕಾರಿ ದಾರಿ ಹಿಡಿದಿದೆ.

ಅಮೇರಿಕಾದ ಬಗ್ಗೆ ಭ್ರಮೆ ಬೇಡ

ಅಮೇರಿಕಾಕ್ಕೆ ಈಗಲೂ ಪಾಕಿಸ್ತಾನ ಒಂದು ನಂಬಿಕಸ್ತ, ಅನುಕೂಲಕರ ಮಿತ್ರ. 1950ರ ದಶಕದ ಶೀತಲ ಯುದ್ಧದ ದಿನಗಳಲ್ಲಿ ಸೋವಿಯತ್ ಒಕ್ಕೂಟದ ವಿರುದ್ಧ ಪಾಕಿಸ್ತಾನದಲ್ಲಿರುವ ತನ್ನ ಮಿಲಿಟರಿ ನೆಲೆಗಳನ್ನು ಬಳಸುವುದರಿಂದ ಹಿಡಿದು ಪೆಂಟಗಾನ್-ಸಿಐಎ ಪಾಕಿಸ್ತಾನದ ಸೇನೆಯ ನೆರವಿನಿಂದ ಅಫಘಾನಿಸ್ತಾನದಲ್ಲಿ ಕಾರ್ಯಾಚರಣೆ ನಡೆಸುವವರೆಗೆ ಮಿತ್ರತ್ವ ಈಗಲೂ ಮುಂದುವರಿಯುತ್ತಿದೆ. ಅಮೇರಿಕನ್ ಸಾಮ್ರಾಜ್ಯಶಾಹಿ ಪಾಕಿಸ್ತಾನದ ಆಳುವ ವರ್ಗ ಹಾಗೂ ಮಿಲಿಟರಿ ವ್ಯವಸ್ಥೆಯೊಂದಿಗೆ ಒಂದು ಬಹುಕಾಲ ಬಾಳುವ ಸಂಬಂಧ ಬೆಸೆದಿದೆ

ಶೀತಲ ಯುದ್ಧ ಮುಗಿದ ನಂತರದ ಈ ದಿನಗಳಲ್ಲಿ ಅಮೇರಿಕಾ ತನ್ನ ಬಾಲ ಹಿಡಿಯದ ಇರಾನಿನಂತಹ ಇಸ್ಲಾಮೀ ದೇಶಗಳನ್ನೂ ಗುರಿ ಮಾಡಲು-ಹಾಗೂ ಬಹಳ ತೈಲ ನಿಕ್ಷೇಪಗಳಿರುವ ಮಧ್ಯ ಏಶ್ಯಾದಲ್ಲಿ ನುಸುಳಿ ತನ್ನ ಪ್ರಭಾವವನ್ನು ಕ್ರೋಢೀಕರಿಸಬಯಸುತ್ತಿದೆ. ಇದರಲ್ಲಿ "ಮಂದಗಾಮಿ ಇಸ್ಲಾಮೀ ಪ್ರಭುತ್ವ"ವೆನಿಸಿಕೊಂಡ ಪಾಕಿಸ್ತಾನವನ್ನು ಒಂದು ಸೇತುವೆಯಾಗಿ ಆರಿಸಲಾಗಿದೆ. ಇದೇ ಪಾಕಿಸ್ತಾನವನ್ನು ಭಾರತವನ್ನು ಬೆದರಿಸಲು ಹಾಗೂ ಅದರ ಮೇಲೆ ಒತ್ತಡ ಹೇರಲು ಕೂಡಾ ಬಳಸಬಹುದು. ಕಾಶ್ಮೀರ ಕಣಿವೆಯಲ್ಲಿ ಉಗ್ರಗಾಮಿ ಚಟುವಟಿಕೆಗಳಿಗೆ ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಪಾಕಿಸ್ತಾನೀ ಸೇನೆಯಿಂದ ಹಣ ಮತ್ತು ನೆರವು ದೊರೆಯುತ್ತಿದೆ, ಅತ್ತ ಅಫಘಾನಿಸ್ತಾನದಲ್ಲಿ ತಾಲಿಬಾನ್ ಶಕ್ತಿಗಳಿಗೂ ಇದೇ ರೀತಿ ನೆರವು ನೀಡಲಾಗುತ್ತಿದೆ ಎಂಬುದು ಚೆನ್ನಾಗಿ ಗೊತ್ತಿದ್ದೇ ಅಮೇರಿಕಾ ಹೀಗೆ ಮಾಡುತ್ತಿದೆ.

ಈ ಒಟ್ಟಾರೆ ಹಿನ್ನೆಲೆಯಲ್ಲಿ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಪೂರೈಸಲು ಅವಕಾಶ ನೀಡಿರುವ ಬ್ರೌನ್ ತಿದ್ದುಪಡಿಯನ್ನು ನೋಡಬೇಕು. ಅಲ್ಲದೆ ಈ ಪ್ರಯತ್ನಕ್ಕೆ ಪ್ರತಿಕ್ರಿಯಿಸುವಾಗ ಪಾಕಿಸ್ತಾನ ಪಡೆಯುವ ನವೀನ ಶಸ್ತ್ರಾಸ್ತ್ರಗಳನ್ನು ಎದುರಿಸಲು ನಾವು ಎಲ್ಲಿಂದ ಶಸ್ತ್ರಾಸ್ತ್ರ ಪಡೆಯುವುದು ಎಂಬಂತಹ ಕೇವಲ ಮಿಲಿಟರಿ-ತಾಂತ್ರಿಕ ದೃಷ್ಟಿಯಿಂದಷ್ಟೇ ಯೋಚಿಸಿದರೆ ಪ್ರಯೋಜನವಿಲ್ಲ. ನಿಜವಾಗಿ ಮಾಡಬೇಕಾದ್ದು ನರಸಿಂಹರಾವ್ ಸರಕಾರ ಕಳೆದ ಐದು ವರ್ಷಗಳಿಂದಲೂ ಅನುಸರಿಸಿಕೊಂಡು ಬಂದಿರುವ ದೇಶದ ಹಿತಾಸಕ್ತಿಗಳಿಗೆ ಮಾರಕವಾದ ಒಟ್ಟಾರೆಯಾಗಿ ಅಮೇರಿಕಾಕ್ಕೆ ತಲೆಬಾಗಿಸಿ ನಡೆಯುವ ಈ ನೀತಿಗಳನ್ನು ಬದಲಿಸುವುದು.

ಅಮೇರಿಕಾದ ಅನುಮೋದನೆಯೇಕೆ ಬೇಕು?

ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಒದಗಿಸುವುದು ಭಾರತ-ಅಮೇರಿಕಾ ಆರ್ಥಿಕ ಸಂಬಂಧಗಳನ್ನು ತಟ್ಟುತ್ತದೆ ಎಂದು ಅಮೇರಿಕಾದಲ್ಲಿ ಭಾರತದ ರಾಯಭಾರಿ ಹೇಳಿಕೆ ನೀಡಿದರು. ಆದರೆ ಇಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಕ್ಷಣ ಈ ಹೇಳಿಕೆಯನ್ನು ಅಲ್ಲಗಳೆದಿದೆ. ಅಮೇರಿಕನ್ ಸಂಸತ್ತಿನ ಜಂಟಿ ಸಭೆ ಈ ಬ್ರೌನ್ ತಿದ್ದುಪಡಿಯನ್ನು ಅಂಗೀಕರಿಸಿದ ದಿನವೇ ಪ್ರಧಾನಮಂತ್ರಿಗಳು ನ್ಯೂಯಾರ್ಕ್‌ನಲ್ಲಿ ಅಮೇರಿಕನ್ ವ್ಯಾಪಾರಸ್ಥರನ್ನು ಉದ್ದೇಶಿಸಿ ಮಾತನಾಡುತ್ತಾ ಭಾರತ-ಅಮೇರಿಕಾ ವ್ಯಾಪಾರ ಬಾಂಧವ್ಯ ಹಿಂದೆಂದೂ ಇಷ್ಟು ಉತ್ತಮವಾಗಿರಲಿಲ್ಲ ಎಂದು ಅವರಿಗೆ

ಪುಟ 8 ನೋಡಿ



ಆಂಧ್ರಪ್ರದೇಶದಲ್ಲಿ ವರ್ಗ ಬಲಾಬಲ ಬದಲಿಸುವ ಹೋರಾಟ

ಸಿಪಿಐ(ಎಂ) ಸಮ್ಮೇಳನದ ನಿರ್ಧಾರ

ಸಿಪಿಐ(ಎಂ)ನ 18ನೇ ಆಂಧ್ರಪ್ರದೇಶ ರಾಜ್ಯ ಸಮ್ಮೇಳನ ಅಕ್ಟೋಬರ್ 30ರಂದು ಹೈದರಾಬಾದ್‌ನಲ್ಲಿ ಒಂದು ಬೃಹತ್ ಸಾರ್ವಜನಿಕ ಸಭೆಯೊಂದಿಗೆ ಮುಕ್ತಾಯಗೊಂಡಿತು. ಸುಮಾರು 2 ಲಕ್ಷ ಜನ ಭಾಗವಹಿಸಿದ್ದ ಈ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಹಾಗೂ ಹಿರಿಯ ಪಿ.ಬಿ. ಸದಸ್ಯ ಜ್ಯೋತಿ ಬಸು, ಎಲ್.ಬಿ. ಗಂಗಾಧರರಾವ್, ಎಂ.ಹನುಮಂತರಾವ್, ಬಿ.ಎನ್. ರೆಡ್ಡಿ ಹಾಗೂ ಕೊರಟಾಲ ಸತ್ಯನಾರಾಯಣ ಮಾತನಾಡಿದರು.



ಹೈದರಾಬಾದಿನಲ್ಲಿ ಮೊದಲ ಬಾರಿಗೆ ಈ ಸಮ್ಮೇಳನ ನಡೆದಿದ್ದು, ಸಮ್ಮೇಳನ ನಡೆದ ನಾಲ್ಕು ದಿನಗಳ ಕಾಲ ಭಾರೀ ಉತ್ಸಾಹ ಹುಮ್ಮಸ್ಸು ವ್ಯಕ್ತಗೊಂಡಿತು. ಪಕ್ಷದ ಸದಸ್ಯತ್ವ ಕಳೆದ ನಾಲ್ಕು ವರ್ಷಗಳಲ್ಲಿ 27000ದಿಂದ 35000ಕ್ಕೇರಿ ಪಕ್ಷದ ಪ್ರಭಾವ ವಿಸ್ತರಿಸಿದ್ದು ಅಕ್ಟೋಬರ್ 30ರ ಸಾರ್ವಜನಿಕ ಸಭೆಯಲ್ಲಿ ವ್ಯಕ್ತವಾಗುತ್ತಿತ್ತು.

18ನೇ ರಾಜ್ಯ ಸಮ್ಮೇಳನ ಸಾಮೂಹಿಕ ಹೋರಾಟಗಳನ್ನು ಹರಿಯಬಿಡಲು, ಸಂಘಟನೆಯನ್ನು ಬಲಪಡಿಸಲು ಹಾಗೂ ರಾಜ್ಯದಲ್ಲಿ ರಾಜಕೀಯ ಶಕ್ತಿಗಳ ಬಲಾಬಲವನ್ನು ದುಡಿಯುವ ಜನಗಳ ಪರವಾಗಿ ಬದಲಿಸುವ ದಿಕ್ಕಿನಲ್ಲಿ ಆಂದೋಲನ ಸಾಗುವಂತೆ ಮಾಡಲು ನಿರ್ಧರಿಸಿತು. ತಕ್ಷಣದ ರಾಜಕೀಯ ಕರ್ತವ್ಯಗಳನ್ನು ನಿರೂಪಿಸುತ್ತಾ ಸಮ್ಮೇಳನ ತೆಲುಗುದೇಶಂನ ಎರಡು ಬಣಗಳು ಒಂದಾಗಬೇಕು ಅಥವಾ ಸೀಟು ಹೊಂದಾಣಿಕೆಗಳನ್ನಾದರೂ ಮಾಡಿಕೊಳ್ಳಬೇಕು, ಆ ಮೂಲಕ ಕಾಂಗ್ರೆಸ್(ಐ) ಮತ್ತ ಬಿಜೆಪಿಗಳನ್ನು ಸೋಲಿಸಿ ಮೂಡಿಬರುತ್ತಿರುವ ಮೂರನೇ ರಂಗವನ್ನು ಬಲಪಡಿಸಬೇಕು ಎಂದು ಮನವಿ ಮಾಡಿದೆ.

ಪಕ್ಷದೊಳಗೆ ಪಾರ್ಲಿಮೆಂಟರಿಸಂ ಮುಂತಾದ ತಪ್ಪು ಪ್ರವೃತ್ತಿಗಳ ವಿರುದ್ಧ ನಿರಂತರ ಸಮರ ನಡೆಸಬೇಕು ಎಂದೂ ಸಮ್ಮೇಳನ ನಿರ್ಧರಿಸಿದೆ.

ಸಮ್ಮೇಳನದಲ್ಲಿ ಮಂಡಿಸಿದ ವರದಿ ರಾಜ್ಯದಲ್ಲಿ ಸಿಪಿಐ(ಎಂ) ಮೂರನೇ ದೊಡ್ಡ ಪಕ್ಷವಾಗಿ ಮೂಡಿ ಬಂದಿದೆ, ಆದರೆ ಇತರ ಎರಡು ಪ್ರಧಾನ ಪಕ್ಷಗಳಾದ ತೆಲುಗುದೇಶಂ ಹಾಗೂ ಕಾಂಗ್ರೆಸ್(ಐ)ನಿಂದ ಬಹಳ ಹಿಂದೆ ಇದೆ ಎಂಬುದನ್ನು ಗಮನಿಸಿತು. ಸಾಮೂಹಿಕ ಹೋರಾಟಗಳನ್ನು ನಡೆಸಿ ಹೊಸ ವಿಭಾಗಗಳಿಗೆ ಈ ಆಂದೋಲನವನ್ನು ವಿಸ್ತರಿಸುವ ಮೂಲಕವಷ್ಟೇ ಈ ಅಂತರವನ್ನು ತುಂಬಬಹುದು ಎಂದು ವರದಿ ಹೇಳಿದೆ.

ರಾಜ್ಯ ಸಮ್ಮೇಳನ 74 ಸದಸ್ಯರಿರುವ ಹೊಸ ರಾಜ್ಯ ಸಮಿತಿಯನ್ನು ಹಾಗೂ 15 ಸದಸ್ಯರಿರುವ ರಾಜ್ಯ ಕಾರ್ಯದರ್ಶಿ ಮಂಡಳಿಯನ್ನು ಸರ್ವಾನುಮತದಿಂದ ಆರಿಸಿತು. ಕೊರಟಾಲಾ ಸತ್ಯನಾರಾಯಣರಾವ್ ರಾಜ್ಯ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು. ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಎಲ್.ಬಿ.ಗಂಗಾಧರರಾವ್, ಎಂ.ಹನುಮಂತರಾವ್, ಎನ್.ಪ್ರಸಾದರಾವ್, ಪಿ.ರಾಮಯ್ಯ, ಎಂ.ವಿ.ಎನ್.ರೆಡ್ಡಿ, ಬಿ.ವಿ.ರಾಘವುಲು, ಬಿ.ಎನ್.ರೆಡ್ಡಿ, ಜೆ.ವೆಂಕಯ್ಯ, ಟಿ.ವೀರಭದ್ರಂ, ಎ.ಸತ್ಯನಾರಾಯಣರಾಜು, ಬಿ.ವೆಂಕಟೇಶ್ವರರಾವ್, ಟಿ.ರವಿ, ಪಿ.ಮಧು ಹಾಗೂ ವಿ.ಕೃಷ್ಣಯ್ಯ. ಪಕ್ಷದ ದೈನಿಕ "ಪ್ರಜಾಶಕ್ತಿ"ಯ ಜನರಲ್ ಮ್ಯಾನೇಜರ್ ಆಗಿರುವ ವಿ.ಕೃಷ್ಣಯ್ಯ ಕಾರ್ಯದರ್ಶಿ ಮಂಡಳಿಗೆ ಆರಿಸಲ್ಪಟ್ಟ ಹೊಸ ಸದಸ್ಯರು.

ಕೇರಳದಲ್ಲಿ ದಮನ–ಪಿ.ಬಿ. ಖಂಡನೆ

ಕೇರಳದಾದ್ಯಂತ ವಿದ್ಯಾರ್ಥಿಗಳ ಮೇಲೆ ಕೇರಳ ಸರಕಾರ ನಡೆಸಿರುವ ಅಮಾನುಷ ಪೋಲೀಸ್ ದಮನವನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ಕಳೆದ ಕೆಲವು ವಾರಗಳಿಂದ ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಖಾಸಗೀಕರಣದ ವಿರುದ್ಧ ಪ್ರತಿಭಟಿಸುತ್ತಿದ್ದರು. ನಿರ್ದಿಷ್ಟವಾಗಿ ಪರಿಯಾರಂ ಮೆಡಿಕಲ್ ಕಾಲೇಜನ್ನು ಖಾಸಗೀ ವಲಯದಲ್ಲಿ ತೆರೆಯುವುದನ್ನು ಅವರು ವಿರೋಧಿಸುತ್ತಿದ್ದರು. ಅಧ್ಯಾಪಕರು, ಬುದ್ಧಿಜೀವಿಗಳು ಮತ್ತು ಇತರ ಸಾಮೂಹಿಕ ಸಂಘಟನೆಗಳಿಂದ ಈ ಆಂದೋಲನ ವ್ಯಾಪಕ ಬೆಂಬಲ ಪಡೆದಿದೆ.

ಹಲವೆಡೆ ಪೋಲೀಸರು ಪ್ರತಿಭಟನೆಯಲ್ಲಿ ತೊಡಗಿದ್ದ ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಹಾರ ಮಾಡಿದ್ದಾರೆ. ಕೋಳಿಕ್ಕೋಡ್, ಪಾಲಕ್ಕಾಡ್, ಮಲಪ್ಪುರಂ ಹಾಗೂ ಕೊಟ್ಟಾಯಂಗಳಲ್ಲಿ ಹಲವು ವಿದ್ಯಾರ್ಥಿ ಮುಖಂಡರು, ಕಾರ್ಯಕರ್ತರು ಗಾಯಗೊಂಡು ಅವರನ್ನು ಆಸ್ಪತ್ರೆಗೆ ಸೇರಿಸಬೇಕಾಗಿ ಬಂದಿದೆ. ಈ ದಮನ ಚಕ್ರದ ಇತ್ತೀಚಿನ ಉದಾಹರಣೆಯೆಂದರೆ ನವಂಬರ್ 6ರಂದು ತಿರುವನಂತಪುರ ಸಚಿವಾಲಯದ ಎದುರು ಉಪವಾಸ ಮುಷ್ಕರ ನಡೆಸುತ್ತಿದ್ದ ವಿದ್ಯಾರ್ಥಿ ಮುಖಂಡರನ್ನು ಅಮಾನುಷವಾಗಿ ಥಳಿಸಿದ್ದು.

ಇದರ ವಿರುದ್ಧ ರಾಜ್ಯವ್ಯಾಪಿ ನವಂಬರ್ 8ರಂದು ಬಂದ್ ನಡೆದಿದೆ. ಎಲ್‌ಡಿಎಫ್‌ನ ಕರೆಯ ಮೇರೆಗೆ ನಡೆದಿರುವ ಈ ಬಂದ್ ಸಂಪೂರ್ಣ ಯಶಸ್ವಿಯಾಗಿದೆ.

ದೇಶಾದ್ಯಂತ ಶಿಕ್ಷಣವನ್ನು ವ್ಯಾಪಾರವಾಗಿಸುವ, ಖಾಸಗೀಕರಿಸುವ ಪ್ರಯತ್ನದ ವಿರುದ್ಧ ವ್ಯಕ್ತಗೊಳ್ಳುತ್ತಿರುವ ಪ್ರತಿರೋಧದಲ್ಲಿ ಕೇರಳದಲ್ಲಿನ ಈ ಹೋರಾಟ ಒಂದು ಮಹತ್ವಪೂರ್ಣ ಘಟನೆ ಎಂದಿರುವ ಪೊಲಿಟ್ ಬ್ಯೂರೋ ಕೇರಳದಲ್ಲಿ ಖಾಸಗೀಕರಣದ ವಿರುದ್ಧ ನಡೆಯುತ್ತಿರುವ ಈ ಹೋರಾಟವನ್ನು ಬೆಂಬಲಿಸಬೇಕು, ಆಂಟೋಣಿ ಸರಕಾರ ದಮನ ಚಕ್ರವನ್ನು ನಿಲ್ಲಿಸುವಂತೆ ಒತ್ತಾಯಿಸಬೇಕೆಂದು ಪ್ರಜಾಪ್ರಭುತ್ವವಾದಿ ಜನವಿಭಾಗಗಳಿಗೆ ಪೊಲಿಟ್ ಬ್ಯೂರೋ ಮನವಿ ಮಾಡಿದೆ.

ತ್ರಿಪುರಾ: ಕೇಂದ್ರ ಉಪೇಕ್ಷೆಯ ನಿಲುವು ಬದಲಿಸಬೇಕು

–ಸುರ್ಜಿತ್ ಪತ್ರ

ತ್ರಿಪುರಾ ಈಶಾನ್ಯ ಭಾರತದಲ್ಲಿ ಬುಡಕಟ್ಟು ಜನಗಳು ಹಾಗೂ ಇತರರ ನಡುವೆ ಐಕ್ಯತೆಯನ್ನು ಕಾದುಕೊಂಡಿರುವ ಏಕೈಕ ರಾಜ್ಯ. ಈ ಏಕತೆಯನ್ನು ಮುರಿಯಲು ಗಡಿಯಾಚೆಯಿಂದ ಸತತ ಪ್ರಯತ್ನಗಳು ನಡೆಯುತ್ತಿದ್ದು, ಆ ಉಗ್ರಗಾಮಿಗಳು ಅತ್ಯಾಧುನಿಕ ಶಸ್ತ್ರಗಳಿಂದ ಸಜ್ಜಿತರಾಗಿರುವುದರಿಂದ ಕೇಂದ್ರದ ಅರೆ ಸೈನಿಕ ಪಡೆಗಳ ಸಂಖ್ಯೆ ಸಾಲುವುದಿಲ್ಲ ಎಂದು ತ್ರಿಪುರಾ ರಾಜ್ಯ ಸರಕಾರ ಪದೇ ಪದೇ ಹೇಳುತ್ತಿತ್ತು. ಆದರೆ ಈಗ ಈ ಸಂಖ್ಯೆಯನ್ನು ಹೆಚ್ಚಿಸುವ ಬದಲು ಕೇಂದ್ರ ಸರಕಾರ ಇದ್ದ ಪಡೆಗಳಲ್ಲಿ ಬಹಳಷ್ಟನ್ನು ಹಿಂದಕ್ಕೆ ಕಳಿಸಿಕೊಡಲು ನಿರ್ದೇಶನ ಕಳಿಸಿದೆ. ಇದು ರಾಜ್ಯ ಸರಕಾರಕ್ಕೆ ಗಂಭೀರ ತೊಂದರೆಗಳನ್ನು ಸೃಷ್ಟಿಸುತ್ತದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರು ಕೇಂದ್ರ ಗೃಹ ಸಚಿವ ಚವ್ಹಾಣ್‌ರವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. 1993ರಲ್ಲಿ ಇಲ್ಲಿ ಅಸ್ಸಾಂ ರೈಫಲ್ ತುಕಡಿಯ 13 ಕಂಪನಿಗಳಿದ್ದವು, ಈಗ ಒಂದೂ ಇಲ್ಲ ಎಂಬುದನ್ನು ಸುರ್ಜಿತ್ ಗೃಹಮಂತ್ರಿಗಳ ಗಮನಕ್ಕೆ ತಂದಿದ್ದಾರೆ. ಆದ್ದರಿಂದ ತಮ್ಮ ಉಪೇಕ್ಷೆಯ ನಿಲುವನ್ನು ಬಿಟ್ಟು ಸಚಿವಾಲಯದ ನಿರ್ದೇಶನಗಳನ್ನು ಹಿಂತೆಗೆದುಕೊಂಡು ಅಸ್ಸಾಂ ರೈಫಲ್‌ಗಳ ತುಕಡಿಗಳನ್ನು ಒದಗಿಸಬೇಕೆಂದು ರಾಜ್ಯ ಸರಕಾರದ ಕೇಳಿಕೆಯನ್ನು ತುರ್ತಾಗಿ ಪರಿಶೀಲಿಸಬೇಕು ಎಂದು ಆಗ್ರಹಪಡಿಸಿದ್ದಾರೆ.

ಇದೊಂದು ತುರ್ತು ಪ್ರಶ್ನೆ, ಏಕೆಂದರೆ ಡಿಸೆಂಬರ್‌ನಲ್ಲಿ ತ್ರಿಪುರಾದಲ್ಲಿ ಮುನಿಸಿಪಲ್ ಸಂಸ್ಥೆಗಳಿಗೆ ಚುನಾವಣೆ ನಡೆಯಲಿದೆ. ಶಾಂತಿಯನ್ನು ಸ್ಥಾಪಿಸುವಲ್ಲಿ ಅಡ್ಡಿ ಆತಂಕ ಬರುವಂತಹ ಯಾವುದೇ ಕ್ರಮ ಕೈಗೊಳ್ಳಬೇಡಿ ಎಂದು ಗೃಹಮಂತ್ರಿಗಳನ್ನು ಸುರ್ಜಿತ್ ಆಗ್ರಹಪಡಿಸಿದ್ದಾರೆ.

ಡಿ.ವೈ.ಎಫ್.ಐ. ವಾರ್ಷಿಕೋತ್ಸವದ ಅಂಗವಾಗಿ ಫುಟ್‌ಬಾಲ್ ಟೋರ್ನಮೆಂಟ್

ಡಿವೈಎಫ್‌ಐನ 15ನೇ ವಾರ್ಷಿಕೋತ್ಸವದ ಅಂಗವಾಗಿ ಚಿಕ್ಕರಾಯನ ಕೆರೆ ಕ್ರೀಡಾ ಮತ್ತು ಸಾಂಸ್ಕೃತಿಕ ಸಮಿತಿಯ ಆಶ್ರಯದಲ್ಲಿ 2ನೇ ವಾರ್ಷಿಕ ಫುಟ್‌ಬಾಲ್ ಟೋರ್ನಮೆಂಟ್ ಅನ್ನು 9 ಮತ್ತು 10 ಡಿಸೆಂಬರ್ 95ರಂದು ಪ್ರತಿಭಾ ಕ್ರೀಡಾಂಗಣ (ಸ್ವಾತಿ ಹೋಟೆಲ್ ಮುಂಭಾಗ) ಶೇಷಾದ್ರಿ ಪುರ, ಬೆಂಗಳೂರು-20 ಇಲ್ಲಿ ಜರುಗಲಿದೆ. ಆಸಕ್ತ ತಂಡಗಳು ಈ ಕೆಳಕಂಡ ವಿಳಾಸದಲ್ಲಿ ಸಂಪರ್ಕಿಸಿ ತಮ್ಮ ತಂಡದ ನೋಂದಣಿಯನ್ನು ಮಾಡಲು ಸಮಿತಿಯು ವಿನಂತಿಸಿದೆ.

ಸಂಪರ್ಕಿಸಬೇಕಾದ ವಿಳಾಸ:
ನಂ. 48, ಪೌರ ಕಾರ್ಮಿಕರ ವಸತಿ ಗೃಹ, ಚಿಕ್ಕರಾಯನಕೆರೆ, ಬೆಂಗಳೂರು 20

ಡಿ.ವೈ.ಎಫ್.ಐ. ಜಿಲ್ಲಾ ಸಮ್ಮೇಳನ

ಗುಲ್ಬರ್ಗ: ಶಿಕ್ಷಣ ಕ್ಷೇತ್ರವನ್ನೊಳಗೊಂಡಂತೆ ಇತರ ಎಲ್ಲಾ ರಂಗಗಳಲ್ಲಿಯೂ ಮತೀಯವಾದಿ ಶಕ್ತಿಗಳು ಜನವಿರೋಧಿ ಸಂಸ್ಕೃತಿಯನ್ನು ಬೆಳೆಸುತ್ತಿರುವುದರ ಬಗ್ಗೆ ಯುವಜನತೆ ಜಾಗ್ರತರಾಗಿರುವುದು ಇಂದಿನ ತುರ್ತು ಅವಶ್ಯವಾಗಿದೆ. ಅದಕ್ಕಾಗಿ ಜನಪರ ಸಾಂಸ್ಕೃತಿಕ ಹೋರಾಟ ಮಾಡುವುದು ಅನಿವಾರ್ಯವಾಗಿದೆ ಎಂದು ಖ್ಯಾತ ಸಾಹಿತಿ, ಮಹಾಚೈತ್ರ ನಾಟಕದ ಕರ್ತೃ ಡಾ.ಎಚ್.ಎಸ್.ಶಿವಪ್ರಕಾಶ್ ಅವರು ಹೇಳಿದರು.

ಅವರು ಅಕ್ಟೋಬರ್ 9 ರಂದು ಕಲಾನಿಕೇತನದಲ್ಲಿ ನಡೆದ ಡಿ.ವೈ.ಎಫ್.ಐ.ನ ಗುಲಬರ್ಗ ಜಿಲ್ಲಾ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿದ್ದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಜಿ.ಎನ್. ನಾಗರಾಜ್ ಅವರು ಮಾತನಾಡುತ್ತಾ ಯುವಜನತೆ ಜನಪರ ದಿಕ್ಕಿನಲ್ಲಿ ಭದ್ರಬುನಾದಿಯಾಗಿ ಕೆಲಸ ಮಾಡಬೇಕು. ಜಿಲ್ಲೆಯ ಅಭಿವೃದ್ಧಿಗಾಗಿ ವೈಚಾರಿಕ ಸಂಘರ್ಷ ಮಾಡುವುದು ಅವಶ್ಯವಾಗಿದೆ ಎಂದು ತಿಳಿಸುತ್ತಾ ಮೌಢ್ಯ ಅಂಧಾನುಕರಣೆ ತೊಲಗಿಸಲು ಯುವಜನತೆ ಹೋರಾಟ ಮಾಡುವುದು ಅನಿವಾರ್ಯವಾಗಿದೆ ಎಂದರು. ಡಿ.ವೈ.ಎಫ್.ಐ.ನ ರಾಜ್ಯ ಉಪಾಧ್ಯಕ್ಷರಾದ ಕಾಂ. ಬಾಲಕೃಷ್ಣಶೆಟ್ಟಿಯವರು ಸಮಾವೇಶದಲ್ಲಿ ಉಪಸ್ಥಿತರಿದ್ದು ಮಾತನಾಡಿದರು.

ಸಭೆಯ ಅಧ್ಯಕ್ಷತೆಯನ್ನು ನಾಗೇಂದ್ರಪ್ಪಾ ಅವರು ವಹಿಸಿದ್ದರು. ಡಿವೈಎಫ್‌ಐ ಸಂಚಾಲಕ ಹನುಮಂತ ಚವ್ಹಾಣ ಸ್ವಾಗತಿಸಿದರು. ಸಮಾವೇಶದಲ್ಲಿ ಡಿ.ವೈ.ಎಫ್.ಐ.ನ ಸಂಘಟನೆಯ ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ನಿಂಗಣ್ಣ ಸಗರ ವಕೀಲರು, ಉಪಾಧ್ಯಕ್ಷರುಗಳಾಗಿ ಹನುಮಂತ ಚವ್ಹಾಣ, ಗೋಪಾಲ ಜಾಧವ್, ರಮೇಶ ಪ್ರರಾವ್, ಕಾರ್ಯದರ್ಶಿಯಾಗಿ ಚಂದ್ರ, ಸಹಕಾರ್ಯದರ್ಶಿಗಳಾಗಿ ಅಂಬಾರಾವ್ ಮಾನ್ಪಡೆ, ಅಶೋಕ ಕಟಾರೆ, ಅಣ್ಣಾರಾಯ ಪದ್ದಿ, ಭಿಮಶ್ಯಾ ದಂಡಗೊರಕರ್, ಖಜಾಂಚಿಯಾಗಿ ಸಿದ್ದಣ್ಣ ಮುಕರಂಬಿಯವರನ್ನು ಆಯ್ಕೆ ಮಾಡಲಾಯಿತು.

ಎನ್ರೋನ್: ಬಿಜೆಪಿ-ಶಿವಸೇನೆ ನಿಜ ಬಣ್ಣ ಬಯಲು

ಸೆಪ್ಟೆಂಬರ್ ಆರಂಭದಲ್ಲಿ ಧಬೋಲ್‌ನ ಎನ್ರೋನ್ ವಿದ್ಯುತ್ ಯೋಜನೆಯನ್ನು ರದ್ದುಪಡಿಸಿ ತಮ್ಮ ಬೆನ್ನು ತಾವೇ ತಟ್ಟಿಕೊಂಡ ಶಿವಸೇನೆ-ಬಿಜೆಪಿ ಸರಕಾರ ಈಗ ಆದಾದ ಒಂದೇ ತಿಂಗಳೊಳಗೆ ಸಂಪೂರ್ಣ ತಿಪ್ಪರಲಾಗ ಹಾಕಿ ಎನ್ರೋನ್‌ನೊಂದಿಗೆ ಮರುಮಾತುಕತೆಯನ್ನು ಆರಂಭಿಸಿದೆ; ಸೆಪ್ಟೆಂಬರ್‌ನಲ್ಲಿ ನಡೆಸಿದ್ದು ಕೇವಲ ನಾಟಕ, ಆಗಿನ ದೊಡ್ಡದೊಡ್ಡ ಮಾತುಗಳೆಲ್ಲಾ ಬರೀ ಬೊಗಳೆ ಎಂಬುದನ್ನು ಅವರು ಸಾಬೀತುಪಡಿಸಿದ್ದಾರೆ. ಎನ್ರೋನ್‌ನ ಅಧಿಕಾರಿಗಳು ಮಹಾರಾಷ್ಟ್ರ ಸರಕಾರವನ್ನು ಲೆಕ್ಕಕ್ಕೆ ತಗೊಳ್ಳದೆ ನೇರವಾಗಿ ಬಾಳಠಾಕ್ರೆಯನ್ನೇ ಭೇಟಿಯಾಗಿ ಅವರೊಡನೆ ನೇರ ಮಾತುಕತೆ ನಡೆಸಿ ಬಿಜೆಪಿ-ಶಿವಸೇನೆ ಸರಕಾರಕ್ಕೆ ಅವಮಾನ ಮಾಡಿದರೂ ಅದನ್ನು ಸದ್ದಿಲ್ಲದೆ ನುಂಗಿಕೊಂಡಿರುವ ಬಿಜೆಪಿ ಮುಖಂಡತ್ವ ತನ್ನ ಬೊಗಳೆ ಏನೇ ಇದ್ದರೂ ಸರಕಾರದ 'ರಿಮೋಟ್ ಕಂಟ್ರೋಲ್' ಇರುವುದು ಶಿವಸೇನೆಯ ಮುಖ್ಯಸ್ಥರ ಕೈಯಲ್ಲಿ ಎಂದು ಜಗಜ್ಜಾಹೀರು ಮಾಡಿಕೊಂಡಿದ್ದಾರೆ.

"ಈ ಘಟನೆ ಮುಖ್ಯಮಂತ್ರಿಯ ಸ್ಥಾನಕ್ಕೆ ಅವಮಾನ ಮಾಡಿದ್ದಲ್ಲದೆ ಒಬ್ಬ ಫ್ಯಾಸಿಸ್ಟ್ ಮುಖಂಡ ಹಾಗೂ ಒಂದು ಅಮೇರಿಕನ್ ಬಹುರಾಷ್ಟ್ರೀಯ ಕಂಪನಿ ಸೇರಿಕೊಂಡು ಹೇಗೆ ಪ್ರಜಾಪ್ರಭುತ್ವ ವಿಧಿ ವಿಧಾನಗಳನ್ನು ಮೆಟ್ಟಿ ಹಾಕಬಲ್ಲರು ಎಂಬುದರ ಸಂಕೇತ" ಎಂದು ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕೆ "ಪೀಪಲ್ಸ್ ಡೆಮಾಕ್ರಸಿ" ಸಂಪಾದಕೀಯ ಹೇಳಿದೆ.

ಹಿಂದೆ ಮಹಾರಾಷ್ಟ್ರ ಸರಕಾರ ಮರುಮಾತುಕತೆಯಾಗಬೇಕಾದರೆ ಎನ್ರೋನ್ ಆರಂಭಿಸಿರುವ ಕಾನೂನಿನ ಕ್ರಮಗಳನ್ನು ನಿಲ್ಲಿಸಬೇಕು ಎಂದು ಹೇಳುತ್ತಿತ್ತು. ಈಗ ಠಾಕ್ರೆಯವರ 'ರಿಮೋಟ್ ಕಂಟ್ರೋಲ್' ಪ್ರಯೋಗದ ನಂತರ ಅಂತಹ ಯಾವ ಶರತ್ತನ್ನೂ ಹಾಕದೆ ಮರುಮಾತುಕತೆ ಆರಂಭಿಸಿದೆ. ಹಿಂದಿನ ಕಾಂಗ್ರೆಸ್(ಐ) ಸರಕಾರ ಕೇವಲ ಮೊದಲ ಘಟ್ಟದ ಯೋಜನೆಗೆ ಅನುಮತಿ ನೀಡಿತ್ತು. ಈಗ ಈ ಯೋಜನೆಯ ಎರಡೂ ಯೋಜನೆಗಳ ಬಗ್ಗೆ ಶಿವಸೇನೆ-ಬಿಜೆಪಿ ಸರಕಾರ ಮಾತುಕತೆ ಆರಂಭಿಸಿ ಈ ಬಹುರಾಷ್ಟ್ರೀಯ ಕಂಪನಿಯ ಎದುರು ಶರಣಾಗಿದೆ. ಈ ಯೋಜನೆಯು ಮರು ಆರಂಭವಾಗಬೇಕಾದರೆ ಹೊಸ ಸ್ಪರ್ಧಾತ್ಮಕ ಬಿಡ್ಡಿಂಗ್‌ನ ಮೂಲಕ ಮಾತ್ರ ಎಂಬ ನಿಲುವಿಗೂ ತಿಲಾಂಜಲಿ ನೀಡಿ ಈ ಬಿಜೆಪಿ-ಶಿವಸೇನೆ ಸರಕಾರ ಬಹುರಾಷ್ಟ್ರೀಯ ಕಂಪನಿಗಳೆದುರು ಹೋರಾಡುವ ತನ್ನ ಅಸಮರ್ಥತೆಯನ್ನು ಪ್ರದರ್ಶಿಸಿದೆ.

ಒಂದೆಡೆ 'ಸ್ವದೇಶಿ'ಯ ಮಂತ್ರ ಜಪಿಸುತ್ತಾ ಇನ್ನೊಂದೆಡೆ ಅದರ ಮಹಾರಾಷ್ಟ್ರ ಹಾಗೂ ಗುಜರಾತ್ ಸರಕಾರಗಳು ಯಾವುದೇ ಹತೋಟಿಯಿಲ್ಲದೆ ಎಲ್ಲಾ ರೀತಿಯ ಬಹುರಾಷ್ಟ್ರೀಯ ಕಂಪನಿಗಳ ಯೋಜನೆಗಳನ್ನು ಸ್ವೀಕರಿಸುತ್ತಿರುವ ಶೋಚನೀಯ ಸ್ಥಿತಿಗೆ ಬಿಜೆಪಿ ಇಳಿದಿದೆ. ಸದಾ ಭಾರತೀಯ ಸಂಸ್ಕೃತಿಯ ಬಗ್ಗೆ ಕೊರೆಯುವ ಬಿಜೆಪಿಯ ಈ ಎರಡು ಸರಕಾರಗಳು ಅಮೇರಿಕಾದ ಬಹುರಾಷ್ಟ್ರೀಯ ಮನರಂಜನಾ ಉದ್ದಿಮೆ ವಾರ್ನರ್ ಬ್ರದರ್ಸ್‌ಗೆ ಮಹಾರಾಷ್ಟ್ರ ಹಾಗೂ ಗುಜರಾತ್‌ಗಳಲ್ಲಿ ಸಿನೆಮಾ ಕಾಂಪ್ಲೆಕ್ಸ್‌ಗಳನ್ನು ಕಟ್ಟಲು ಅವಕಾಶ ನೀಡಿತ್ತು ಎಂಬುದು ಇನ್ನೊಂದು ಮೋಜಿನ ಸಂಗತಿ. ಆಲೂಗೆಡ್ಡೆ ಚಿಪ್ಸ್ ಮಾಡುವ ತಂತ್ರಜ್ಞಾನ ನಮಗೆ ಬೇಕಿಲ್ಲ ಎನ್ನುವವರಿಗೆ ಸಿನೆಮಾ ತಂತ್ರಜ್ಞಾನದ ಉದ್ದಿಮೆಯಲ್ಲಿ ಕೂಡಾ ನಾವು ಹಿಂದೆ ಬಿದ್ದಿಲ್ಲ ಎಂದು ತಿಳಿದಿಲ್ಲವೇ? ಪಶ್ಚಿಮ ಬಂಗಾಳ ಸರಕಾರ ವಾರ್ನರ್ ಬ್ರದರ್ಸ್‌ಗೆ ಅವಕಾಶ ನಿರಾಕರಿ...

ಡಿಸೆಂಬರ್ ಚುನಾವಣೆಯಲ್ಲಿ ವಿಜಯದ ನಿರೀಕ್ಷೆ ತುಂಬುವ ಹುಮ್ಮಸ್ಸಿನ ವಾತಾವರಣದಲ್ಲಿ ಮಾಸ್ಕೋದಲ್ಲಿ ಅಕ್ಟೋಬರ್ ಕ್ರಾಂತಿಯ ದಿನಾಚರಣೆ

ಮಹಾನ್ ಅಕ್ಟೋಬರ್ ಕ್ರಾಂತಿಯ 78ನೇ ವಾರ್ಷಿಕೋತ್ಸವದ ದಿನದಂದು ಮಾಸ್ಕೋದಲ್ಲಿ ನಡೆದಿರುವ ರ್‍ಯಾಲಿ, 1991ರಲ್ಲಿ ಸೋವಿಯತ್ ಒಕ್ಕೂಟ ಕುಸಿದ ನಂತರ ನಡೆದಿರುವ ಅತ್ಯಂತ ದೊಡ್ಡ ರ್‍ಯಾಲಿ ಎಂದು ವರದಿಯಾಗಿದೆ. ಕೆಂಬಾವುಟಗಳು, ಕುಡುಗೋಲು-ಸುತ್ತಿಗೆಯ ಕಟೌಟ್‌ಗಳು, ಯೆಲ್ಟ್‌ಸಿನ್ ಸರಕಾರದ ವಿರುದ್ಧ ಘೋಷಣಾ ಫಲಕಗಳು ಇದೇ ನವಂಬರ್ 7ರಂದು ಮಾಸ್ಕೋದಲ್ಲಿ ಸಾವಿರ ಸಾವಿರ ಸಂಖ್ಯೆಯಲ್ಲಿ ಕಂಡು ಬಂದವು ಎಂದು ಐಎನ್ಎನ್ ವರದಿ ಮಾಡಿದೆ.

ಕೆಂಪು ಚೌಕ ಮಾಸ್ಕೋದಲ್ಲಿ ಕ್ರಾಂತಿ ದಿನವನ್ನು ಆಚರಿಸುವ ತಾಣ. ಯೆಲ್ಟ್‌ಸಿನ್‌ರ ಪೋಲೀಸರು ಅಂದು ಮೆರವಣಿಗೆ ಅಲ್ಲಿಗೆ ಪ್ರವೇಶಿಸದಂತೆ ತಡೆದರು. ರ್‍ಯಾಲಿ ಪಕ್ಕದ ಕಾರ್ಲ್ ಮಾರ್ಕ್ಸ್ ಪ್ರತಿಮೆಯೆದುರು ನಡೆಯಿತು. ಸೋವಿಯತ್ ಒಕ್ಕೂಟವನ್ನು ಕಳೆದುಕೊಂಡ ಬಗ್ಗೆ ಅಪಾರ ನೋವು, ಅದರ ಜತೆಗೆ ಪುನರುಜ್ಜೀವನಗೊಂಡ ಕಮ್ಯುನಿಸ್ಟ್ ಪಕ್ಷ ಮುಂಬರುವ ಡಿಸೆಂಬರ್ ಚುನಾವಣೆಗಳಲ್ಲಿ ಬಹುಮತ ಪಡೆಯುತ್ತದೆಂಬ ನಿರೀಕ್ಷೆ ಈ ರ್‍ಯಾಲಿಯಲ್ಲಿ ವ್ಯಕ್ತಗೊಂಡಿತು. "ನಾನು ಸಮಾಜವಾದದ ಧ್ಯೇಯ ಸಾಧನೆಗಾಗಿ ನನ್ನ ಜೀವನ ಕಳೆದೆ. ನಮ್ಮ ದೇಶದ ಅತ್ಯಂತ ಉತ್ತಮಾಂಶಗಳನ್ನೆಲ್ಲಾ ಈ ಪ್ರಜಾಪ್ರಭುತ್ವವಾದಿಗಳೆಂದು ಹೇಳಿಕೊಳ್ಳುವ ದೇಶದ್ರೋಹಿಗಳು ನಾಶ ಮಾಡುವುದನ್ನು ನೋಡುವುದು ಅತ್ಯಂತ ನೋವಿನ ಅನುಭವ. ಆದರೆ ನಾನು ನನ್ನ ನೀತಿಗಳನ್ನು ಬಿಟ್ಟಿಲ್ಲ. ಕೊನೆಯ ಉಸಿರಿನವರೆಗೂ ನನ್ನ ಸಮಾಜವಾದಿ ತಾಯ್ನಾಡಿಗಾಗಿ ಹೋರಾಡುತ್ತೇನೆ' ಎಂದು 63 ವರ್ಷದ ನೀನಾ ಗೋಂತರೋವಾ ಹೇಳಿದುದಾಗಿ ದಿಲ್ಲಿಯ ಹಿಂದೂಸ್ತಾನ್ ಟೈಮ್ಸ್ ವರದಿ ಮಾಡಿದೆ.

ರಶ್ಯನ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷ(ಸಿಪಿಆರ್‌ಎಫ್) ಮುಖಂಡ ಗೆನ್ನಾಡಿ ಝ್ಯುಗನೋವ್ ಮಾತನಾಡುತ್ತಾ ಕಮ್ಯುನಿಸ್ಟರು ಚುನಾವಣೆ ಎದುರಿಸಲು ಸಿದ್ಧರಾಗಿದ್ದಾರೆ, ಚುನಾವಣಾ ಪ್ರಕ್ರಿಯೆಯ ಮೂಲಕ ಮರಳಿ ಬರುತ್ತಾರೆ ಎಂದರು. ಕಮ್ಯುನಿಸ್ಟರ ನೇತೃತ್ವದಲ್ಲಿ ಎಡಪಂಥೀಯರ ವಿಜಯದ ನಿರೀಕ್ಷೆ ಈ ವರ್ಷದ ಅಕ್ಟೋಬರ್ ಕ್ರಾಂತಿ ದಿನಾಚರಣೆಯಲ್ಲಿ ಹೊಸ ಹುಮ್ಮಸ್ಸು ಹಾಗೂ ಹೊಸ ದೃಢ ನಿರ್ಧಾರಗಳನ್ನು ತುಂಬಿದಂತಿತ್ತು. ಅತ್ತ ಕಮ್ಯುನಿಸ್ಟ್ ವಿರೋಧಿಗಳನ್ನು ಇದು ಭಯ ವಿಹ್ವಲಗೊಳಿಸಿದೆ ಎಂದೂ ಪತ್ರಿಕಾ ವರದಿಗಳಿಂದ ತಿಳಿದುಬರುತ್ತಿದೆ.

ದಕ್ಷಿಣ ಕೊರಿಯಾ: ಮಾಜಿ ಅಧ್ಯಕ್ಷರ 'ಹೊಲಸು ಹಣ'ದ ವಿವಾದ

ಯುರೋಪಿನಲ್ಲಿ ನ್ಯಾಟೋದ ಮುಖ್ಯಸ್ಥನಾಗಿದ್ದಾತ ಭ್ರಷ್ಟಾಚಾರದ ಆಪಾದನೆ ಹೊತ್ತು ರಾಜೀನಾಮೆ ನೀಡಿದ ಬೆನ್ನ ಹಿಂದೆಯೇ ಇತ್ತ ಏಶ್ಯಾದಿಂದ ಇನ್ನೊಂದು ಭ್ರಷ್ಟಾಚಾರದ ಸುದ್ದಿ ಬಂದಿದೆ. ಅಮೇರಿಕಾದ ಕೃಪಾಕಟಾಕ್ಷದಲ್ಲಿರುವ ಒಂದು 'ಏಶ್ಯಾದ ಹುಲಿ' ಎನಿಸಿರುವ ದಕ್ಷಿಣ ಕೊರಿಯಾದ ಹಿಂದಿನ ಮಿಲಿಟರಿ ಸರ್ವಾಧಿಕಾರಿ ರೋಹ್ ತೇವೂ ತನ್ನ ಅಧಿಕಾರ ಕಾಲದಲ್ಲಿ 654 ಮಿಲಿಯ ಡಾಲರ್(ಅಂದರೆ ಸುಮಾರು 2000 ಕೋಟಿ ರೂ.ಗಳನ್ನು) ಗುಪ್ತವಾಗಿ ಸಂಪಾದಿಸಿ ಬ್ಯಾಂಕುಗಳಲ್ಲಿ ಕಳ್ಳ ಹೆಸರಿನಲ್ಲಿ ಇಟ್ಟಿದ್ದಾನೆ ಎಂಬ ಸುದ್ದಿ ದಕ್ಷಿಣ ಕೊರಿಯಾದ ಜನತೆಯನ್ನು ತಲ್ಲಣಗೊಳಿಸಿದೆ. ಇಷ್ಟೇ ಅಲ್ಲ, ಹಣದಲ್ಲಿ 8-10 ಕೋಟಿ ರೂಪಾಯಿಗಳಷ್ಟು 1992ರಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯ ಪ್ರತಿಪಕ್ಷದ ಅಭ್ಯರ್ಥಿ ಕಿಮ್ ಧಾಯೆ ಜಂಗ್ ಗೂ, ಸುಮಾರು 500 ಕೋಟಿ ರೂ.ಗಳಷ್ಟು ಆಳುವ ಪಕ್ಷದ ಅಭ್ಯರ್ಥಿ ಹಾಗೂ ಈಗ ಅಧ್ಯಕ್ಷರಾಗಿರುವ ಕಿಮ್ ಯಾಂಗ್ ಸಾಮ್‌ಗೂ ಕೊಟ್ಟಿರುವುದಾಗಿ ವರದಿಯಾಗಿದೆ. ಅಧ್ಯಕ್ಷ ಕಿಮ್ ಯಾಂಗ್‌ಸಾಮ್ ಇದನ್ನು ನಿರಾಕರಿಸಿದ್ದಾರೆ. ಈ 'ಹೊಲಸು ಹಣ'ದಲ್ಲಿ ತನ್ನ ಪಾತ್ರವೇನೂ ಇಲ್ಲ, ಅದು ರೋಹ್ ತೇ ಮಾ ಕಾನೂನುಬಾಹಿರವಾಗಿ ಗಳಿಸಿದ ಹಣ. ಬಹುಶಃ ಆತ ಪಕ್ಷದ ಅಧ್ಯಕ್ಷನಾಗಿದ್ದಾಗ ಈ ಹಣವನ್ನು ಪಕ್ಷಕ್ಕೆ ಕೊಟ್ಟಿರಬಹುದು" ಎಂದಿದ್ದಾರಂತೆ.

ಅಕ್ಟೋಬರ್ 27ರಂದು ಟೆಲಿವಿಷನ್‌ನಲ್ಲಿ ಕಣ್ಣೀರು ಸುರಿಸುತ್ತಾ ತಾನು ದೊಡ್ಡ ದೊಡ್ಡ ವ್ಯಾಪಾರಸ್ಥರಿಂದ 654 ಮಿಲಿಯ ಡಾಲರ್ ಸಂಗ್ರಹಿಸಿರುವುದಾಗಿ ರೋಹ್ ತೇ ಮಾ ಒಪ್ಪಿಕೊಂಡಿದ್ದಾರೆ. ಇಷ್ಟೊಂದು ಅಗಾಧ ಹಣ ಇದರಲ್ಲಿ ಹೇಗೆ ಬಂತು ಎಂಬ ಬಗ್ಗೆ ಆಮೂಲಾಗ್ರ ತನಿಖೆ ನಡೆಸಬೇಕೆಂದು ಒತ್ತಾಯಕ್ಕೆ ಸರಕಾರ ಮಣಿಯಬೇಕಾಗಿ ಬಂದಿದೆ.

ವಿವಿಧ ದೊಡ್ಡ ಕೈಗಾರಿಕೋದ್ಯಮಿಗಳಿಗೆ, ವ್ಯಾಪಾರಿಗಳಿಗೆ ಲೈಸೆನ್ಸ್ ಇತ್ಯಾದಿ ಕೊಡುವಾಗ ಈ 'ಹೊಲಸು ಹಣ' ಸಂಪಾದಿಸಿದುದಾಗಿ ಹೇಳಲಾಗುತ್ತಿದೆ. 'ಉದಾರೀಕರಣ'ದ ನಾಲ್ಕು ವರ್ಷಗಳಲ್ಲಿ ನಾಲ್ಕು ದೊಡ್ಡ ಹಗರಣಗಳನ್ನು ಕಂಡ ಭಾರತೀಯರಿಗೆ 'ಉದಾರೀಕರಣ'ದ ಯಶಸ್ಸಿನ ಗಾಥೆಯೆನಿಸಿದ ದಕ್ಷಿಣ ಕೊರಿಯಾದ 'ಹುಲಿ'ಯ ಈ ಭ್ರಷ್ಟಾಚಾರ ಈಗ ಅಷ್ಟೇನೂ ಆಶ್ಚರ್ಯ ತರಲಿಕ್ಕಿಲ್ಲ.

ಜಾಫ್ನಾದಲ್ಲಿ ಗಂಭೀರ ಪರಿಸ್ಥಿತಿ

ಪೊಲಿಟ್ ಬ್ಯೂರೋ ಆತಂಕ

ಶ್ರೀಲಂಕಾ ಸರಕಾರ ಮತ್ತು ಎಲ್.ಟಿ.ಟಿ.ಇ. ಉಗ್ರಗಾಮಿಗಳ ನಡುವಿನ ಘರ್ಷಣೆ ತೀವ್ರಗೊಳ್ಳುತ್ತಿದೆ. ಇದನ್ನು ಬರೆಯುವ ವೇಳೆಗೆ ಶ್ರೀಲಂಕಾದ ಸೈನ್ಯ ತುಕಡಿಗಳು ಜಾಫ್ನಾದ ಉತ್ತರ ಭಾಗದ ವಾಸನಗರವನ್ನು ವಶಪಡಿಸಿಕೊಂಡು ಜಾಫ್ನಾ ನಗರದತ್ತ ಎಚ್ಚರಿಕೆಯಿಂದ ಸಾಗುತ್ತಿದ್ದಾರೆ, ಎಲ್.ಟಿ.ಟಿ.ಇ. ಗಳು ಪ್ರತಿರೋಧ ಒಡ್ಡುತ್ತಿದ್ದರೂ ಹಿಂಜರಿಯುತ್ತಿದ್ದಾರೆ ಎಂಬ ಸುದ್ದಿ ಬಂದಿದೆ. ಈ ಕಾದಾಟದಲ್ಲಿ ಹಲವಾರು ಮುಗ್ಧ ನಾಗರಿಕರು ಅಪಾರ ತೊಂದರೆಗಳನ್ನು ಅನುಭವಿಸಬೇಕಾಗಿ ಬಂದಿದೆ.

ತಮಿಳು ಜನ ದೊಡ್ಡ ಸಂಖ್ಯೆಯಲ್ಲಿ ಜಾಫ್ನಾ ಬಿಟ್ಟು ಓಡಿ ಹೋಗುತ್ತಿರುವ ಬಗ್ಗೆ ಹಾಗೂ ಅದರಿಂದಾಗಿ ಹಸಿವು, ರೋಗ-ರುಜಿನಗಳು ಹೆಚ್ಚುತ್ತಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ತನ್ನ ತೀವ್ರ ಆತಂಕ ವ್ಯಕ್ತಪಡಿಸಿದೆ. ಸಂಕಟಪೀಡಿತ ಜನರಿಗೆ ಆಹಾರ, ಔಷಧಿ ಮತ್ತಿತರ ಪರಿಹಾರ ಸಾಮಗ್ರಿಗಳನ್ನು ಒದಗಿಸಬೇಕು ಎಂದು ಪಿ.ಬಿ. ಶ್ರೀಲಂಕಾ ಸರಕಾರಕ್ಕೆ ಮನವಿ ಮಾಡಿದೆ. ಈ ಪ್ರಯತ್ನಗಳಿಗೆ ಪೂರಕವಾಗಿ ಅಂತರ್‌ರಾಷ್ಟ್ರೀಯ ನೆರವೂ ಬರಬೇಕು ಎಂದು ಅದು ಹೇಳಿದೆ.

ಅಮೇರಿಕಾದ ಕಪ್ಪು-ಬಿಳುಪು ಒಡಕು ತೋರಿದ 'ಓಜೆ' ಪ್ರಕರಣ

ಅಮೇರಿಕದೊಳಗೊಂದು ಇಣುಕು

-ಶರತ್ಚಂದ್ರ

'ಓಜೆ' ಪ್ರಕರಣದ ತೀರ್ಪು ಇಡೀ ಅಮೇರಿಕವನ್ನು ಆಳವಾಗಿ ನಡುಗಿಸಿದ ಇತ್ತೀಚಿನ ಘಟನೆ. ಅಮೇರಿಕದಲ್ಲಿ ಬೇರೂರಿರುವ ವರ್ಣ ಭೇದದ ಕುರೂಪವನ್ನು ಬಯಲು ಮಾಡಿತು.

ಓಜೆ ಪ್ರಕರಣ ಒಂದು ಕೊಲೆ ಪ್ರಕರಣ. ಕೊಲೆಯಾದವರು ಓಜೆಯಿಂದ ಪ್ರತ್ಯೇಕಿತಳಾದ ಆತನ ಪತ್ನಿ ಮತ್ತು ಆಕೆಯ ಗೆಳೆಯ. ಆಪಾದಿತ ಓಜೆ ಸಿಂಪ್ಸನ್ 'ರಾಷ್ಟ್ರೀಯ ಹೀರೋ' ಆದ ಫುಟ್ ಬಾಲ್ ಆಟಗಾರ. ಆಟದಿಂದ ನಿವೃತ್ತಿ ಆದ ಮೇಲೆ ಭಾರೀ ಹಣ ಸಂಪಾದಿಸುತ್ತಿದ್ದ ಕ್ರೀಡಾ ವರದಿಗಾರ, ಟಿವಿ ಖ್ಯಾತಿಯ [illegible]. ಬಿಳಿಯ-ಕರಿಯ ಇಬ್ಬರಿಗೂ ಆರಾಧ್ಯ ದೈವ. ಇಂತಹ ಕೊಲೆಗಳು ಅಮೇರಿಕದಲ್ಲಿ ವಿಶೇಷ ಅಲ್ಲ. ವಿಶೇಷವೆಂದರೆ ಓಜೆ ಕರಿಯ. ಕೊಲೆಯಾದ ಪತ್ನಿ ಹಾಗೂ ಆಕೆಯ ಗೆಳೆಯ ಇಬ್ಬರೂ ಬಿಳಿಯರು.

ಕಳೆದ ಸುಮಾರು ಒಂದೂವರೆ ವರ್ಷದಿಂದ ನಡೆಯುತ್ತಿದ್ದ ಈ ಕೊಲೆ ಪ್ರಕರಣದ ವಿಚಾರಣೆ, ಅಮೇರಿಕದ ಸಾಮಾಜಿಕ ವರ್ಣ ಭೇದ ವ್ಯವಸ್ಥೆ, ಕರಿಯ-ಬಿಳಿಯರ ನಡುವಣ ಕಂದರವನ್ನು ಎತ್ತಿ ತೋರಿಸಿತು. ಅಮೇರಿಕದ ಕ್ರಿಮಿನಲ್ ನ್ಯಾಯ ವ್ಯವಸ್ಥೆಯ ಬಗ್ಗೆ ಕರಿಯರಲ್ಲಿ ಎಷ್ಟು ಅವಿಶ್ವಾಸ, ರೋಷ ಇದೆ ಎಂದು ಗೊತ್ತುಪಡಿಸಿತು.

ಓಜೆ ಪ್ರಕರಣದಲ್ಲಿ ಕೊನೆಗೆ ಜ್ಯೂರಿ ಆತ ನಿರಪರಾಧಿ ಎಂದು ತೀರ್ಪು ನೀಡಿತು. ಓಜೆ ಪ್ರಕರಣ [illegible] ನಿರೀಕ್ಷೆಯ ವಾತಾವರಣವನ್ನು ಸೃಷ್ಟಿಸಿತ್ತೆಂದರೆ - ತೀರ್ಪಿನ ಹಿಂದಿನ ದಿನ ಅಧ್ಯಕ್ಷ ಕ್ಲಿಂಟನ್ ತೀರ್ಪು ಏನೇ ಇರಲಿ ದೇಶದ ಐಕ್ಯತೆ, ಶಾಂತಿ ಕಾಪಾಡಬೇಕು ಎಂದು ಮನವಿ ಮಾಡಬೇಕಾಯಿತು! ಇಡೀ ದೇಶದಾದ್ಯಂತ ಪೋಲೀಸರಿಗೆ ತುರ್ತು ಸ್ಥಿತಿಗೆ ತಯಾರಿರಲು ಆಜ್ಞೆ ಇತ್ತು. ತೀರ್ಪಿಗೆ ಪ್ರತಿಕ್ರಿಯೆಯಾಗಿ ಬಿಳಿಯರ-ಕರಿಯರ ನಡುವೆ ದಂಗೆ ಆಗಬಹುದು ಎಂಬ ಆತಂಕ ಇತ್ತು.

ಹಳೆಯ ತಾರತಮ್ಯ

ಅಮೇರಿಕದ ಕರಿಯರ ವಿರುದ್ಧ ಅಲ್ಲಿನ ಪೋಲೀಸ್, ಕ್ರಿಮಿನಲ್ ನ್ಯಾಯ ವ್ಯವಸ್ಥೆ ತಾರತಮ್ಯ ತೋರುತ್ತದೆ ಎನ್ನುವುದು ಹಳೆಯ ಸತ್ಯ. ಕರಿಯ ಆಪಾದಿತನನ್ನು ಅಪರಾಧಿ ಎಂದು ಆ ವ್ಯವಸ್ಥೆ ಮೊದಲೇ ತೀರ್ಮಾನಿಸಿರುತ್ತದೆ ಎಂದು ಕರಿಯರ ಅನುಭವ. ಅದು ಸಾರಿಗೆ ನಿಯಮಗಳ ಉಲ್ಲಂಘನೆ ಇರಲಿ, ಇತರ ಆಪಾದನೆಗಳಿರಲಿ ಕರಿಯನನ್ನು ಕೂಡಲೇ ಅಪರಾಧಿ ಮಾಡಲಾಗುತ್ತದೆ. ಮೂರೂವರೆ ವರ್ಷಗಳ ಹಿಂದೆ ಲಾಸ್ ಏಂಜಲೀಸ್‌ನಲ್ಲಿ(ಓಜೆ ಪ್ರಕರಣ ನಡೆದದ್ದು ಅಲ್ಲೇ) ರೋಡ್ನಿ ಕಿಂಗ್ ಎಂಬ ಕರಿಯನಿಗೆ ನಾಲ್ಕು ಬಿಳಿಯ ಪೋಲೀಸ್ ಅಧಿಕಾರಿಗಳು ದನ ಬಡಿದ ಹಾಗೆ ಬಡಿದ ಪ್ರಕರಣದಲ್ಲಿ ಯಾವುದೇ ಶಿಕ್ಷೆ ಆಗದೆ ಬಿಡುಗಡೆ ಆದದ್ದು-ಎಲ್ಲಾ ಕರಿಯರಲ್ಲಿ ರೋಷ ಹುಟ್ಟಿಸಿತ್ತು. ಆ ಪ್ರಕರಣದ ನಂತರ ಅಮೇರಿಕದ ಇತ್ತೀಚಿನ ಚರಿತ್ರೆಯಲ್ಲಿ ಅತ್ಯಂತ [illegible]

[illegible]ಚೆಗೆ ಹಲವಾರು ಮುಖ್ಯ ನಗರಗಳಲ್ಲಿ(ಫಿಲಿಡೆಲ್ಫಿಯಾ ಇತ್ಯಾದಿ) ಬಿಳಿಯ ವರ್ಣದ್ವೇಷಿ ಪೋಲೀಸ್ ಅಧಿಕಾರಿಗಳು 'ಸೃಷ್ಟಿಸಿದ' ಪುರಾವೆ ಆಧಾರದ ಹಲವಾರು ನಿರ್ದೋಷಿ ಕರಿಯರು ಜೀವಾವಧಿ ಮರಣ ದಂಡನೆಗೆ ಗುರಿಯಾದ ನೂರಾರು ಪ್ರಕರಣಗಳು ಬೆಳಕಿಗೆ ಬಂದಿದ್ದವು. ಕರಿಯರ ಮನೆಯಲ್ಲಿ ಮಾದಕ ದ್ರವ್ಯಗಳನ್ನು ಇಟ್ಟು, ಅವರನ್ನು ಬಂಧಿಸುವ ದೊಡ್ಡ ರ್‍ಯಾಕೆಟನ್ನು ಇತ್ತೀಚೆಗೆ ಕಂಡುಹಿಡಿಯಲಾಗಿತ್ತು.

ಇವರ ಹಿನ್ನೆಲೆಯಲ್ಲಿ ಓಜೆ ಪ್ರಕರಣ ವಿಪರೀತ ಕುತೂಹಲ ಕೆರಳಿಸಿತ್ತು. ಆದ್ದರಿಂದ ಪ್ರಕರಣ 'ಜನಾಂಗೀಯ ಬಣ್ಣ'ದಲ್ಲಿ ಮುಳುಗಿತ್ತು. ಓಜೆಯ ವಿರುದ್ಧ ಸಾಂದರ್ಭಿಕ ಪುರಾವೆ ಅಲ್ಲದೆ ನೇರ ಪುರಾವೆ ಯಾವುದೂ ಇರಲಿಲ್ಲ. ಪ್ರಕರಣ ಮುಂದುವರೆದಂತೆ ಎರಡು ನೇರ ಪುರಾವೆಗಳು(ಕೊಲೆಯ ಸ್ಥಳದಲ್ಲಿ ರಕ್ತದ ಗುರುತುಗಳ ಡಿಎನ್‌ಎ ಪರೀಕ್ಷಣಾ ವರದಿ, ಕೊಲೆಗೆ ಬಳಸಲಾದ ಕೈಚೀಲ ಓಜೆಗೆ ಸೇರಿದ್ದು) 'ಸುಳ್ಳು' ಎಂದು ಹೊರಬಂತು. ಈ ಎರಡು ಪುರಾವೆಯನ್ನು ಒಬ್ಬ ವರ್ಣ ದ್ವೇಷಿ ಪೋಲೀಸ್ ಅಧಿಕಾರಿ ತಾನು ಸೃಷ್ಟಿಸಿದ್ದು ಎಂದು ತಪ್ಪೊಪ್ಪಿಕೊಂಡಿದ್ದು ಪ್ರಕರಣಕ್ಕೆ ಕುತೂಹಲಕಾರಿ ತಿರುವು ನೀಡಿತು. ಈ ಎರಡು ಪುರಾವೆಗಳು ಬಿದ್ದು ಹೋದ ಮೇಲೆ ಜ್ಯೂರಿ ಓಜೆ ನಿರಪರಾಧಿ ಎಂದು ಸ್ವಾಭಾವಿಕವಾಗಿಯೇ ನಿರ್ಧರಿಸಿದರು.

ವರ್ಣಭೇದಕ್ಕೆ ಹಿಡಿದ ಕನ್ನಡಿ

ಆ ನಿರ್ಧಾರಕ್ಕೆ ಬಂದ ಪ್ರತಿಕ್ರಿಯೆ ಅಮೇರಿಕಾದ ವರ್ಣಭೇದಕ್ಕೆ ಹಿಡಿದ ಕನ್ನಡಿ. ಕಳೆದ ಹಲವು ತಿಂಗಳುಗಳಿಂದ ಅಮೇರಿಕಾ ಈ ಪ್ರಕರಣದ ಬಗ್ಗೆ ಅಭಿಪ್ರಾಯದಲ್ಲಿ ಪೂರ್ತಿಯಾಗಿ ಒಡೆದಿತ್ತು. ಬಿಳಿಯರೆಲ್ಲಾ ಓಜೆ ಅಪರಾಧಿ ಎಂದು ತೀರ್ಮಾನಿಸಿದ್ದರು. ಕರಿಯರೆಲ್ಲ ಆತ ನಿರಪರಾಧಿ ಎಂದು ನಿರ್ಧರಿಸಿದ್ದರು. ಆದ್ದರಿಂದ ತೀರ್ಪು ಹೊರಬಿದ್ದಾಗ ಕರಿಯರು ಉತ್ಸವ ಆಚರಿಸಿದರೆ, ಬಿಳಿಯರೆಲ್ಲಾ 'ನ್ಯಾಯಕ್ಕೆ ಈ ದೇಶದಲ್ಲಿ ಉಳಿಗಾಲವಿಲ್ಲ' ಎಂದು ಗೋಳಾಡಿದರು! ಈ ಎರಡು ವಿರುದ್ಧ ಪ್ರತಿಕ್ರಿಯೆಗಳು ಅಮೇರಿಕಾದ ಸ್ವಲ್ಪ ತಲೆ ನೆಟ್ಟಗಿರುವ ಎಲ್ಲರನ್ನೂ, ಆಳುವ ವಲಯಗಳನ್ನೂ ನಡುಗಿಸಿದವು.

ಬಿಳಿಯರಲ್ಲಿ ಭಾರಿ ದೊಡ್ಡ ಬಹುಸಂಖ್ಯಾತರು ತೀರ್ಪಿನ ನಂತರ ಓಜೆ ಕೊಲೆ ಮಾಡಿಲ್ಲವಾದರೆ ಕೊಲೆ ಮಾಡಿದ್ದು ಯಾರು ಎಂಬ ಪ್ರಶ್ನೆ ಕೇಳಲಾರಂಭಿಸಿದರು. ತಪ್ಪೊಪ್ಪಿಕೊಂಡ ಬಿಳಿಯ ಅಧಿಕಾರಿಯನ್ನು ಓಜೆ ಖರೀದಿಸಿದ ಎಂದು ವದಂತಿ ಹರಡಲಾಯಿತು. ಕರಿಯರು ಹಿಂಸಾತ್ಮಕವಾಗಿ ಪ್ರತಿಕ್ರಿಯಿಸುತ್ತಾರೆ ಎಂದು ಜ್ಯೂರಿ ಹೆದರಿ, ಓಜೆ ನಿರಪರಾಧಿ ಎಂಬ ತೀರ್ಪು ನೀಡಿದ್ದಾರೆ ಎಂದು ಹಲವಾರು 'ಪ್ರತಿಷ್ಠಿತ' ಬಿಳಿಯ ಅಂಕಣಕಾರರು ನೇರವಾಗಿ ಆಪಾದಿಸಿದರು. ಆತ ಹೆಂಡತಿಗೆ ಹೊಡೆಯುತ್ತಿದ್ದ ಎಂಬ ಪೋಲೀಸ್ ದಾಖಲೆ ಇತ್ತು. ಈ ಪ್ರಕರಣದಿಂದಾಗಿ ಹೆಂಗಸರು 'ಈ ನ್ಯಾಯ ವ್ಯವಸ್ಥೆಯಿಂದ ಏನೂ ನಿರೀಕ್ಷಿಸುವಂತಿಲ್ಲ' ಎಂದೂ ಗೋಳಾಡಿದರು ಕೆಲವರು. ಕರಿಯರ ವಿರುದ್ಧ ನ್ಯಾಯ ವ್ಯವಸ್ಥೆ ತಾರತಮ್ಯ ತೋರಿದ ವರದಿಗಳು ಬಂದಾಗ ಇವೆಲ್ಲಾ ಅಪವಾದಗಳು ಅಷ್ಟೇ. ಅಮೇರಿಕಾದ ನ್ಯಾಯ ವ್ಯವಸ್ಥೆ ಸರಿಯಾಗಿಯೇ ಇದೆ ಎಂದು ಬೆನ್ನು ತಟ್ಟಿಕೊಂಡಿರುವವರೇ 'ನ್ಯಾಯ ವ್ಯವಸ್ಥೆ ಅಪಾಯದಲ್ಲಿದೆ' ಎಂದು ಕೂಗಾಡಿದರು. ಓಜೆಯ ಹತ್ತಿರ ಹಣವಿದೆ. ಆತ ನ್ಯಾಯ ಖರೀದಿಸಿಬಿಟ್ಟ. ಆತನ ಪರವಾಗಿ ಅತ್ಯಂತ ಪ್ರತಿಭಾನ್ವಿತ ವಕೀಲರ ತಂಡ ಕೆಲಸ ಮಾಡಿತು. ಪ್ರಕರಣ ಸೃಷ್ಟಿಸಿದ ವಿಶಿಷ್ಟ ವಾತಾವರಣ ಈ ತೀರ್ಪಿಗೆ ಕಾರಣವಾಯಿತು ಎಂದು ಆಪಾದಿಸಲಾಯಿತು.

ಕರಿಯರ ಪ್ರತಿಕ್ರಿಯೆ ತದ್ವಿರುದ್ಧವಾಗಿತ್ತು. ಅವರಿಗೆ ತಾರತಮ್ಯದ, ವರ್ಣಭೇದ ತೋರುವ ನ್ಯಾಯ ವ್ಯವಸ್ಥೆಯಲ್ಲಿ ನ್ಯಾಯ ಗೆದ್ದುಕೊಂಡ ಓಜೆ 'ಹೀರೋ' ಆಗಿದ್ದ. ಆತನ ಹಣ, ಖ್ಯಾತಿ, ಹೋರಾಟದ ರೀತಿಯಿಂದಾಗಿ 'ಬಿಳಿಯ' ನ್ಯಾಯ ವ್ಯವಸ್ಥೆಯನ್ನು ಆತ ನಡುಗಿಸಿದ್ದು ಅವರಿಗೆ ರೋಮಾಂಚನ ತಂದಿತ್ತು. ಹೆಚ್ಚಿನ ಹೆಚ್ಚಿನ ಕರಿಯರ ದೈನಂದಿನ ಬದುಕಿನಲ್ಲಿ ಇದು ಯಾವ ಬದಲಾವಣೆ ತರದಿದ್ದರು ಇಡೀ ನ್ಯಾಯ ವ್ಯವಸ್ಥೆಯೇ ಈ ಪ್ರಕರಣದಲ್ಲಿ ಆಪಾದಿತವಾಗಿತ್ತು ಎಂದು ಅವರ ಪ್ರತಿಕ್ರಿಯೆ.

ಇನ್ನೊಂದು ಪ್ರಕರಣ ಕಣ್ಣಿಗೆ ಹೊಡೆಯುವ ಅನ್ಯಾಯ

ಈ ಓಜೆ ತೀರ್ಪು ಬರುವ ಮೊದಲೇ ಇನ್ನೊಬ್ಬ ನಿರಪರಾಧಿ ಕರಿಯನ ವಿರುದ್ಧ ಅಮೇರಿಕಾದ ನ್ಯಾಯ ವ್ಯವಸ್ಥೆ ತನ್ನ ಸೇಡು ತೀರಿಸಿಕೊಂಡಿತ್ತು. ಆತ ಮುಮಿಯಾ ಅಬು ಜಮಾಲ್ ಆತನ ಅಪರಾಧ ಕರಿಯ [illegible], ಆತ ಕರಿಯರ ಹಕ್ಕುಗಳಿಗೆ ಹೋರಾಡಲು 60ರ ದಶಕದಲ್ಲಿ ಸ್ಥಾಪಿತವಾದ 'ಬ್ಲಾಕ್ ಪ್ಯಾಂಥರ್'ಗೆ ಸೇರಿದ ಹೋರಾಟಗಾರ. ಪ್ರತಿಭಾನ್ವಿತ ವರದಿಗಾರ. ಓಜೆಯ ಹಾಗೆ ವ್ಯವಸ್ಥೆಯ ಒಳಗೇ ಇದ್ದು 'ಸಫಲ'ನಾದ ಕರಿಯ ಅಲ್ಲ. ಆತನನ್ನು ಕೆಲವು ವರ್ಷಗಳ ಹಿಂದೆ ಸುಳ್ಳು ಕೊಲೆ ಅಪರಾಧದ ಮೇಲೆ ಬಂಧಿಸಿ ಮರಣ ದಂಡನೆ ವಿಧಿಸಲಾಗಿತ್ತು. ಆ ಪ್ರಕರಣದಲ್ಲೂ ಪೋಲೀಸ್ ಅಧಿಕಾರಿಯ ಕೊಲೆಯ ಆಪಾದನೆಯಲ್ಲಿ ಬಳಸಲಾದ ಗುಂಡು, ಪಿಸ್ತೂಲು ಎರಡು ಅಬು ಜಮಾಲ್‌ನದಲ್ಲ ಎಂದು ಸ್ಪಷ್ಟ ಪುರಾವೆ ಇದ್ದರೂ, ಆತನಿಗೆ ಮರಣದಂಡನೆ ವಿಧಿಸಲಾಗಿತ್ತು. ವಿಚಾರಣೆಯಲ್ಲಿ ಹಲವಾರು ನೀತಿ ನಿಯಮಗಳನ್ನು ಗಾಳಿಗೆ ತೂರಲಾಗಿತ್ತು. ಕಾನೂನು ನೆರವು ಇತ್ಯಾದಿ ನಿರಾಕರಿಸಲಾಗಿತ್ತು. ಇನ್ನೊಂದು ವಿಚಾರಣೆ ನಡೆಯಬೇಕೆಂದು ಬೇಡಿಕೆಯ ಸುತ್ತ ಭಾರೀ ಚಳುವಳಿಯೇ ನಡೆದಿತ್ತು. ಆ ಕೋರ್ಟ್‌ನಲ್ಲಿ ಎರಡನೆಯ ವಿಚಾರಣೆಯನ್ನು ನಿರಾಕರಿಸಲಾಗಿದೆ. ಈಗ ಮೇಲಿನ ಕೋರ್ಟುಗಳ ಮೆಟ್ಟಿಲು ಹತ್ತಿದೆ ಹೋರಾಟ.

ಅಬು ಜಮಾಲ್ ಅಮೇರಿಕದ ವ್ಯವಸ್ಥೆಯ ವಿರುದ್ಧ ಹೋರಾಡುವ ಸಂಘಟನೆಗಳ ಸದಸ್ಯರಾಗಿದ್ದು ಸುಳ್ಳು ಮೊಕದ್ದಮೆಗಳಲ್ಲಿ ಸಿಲುಕಿಕೊಂಡು ಜೈಲಿನಲ್ಲಿರುವ ಸಾವಿರಾರು ರಾಜಕೀಯ ಕೈದಿಗಳಲ್ಲಿ ಒಬ್ಬ ಅಷ್ಟೇ.

ಈ ಎರಡು ಪ್ರಕರಣಗಳ ನಡುವಣ ವ್ಯತ್ಯಾಸ ಕಣ್ಣಿಗೆ ಹೊಡೆಯುವಂತಹುದು. ಓಜೆ ಪ್ರಕರಣ ಟಿವಿ ಸೀರಿಯಲ್ ತರಹ ಆಗಿತ್ತು. ಪತ್ರಿಕೆ, ರೇಡಿಯೋದಲ್ಲೂ ಅದೇ ಮಾತು-ತಿಂಗಳುಗಟ್ಟಲೆ. ಅಬು ಜಮಾಲ್ ಬಗ್ಗೆ ಅಥವಾ ಹಾಗೆ ಬಿಳಿಯ ವ್ಯವಸ್ಥೆಯಲ್ಲಿ ನರಳುವ ಲಕ್ಷಾಂತರ ಕರಿಯರ ಬಗ್ಗೆ ಒಂದು ಸುದ್ದಿಯೂ ಇಲ್ಲ.

KRNM/BGS-405 MAG (2) PRB DECR 319-79/79
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್.
ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು
ಫೋನ್ ನಂ. 2236462

ಪೆನ್ಶನ್ ಸುಗ್ರೀವಾಜ್ಞೆಗೆ ಸಿಐಟಿಯು ವಿರೋಧ

ಕಾರ್ಮಿಕರ ಹಿತದ ಮುಖವಾಡ ಹೊತ್ತ ರಾಜಕೀಯ ಕುಯುಕ್ತಿ

ನವೆಂಬರ್ 18ರಿಂದ ಜ್ಯಾರಿಗೆ ಬರುವಂತೆ ಕೇಂದ್ರ ಸರಕಾರ ಪೆನ್ಶನ್ ಸುಗ್ರೀವಾಜ್ಞೆಯನ್ನು ಹೊರಡಿಸಿದೆ. ಇದರ ಪ್ರಕಾರ ಭವಿಷ್ಯ ನಿಧಿ (ಪಿ.ಎಫ್.)ಗೆ ಮಾಲಕರು ನೀಡುವ 8.33% ವಂತಿಗೆಯನ್ನು ಬೇರೆಡೆಗೆ ತಿರುಗಿಸಲು ಸರಕಾರ ನಿರ್ಧರಿಸಿರುವುದು ಏಕಪಕ್ಷೀಯ ಕ್ರಮ ಎಂದು ಸಿಐಟಿಯು ಖಂಡಿಸಿದೆ. ಇತ್ತೀಚೆಗೆ ನವೆಂಬರ್ 2-4ರವರೆಗೆ ಭಿಲ್ಯಾನಲ್ಲಿ ಜರುಗಿದ ಸಿಐಟಿಯುನ ಕಾರ್ಯಕಾರಿ ಸಮಿತಿಯ ಸಭೆ ಈ ಬಗ್ಗೆ ತನ್ನ ತೀವ್ರ ಅತೃಪ್ತಿಯನ್ನು ವ್ಯಕ್ತಪಡಿಸಿದೆ. ಕಾರ್ಮಿಕ ಸಂಘಟನೆಗಳು ನಿವೃತ್ತಿ ವೇತನವನ್ನು ಮೂರನೇ ನಿವೃತ್ತಿ ಸೌಲಭ್ಯವಾಗಿ ಕೇಳುತ್ತಿರುವಾಗ ಹಾಗೂ ಭವಿಷ್ಯ ನಿಧಿಯ ಬದಲು ಪೆನ್ಶನ್ ಯೋಜನೆಗೆ ತೀವ್ರ ವಿರೋಧ ವ್ಯಕ್ತಪಡಿಸಿ ಇದನ್ನು ಅಂತಿಮಗೊಳಿಸುವ ಮೊದಲು ಆಮೂಲಾಗ್ರ ಚರ್ಚೆ ನಡೆಸಬೇಕು ಎಂದು ಒತ್ತಾಯಿಸುತ್ತಿದ್ದರೂ ಇಂತಹ ಸುಗ್ರೀವಾಜ್ಞೆಯನ್ನು ಸರಕಾರ ತಂದಿದೆ. ಅಲ್ಲದೆ ಸರಕಾರ ಹೇಳುವ ಪೆನ್ಶನ್ ಯೋಜನೆಯ ಕರಡು ಈ ಸುಗ್ರೀವಾಜ್ಞೆಯ ಭಾಗವಾಗಿ ಬಂದಿಲ್ಲ. ಅದರ ಪ್ರಕಾರ ಭವಿಷ್ಯ ನಿಧಿಯಲ್ಲಿರುವ ಹಣದ ಅರ್ಧದಷ್ಟನ್ನು ಬೇರೆಡೆಗೆ ತಿರುಗಿಸುವ ಅಧಿಕಾರವನ್ನು ಸರಕಾರ ಪಡೆದಿದೆಯಷ್ಟೇ ಹಾಗೂ ಮುಂದೆ ಪೆನ್ಶನ್ ಯೋಜನೆಯೊಂದನ್ನು ರೂಪಿಸಲಾಗುವುದು ಎಂದು ಹೇಳಲಾಗಿದೆಯಷ್ಟೇ.

ಇದು ಕಾರ್ಮಿಕರ ಸೌಲಭ್ಯಗಳನ್ನು ಹೆಚ್ಚಿಸುತ್ತಿಲ್ಲ. ಅವರಿಂದ ಕಿತ್ತುಕೊಂಡ ಭವಿಷ್ಯ ನಿಧಿಗೆ ಬದಲಾಗಿ ನೀಡುತ್ತೇವೆನ್ನುವ ಪೆನ್ಶನ್ ಯೋಜನೆಯಲ್ಲಿ "ಅರ್ಹತೆ", "ಪೆನ್ಶನ್ ಯೋಗ್ಯ ಸೇವಾವಧಿ", "ಪೆನ್ಶನ್ ಯೋಗ್ಯ ಸಂಬಳ" ಇತ್ಯಾದಿಗಳನ್ನು ನಿರೂಪಿಸಿದ ರೀತಿಯನ್ನು ನೋಡಿದರೆ ಸಂಬಳ ಇತ್ಯಾದಿಗಳನ್ನು ನಿರೂಪಿಸಿದ ರೀತಿಯನ್ನು ನೋಡಿದರೆ ಹಲವಾರು ವಿಭಾಗಗಳ ಕಾರ್ಮಿಕರಿಗೆ ನಷ್ಟವಾಗುವ ಸಂಭವವೇ ಹೆಚ್ಚು.ಅಸಂಘಟಿತ ವಲಯದ ಕಾರ್ಮಿಕರಿಗಂತೂ ಯಾವುದೇ ನಿಜವಾದ ಸೌಲಭ್ಯ ಇದರಿಂದ ಸಿಗುತ್ತಿಲ್ಲ ಎಂದು ಸಿಐಟಿಯು ಅಭಿಪ್ರಾಯಪಟ್ಟಿದೆ.

ಸಂಸತ್ತನ್ನು ಬದಿಗೊತ್ತಿ, ಕಾರ್ಮಿಕ ಸಂಘಟನೆಗಳ ತರ್ಕಬದ್ಧ ಆಕ್ಷೇಪಣೆಗಳನ್ನು ಉಪೇಕ್ಷಿಸಿ ತಂದಿರುವ ಈ ಸುಗ್ರೀವಾಜ್ಞೆ "ಕಾರ್ಮಿಕ-ಪರ ಮುಖವಾಡ ಹಾಕಿಕೊಂಡು ಯಾವುದೇ ರೀತಿಯಲ್ಲಿ ಕಾರ್ಮಿಕರ ಹಿತಗಳ ಬಗ್ಗೆ ಗಮನ ಕೊಡದ ರಾಜಕೀಯ ಸಮಯಸಾಧಕತನದ ಒಂದು ಕ್ರಮ' ಎಂದು ಸಿಐಟಿಯು ವರ್ಣಿಸಿದೆ.

ಶಬರಿಮಲೈ ದೇವಸ್ಥಾನದಲ್ಲಿ ಮಹಿಳಾ ಕಲೆಕ್ಟರ್ ಪ್ರವೇಶ ನಿರಾಕರಣೆ

ಎಐಡಿಡಬ್ಲ್ಯುಎ ಖಂಡನೆ

ಶಬರಿಮಲೆ ದೇವಸ್ಥಾನದಲ್ಲಿ ಯಾತ್ರಾರ್ಥಿಗಳಿಗೆ ಸಾಕಷ್ಟು ಸೌಲಭ್ಯಗಳಿವೆಯೇ ಎಂದು ಪರೀಕ್ಷಿಸಲು ಮಹಿಳಾ ಕಲೆಕ್ಟರರಿಗೆ ಪ್ರವೇಶ ನೀಡಲು ದೇವಸ್ಥಾನದ ಆಡಳಿತ ನಡೆಸುವವರು ನಿರಾಕರಿಸಿರುವುದನ್ನು ಅಖಿಲ ಭಾರತ ಪ್ರಜಾಪ್ರಭುತ್ವವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಖಂಡಿಸಿದೆ. "ಕೇರಳ ಹೈಕೋರ್ಟ್ ಆ ರೀತಿ ಪರೀಕ್ಷಿಸಲು ಆಕೆಗೆ ಅಧಿಕಾರ ನೀಡಿರುವಾಗ, ದೇವಸ್ಥಾನದ ಆಡಳಿತ ನಡೆಸುವವರ ವಿರುದ್ಧ ನ್ಯಾಯಾಂಗ ನಿಂದನೆಯ ಅಪರಾಧದ ಮೇಲೆ ಹಾಗೂ ಒಬ್ಬ ಸರಕಾರೀ ಅಧಿಕಾರಿಗೆ ಕರ್ತವ್ಯ ನೆರವೇರಿಸಲು ಅಡ್ಡಿಯಾದ ಅಪರಾಧದ ಮೇಲೆ ಕ್ರಮ ಜರುಗಿಸಬಹುದಾಗಿದೆ" ಎಂದು ಎಐಡಿಡಬ್ಲ್ಯುಎ ಹೇಳಿಕೆ ತಿಳಿಸಿದೆ. ಕೇರಳ ಸರಕಾರ ಮಧ್ಯಪ್ರವೇಶಿಸಿ ತಕ್ಷಣ ಹೈಕೋರ್ಟಿನ ಆದೇಶ ಪಾಲನೆಯಾಗುವಂತೆ ಮಾಡಬೇಕು ಎಂದು ಅದು ಒತ್ತಾಯಿಸಿದೆ.

"ದೇವಸ್ಥಾನದ ಅಧಿಕಾರಿಗಳ ಈ ಆಕ್ಷೇಪಣಾರ್ಹ ನಿಲುವು ಸಂವಿಧಾನ ಭರವಸೆ ನೀಡಿರುವ ಧಾರ್ಮಿಕ ಆಚರಣೆ, ಪರಂಪರೆ ಹಾಗೂ ಸಂಪ್ರದಾಯದಲ್ಲಿ ಸಮಾನತೆಯ ಪ್ರಶ್ನೆಯನ್ನು ಎತ್ತಿದೆ. ಈ ದೇಶದಲ್ಲಿ ದಲಿತರಿಗೆ, ಮಹಿಳೆಯರಿಗೆ ಪ್ರವೇಶ ನೀಡದ ದೇವಸ್ಥಾನಗಳಿವೆ. ಧಾರ್ಮಿಕ ಭಾವನೆಗಳಿಗೆ ಗೌರವ ನೀಡಬೇಕೆಂಬ ದೇಶದಲ್ಲಿ ಇಂತಹ ಪ್ರಜಾಪ್ರಭುತ್ವ-ವಿರೋಧಿ, ಪಾಳೆಯಗಾರಿ ವಿಚಾರಗಳನ್ನು ಸಹಿಸಿಕೊಳ್ಳಲು ಸಾಧ್ಯವೇ?" ಎಂದು ಪ್ರಶ್ನಿಸಿರುವ ಎಐಡಿಡಬ್ಲ್ಯುಎ ಇಂತಹ ಒಂದು ನಿಲುವಿನ ವಿರುದ್ಧ ತಥಾಕಥಿತ ಹಿಂದುತ್ವದ ಶಕ್ತಿಗಳು ಚಕಾರವೆತ್ತುವುದಿಲ್ಲ ಮಾತ್ರವಲ್ಲ, ಅದನ್ನು ಬೆಂಬಲಿಸುತ್ತಾರೆನ್ನುವುದು ಈ ಶಕ್ತಿಗಳದ್ದು ಪಿತೃಪ್ರಧಾನ, ಮೇಲ್ಜಾತಿ ಪರ ಸಿದ್ಧಾಂತವೆಂಬುದಕ್ಕೆ ಸಾಕ್ಷಿ ಎಂದಿದೆ.

ಅಲ್ಪಸಂಖ್ಯಾತ ಕೋಮಿನ ಮಹಿಳೆಯರಿಗೆ ಹಕ್ಕುಗಳು ಹಾಗೂ ಘನತೆಯನ್ನು ನೀಡಿ ಎಂದು ಅವರ ಉಪದೇಶಕ್ಕೆ ಏನಾದರೂ ಅರ್ಥ ಬರಬೇಕಾದರೆ ಮೊದಲು ತಾವು ಈ ಸಮಾನ ಹಕ್ಕು ಹಾಗೂ ಘನತೆಯನ್ನು ಪಾಲಿಸುತ್ತಿದ್ದೇವೆಯೇ ಎಂದು ಗಂಭೀರವಾಗಿ ಪರೀಕ್ಷಿಸಿಕೊಳ್ಳಲಿ ಎಂದು ಎಐಡಿಡಬ್ಲ್ಯುಎ ಹೇಳಿಕೆ ತಿಳಿಸಿದೆ.

(ಐ.ಎನ್.ಎಸ್.)

ಡಿವೈಎಫ್ಐ ರಾಷ್ಟ್ರ ಸಮ್ಮೇಳನ

ಪುಟ 1ರಿಂದ

ನಿಧಿಗಳು ಮೆರವಣಿಗೆಯಲ್ಲಿ ಭಾಗವಹಿಸಿದರು. ಬಂಗಾಳದ ಕಲಾವಿದರ ತಂಡಗಳು ಮೆರವಣಿಗೆಯ ಪ್ರಮುಖ ಆಕರ್ಷಣೆಯಾಗಿದ್ದವು. ಹಿಮಾಲಯ ಶ್ರೇಣಿಯಲ್ಲಿರುವ ದಾರ್ಜಿಲಿಂಗ್‌ನ ನೇಪಾಳೀ ಉಡುಗೆ-ತೊಡುಗೆಯ ಜಾನಪದ ನರ್ತಕರು, ಬಂಕುರಾ ಹಾಗೂ ಮಿಡ್ನಾಪುರದ ಬುಡಕಟ್ಟು ನರ್ತಕರು ಮತ್ತು ಕಿಶೋರ್ ಬಾಹಿನಿ ಸದಸ್ಯರು ಮೆರವಣಿಗೆಯುದ್ದಕ್ಕೂ ತನ್ನ ಕಲೆಗಳ ಪ್ರದರ್ಶನ ನೀಡಿದರು. ದಿನೇಶ್ ಮುಜುಂದಾರ್ ನಗರ ಎಂದು ಹೆಸರಿಸಿದ್ದ ಸಮ್ಮೇಳನದ ಆವರಣದಲ್ಲಿ ಎಂ.ಎ. ಬೇಬಿ ಹುತಾತ್ಮ ಸ್ತಂಭದಲ್ಲಿ ಹುತಾತ್ಮ ಜ್ಯೋತಿ ಬೆಳಗಿ ನಂತರ ಧ್ವಜಾರೋಹಣ ಮಾಡಿದರು.

ಸಮ್ಮೇಳನದ ವೇದಿಕೆಗೆ 'ನಜಿರುಲ್ ಮಂಚ್' ಎಂದು ಹೆಸರಿಸಿದ್ದ ಹಿನ್ನೆಲೆಯ ಪರದೆ ಶುಭ್ರ ಬಿಳುಪು ಹಿನ್ನೆಲೆಯಲ್ಲಿ ಹೊಳೆಯುವ ಕೆಂಪು ನಕ್ಷತ್ರವನ್ನು ಹೊಂದಿತ್ತು. ಸ್ವಾತಂತ್ರ್ಯ ಆಂದೋಲನ, ಸ್ವಾತಂತ್ರ್ಯಾನಂತರದ ಪ್ರಜಾಸತ್ತಾತ್ಮಕ ಹೋರಾಟಗಳ ಹಾಗೂ ಭೂ ಹೋರಾಟಗಳ ಸ್ತಬ್ಧ ಚಿತ್ರಗಳನ್ನು ಹೊಂದಿದ್ದ 100 ಅಡಿಗಳ ಪ್ಯಾನಲ್ ರಚಿಸಲಾಗಿತ್ತು. ಕಲ್ಕತ್ತಾ ಗಾನಮೇಳದ ನೃತ್ಯನಾಟಕ ಹಾಗೂ ಹಾಡುಗಳೊಂದಿಗೆ ಉದ್ಘಾಟನಾ ಅಧಿವೇಶನ ಆರಂಭವಾಯಿತು. ಇದರಲ್ಲಿ ಸುಪ್ರಸಿದ್ಧ ಹಿರಿಯ ಹಾಡುಗಾರ ಮೊಂಟು ಘೋಷ್ ಹಾಗೂ ಕ್ರಾಂತಿಕಾರಿ ನೃತ್ಯದ ಪ್ರವರ್ತಕ ಖೋರೆದ್ ಗಪಿ ಶಂಭು ಭಟ್ಟಾಚಾರ್ಯರವರೂ ಭಾಗವಹಿಸಿದ್ದರು. ಐಕ್ಯತೆ ಹಾಗೂ ಬೃಹತ್ ಹೋರಾಟಗಳ ಕರೆ ಈ ಹಾಡು-ನೃತ್ಯಗಳ ಮುಖ್ಯ ವಿಷಯವಾಗಿತ್ತು.

ಒಂಭತ್ತು ಸದಸ್ಯರುಳ್ಳ ಅಧ್ಯಕ್ಷ ಮಂಡಳಿಯನ್ನು ಆರಿಸಲಾಯಿತು. ಎಂ.ಎ.ಬೇಬಿ, ವಿಜಯಕಾಂತ್, ಮೈನುಲ್ ಹಸನ್, ಎನ್.ಎನ್. ಕೃಷ್ಣದಾಸ್, ಅಶೋಕ್ ಧವಳೆ, ಜಿತೇನ್ ಚೌಧುರಿ, ಬದ್ರುನ್ನಿಸಾ, ಸುಖ್‌ಬಿಂದರ್ ಶೇಕೋಂ ಹಾಗೂ ಬಿಲಾಸಿ ಬಾಲಾ ಸಾಹಿ ಅಧ್ಯಕ್ಷ ಮಂಡಳಿಯ ಸದಸ್ಯರು. 13 ಸದಸ್ಯರುಳ್ಳ ಸ್ಟಿಯರಿಂಗ್ ಸಮಿತಿಯನ್ನು ಆರಿಸಲಾಯಿತು. ಎಂ.ಎ.ಬೇಬಿ ಶ್ರದ್ಧಾಂಜಲಿ ನಿರ್ಣಯಗಳನ್ನು ಮಂಡಿಸಿದರು.

ಕಲ್ಕತ್ತಾ ವಿಶ್ವವಿದ್ಯಾಲಯದ ಉಪಕುಲಪತಿ ರಥೀಂದ್ರ ನಾರಾಯಣ ಬೋಸ್ ಸಮ್ಮೇಳನವನ್ನು ಉದ್ಘಾಟಿಸಿದರು. ಬಹುರಾಷ್ಟ್ರೀಯ ಕಂಪೆನಿಗಳು ಹೇಗೆ ವಿಶ್ವದ ಸಂಪನ್ಮೂಲಗಳನ್ನು ಹರಿದು ತಿನ್ನುತ್ತದೆ ಎಂದು ವಿವರಿಸಿದ ಅವರು ಗ್ಯಾಟ್ ಸಂಧಿಯ ಪ್ರತಿಕೂಲ ಪರಿಣಾಮಗಳನ್ನು ವಿಶ್ಲೇಷಿಸಿದರು.

ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷ ಬಿಮಾನ್ ಬಸು ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ ಇತಿಹಾಸದ ತಿರುವುಗಳಲ್ಲಿ ಯುವಜನರು ವಹಿಸಿದ ಪಾತ್ರವನ್ನು ನೆನಪಿಸಿದರು. ಇಡೀ ಸಮ್ಮೇಳನದ ಖರ್ಚಿಗೆ ಹಣವನ್ನು ಸಣ್ಣ ಪುಟ್ಟ ಮೊತ್ತಗಳ ಕೂಪನ್‌ಗಳಿಂದಲೇ ಸಂಗ್ರಹಿಸಲಾಯಿತು ಎಂದು ಅವರು ಹೇಳಿದರು.

ಡಬ್ಲ್ಯುಎಫ್ ಡಿವೈ ಅಥವಾ ವಿಶ್ವ ಪ್ರಜಾಸತ್ತಾತ್ಮಕ ಯುವಜನ ಒಕ್ಕೂಟ ತನ್ನ 50ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಡಿವೈಎಫ್ಐ ಸಮ್ಮೇಳನ ನಡೆಯುತ್ತಿದೆ.(ಈ ಬಗ್ಗೆ ನವಂಬರ್ 15ರಂದು ಪ್ರತ್ಯೇಕ ಸಮಾರಂಭ ನಡೆಯಿತು) ಡಿವೈಎಫ್ಐ ಸಮ್ಮೇಳನಕ್ಕೆ ಬಂದ ವಿದೇಶೀ ಪ್ರತಿನಿಧಿಗಳನ್ನು ಪರಿಚಯಿಸಲಾಯಿತು. ಬಾಂಗ್ಲಾದೇಶದ 3 ಸಂಘಟನೆಗಳು, ನೇಪಾಳದ 2 ಸಂಘಟನೆಗಳು ಹಾಗೂ ಉತ್ತರ ಕೊರಿಯಾ, ಸುಡಾನ್, ಚೀಣಾ, ಇರಾನ್, ಜಪಾನ್, ಪೋರ್ಚುಗಲ್ ಹಾಗೂ ಶ್ರೀಲಂಕಾದ ಯುವ ಸಂಘಟನೆಗಳ ಪ್ರತಿನಿಧಿಗಳು ಆಗಮಿಸಿದ್ದರು.

ಈ ಸಮ್ಮೇಳನದಲ್ಲಿ ಕರ್ನಾಟಕದಿಂದ 10 ಪ್ರತಿನಿಧಿಗಳು ಭಾಗವಹಿಸುತ್ತಿದ್ದಾರೆ.

(ಐ.ಎನ್.ಎಸ್.)

ಕೂತುಪರಂಬುನಿಂದ ಕಲ್ಕತ್ತೆಯವರೆಗೆ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್ಐ) ಈ ಸಮ್ಮೇಳನದಲ್ಲಿ ಹಾರಿಸಿದ ಬಾವುಟವನ್ನು ಹೊತ್ತ ಜಾಥಾ ಕೇರಳದ ಕಣ್ಣೂರು ಜಿಲ್ಲೆಯ ಕೂತುಪರಂಬುನಿಂದ ಅಕ್ಟೋಬರ್ 24ರಂದು ಹೊರಟು ಸಮ್ಮೇಳನದ ಆರಂಭದ ವೇಳೆಗೆ ಕಲ್ಕತ್ತಾ ತಲುಪಿತು.

ನವಂಬರ್ 1994ರಲ್ಲಿ ಪೋಲೀಸ್ ಗೋಳೀಬಾರಿನಲ್ಲಿ ಹುತಾತ್ಮರಾದ ಐದು ಡಿವೈಎಫ್ಐ ಸಂಗಾತಿಗಳಾದ ಕೆ.ರಾಜೀವನ್, ಮಧು, ರೋಶನ್, ಶಿಬುಲಾಲ್ ಹಾಗೂ ಬಾಬುರವರ ನೆನಪಿನಲ್ಲಿ ಈ ಜಾಥಾ ಆರಂಭವಾಯಿತು. ಜಾಥಾ ಆರಂಭದ ಮೊದಲು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಇ.ಕೆ.ನಾಯನಾರ್ ಸಮ್ಮೇಳನದ ಬಾವುಟವನ್ನು ಡಿವೈಎಫ್ಐನ ಅಖಿಲ ಭಾರತ ಉಪಾಧ್ಯಕ್ಷ ಎಸ್.ಶರ್ಮಾರವರಿಗೆ ನೀಡಿದರು. ಶರ್ಮಾರವರ ನೇತೃತ್ವದಲ್ಲಿ ಈ ಜಾಥಾ ನಡೆಯಿತು. ನಿರುದ್ಯೋಗದ ಹೆಚ್ಚಳ, ಮೂಲಭೂತವಾದದ ಹಿಡುಗು ಹಾಗೂ ಯುವಜನರನ್ನು ಬಾಧಿಸುತ್ತಿರುವ ಇತರ ಸಮಸ್ಯೆಗಳ ಬಗ್ಗೆ ಜಾಥಾ ಯುವಜನರ ಗಮನ ಸೆಳೆಯಿತು.

ಒಂದು ಮನವಿ


ದಕ್ಷಿಣ ಮಧ್ಯ ರೈಲ್ವೇ ನೌಕರರ ಯೂನಿಯನ್(ಸಿಐಟಿಯು) ರಾಜ್ಯದಲ್ಲಿ ಸಿಐಟಿಯು ಹಾಗೂ ಪಕ್ಷದ ಕಾರ್ಯಕರ್ತರಲ್ಲಿ ಈ ಕೆಳಗಿನ ಮನವಿ ಮಾಡಿಕೊಂಡಿದೆ.

ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿಯಾಗಿದ್ದ ಕಾಂ. ಎಂ.ವಿ.ಸುಬ್ಬಯ್ಯ ಏಪ್ರಿಲ್ 3, 1995ರ ನಸುಕಿನಿಂದ ಕಾಣೆಯಾಗಿದ್ದಾರೆ. 'ರೈಲ್ವೇ ಮುಕ್ಕು ಸುಬ್ಬಯ್ಯ' ಎಂದು ಕರೆಯುತ್ತಿದ್ದ ಇವರು ಇತ್ತೀಚೆಗೆ ಮಾನಸಿಕವಾಗಿ ಅಸ್ವಸ್ಥರಾಗಿದ್ದು ಆ ದಿನ ನಸುಕಿನಲ್ಲಿ ಮನೆಯಿಂದ ಕಾಣೆಯಾಗಿದ್ದು ಇದುವರೆಗೂ ಅವರ ಸುಳಿವು ದೊರೆಯದೆ ಅವರ ಕುಟುಂಬ ವರ್ಗ ದುಃಖತಪ್ತವಾಗಿದೆ. ಆದ್ದರಿಂದ ಅವರನ್ನು ಹುಡುಕುವಲ್ಲಿ ನೆರವಾಗಬೇಕೆಂದು ಯೂನಿಯನ್ ಮನವಿ ಮಾಡಿದೆ.

ಅವರ ವಿವರ ಹೀಗಿದೆ.

ಹೆಸರು : ಎಂ. ವಿ. ಸುಬ್ಬಯ್ಯ
ವಯಸ್ಸು : 72 ವರ್ಷ
ಎತ್ತರ : 5 - 2

ಗೋಧಿ ಮೈಬಣ್ಣ, ನರೆಕೂದಲು, ಉದ್ದ ಮೂಗು, ಹಣೆಯ ಮೇಲೆ ಶಸ್ತ್ರಚಿಕಿತ್ಸೆಯಿಂದ ಸಣ್ಣ [illegible]



ತಿದೆ. ಬನಿಯನ್ ಮತ್ತು ಪಟ್ಟೆ ಪಟ್ಟೆಯ ಲುಂಗಿ ಧರಿಸಿದ್ದರು. ಇಂಗ್ಲಿಷ್ ಹಾಗೂ ತೆಲುಗು ಮಾತನಾಡಬಲ್ಲರು.

ಇವರನ್ನು ಕಂಡಲ್ಲಿ ಅಥವಾ ಸುಳಿವು ದೊರೆತಲ್ಲಿ ಹೈದರಾಬಾದಿಗೆ ಈ ಎರಡು ದೂರವಾಣಿ ಮೂಲಕ ತಿಳಿಸಬೇಕಾಗಿ ಯೂನಿಯನ್ ಮನವಿ ಮಾಡಿದೆ.

ದೂರವಾಣಿ ಸಂಖ್ಯೆ
0842 - 7612474
0842 - 291802

ತಮಿಳುನಾಡಿನ ರಾಜಕೀಯ.....

ಪುಟ 5ರಿಂದ

ಸರಕಾರಗಳೆರಡರ ವಿರುದ್ಧವೂ ಹೋರಾಡುವ ಏಕೈಕ ನೈಜ ಶಕ್ತಿ ಸಿಪಿಐ(ಎಂ)-ಎಂಡಿ ಎಂಕೆಯ ಐಕ್ಯ ಹೋರಾಟಗಳ ಮೂಲಕ ಹೊಮ್ಮಿ ಬರುತ್ತಿದೆ. ಕಳೆದ ಹತ್ತು ತಿಂಗಳ ಹೋರಾಟಗಳಲ್ಲಿ ಮೂಡಿ ಬಂದಿರುವ ಈ ಶಕ್ತಿಗೆ ಸಾಕಷ್ಟು ಉತ್ತಮ ಬೆಂಬಲ ದೊರೆತಿದೆ. ಒಂದು ಆರೋಗ್ಯಕರ, ಜನಪ್ರಿಯ ಹಾಗೂ 'ಭ್ರಷ್ಟಾಚಾರವಿಲ್ಲದ ಸ್ಥಳೀಯ ಸಂಸ್ಥೆಗಳನ್ನು ಆರಿಸಬೇಕೆಂದು ಈ ಪಕ್ಷಗಳು ಕರೆ ನೀಡಿವೆ. ಮುಂಬರುವ ವಾರಗಳಲ್ಲಿ ಎಂಡಿಎಂಕೆಯೊಂದಿಗೆ ಹಲವು ಪ್ರಶ್ನೆಗಳ ಮೇಲೆ ಸಾಮೂಹಿಕ ಕಾರ್ಯಾಚರಣೆ, ಹೋರಾಟಗಳನ್ನು ರೂಪಿಸಲಾಗಿದೆ.

ಇತ್ತೀಚೆಗೆ ರಾಜ್ಯದಲ್ಲಿ ಜನರ ಪ್ರಮುಖ ಸಮಸ್ಯೆಗಳ ಮೇಲೆ ಹಲವು ಕಾರ್ಯಾಚರಣೆಗಳು ನಡೆದಿವೆ. ಕರಾವಳಿ ಪ್ರದೇಶದಲ್ಲಿ ಸೀಗಡಿ ಫಾರ್ಮಿಂಗ್ ದುಷ್ಪರಿಣಾಮಗಳ ವಿರುದ್ಧ ಕಿಸಾನ್ ಸಭಾದ ಪ್ರಚಾರ-ಪ್ರಕ್ಷೋಭೆ, ಕೈಮಗ್ಗ ನೇಕಾರರ ಹೋರಾಟ, ಜವಳಿ ಕಾರ್ಮಿಕರ ಹೋರಾಟ, ವಿದ್ಯುಚ್ಛಕ್ತಿ ಕಾರ್ಮಿಕರು, ಶಿಕ್ಷಕರು, ಸರಕಾರೀ ನೌಕರರು ಹಾಗೂ ಇತರ ದುಡಿಯುವ ಜನವಿಭಾಗಗಳ ಹೋರಾಟಗಳು ನಡೆದಿವೆ. ಎಸ್ಎಫ್ಐ ಶಿಕ್ಷಣ ರಂಗದಲ್ಲಿ ದೊಡ್ಡ ಪ್ರಕ್ಷೋಭೆ ನಡೆಸಿದೆ. ಬುಡಕಟ್ಟು ಮಹಿಳೆಯರ ಮೇಲೆ ಅತ್ಯಾಚಾರದ ವಿರುದ್ಧ ಆಂದೋಲನ ನಡೆದಿದೆ. ಈ ಹೋರಾಟಗಳು, ಅವುಗಳ ಜತೆಗೆ ಜಂಟಿ ರಾಜಕೀಯ ಪ್ರಭಾವ ಮುಂಬರುವ ದಿನಗಳಲ್ಲಿ ಆರೋಗ್ಯಕರ ಪ್ರಜಾಪ್ರಭುತ್ವವಾದಿ ಶಕ್ತಿಗಳು ಕ್ರೋಢೀಕರಣಗೊಳ್ಳಲು ನೆರವಾಗುತ್ತಿವೆ.

ಜಯಲಲಿತಾ ದುರಾಡಳಿತದ ವಿರುದ್ಧ ತನ್ನ ನೈಜ ದ್ವೇಷದಲ್ಲಿ ರಜನಿಕಾಂತ್ ಕಾಂಗ್ರೆಸ್(ಐ) ಬಲೆಗೆ ಬೀಳುತ್ತಿದ್ದಾರೆ, ರಾಜಕೀಯ ಜೀವನದಲ್ಲಿ ಆರೋಗ್ಯಕರ ಮೌಲ್ಯಗಳನ್ನು ಬೆಳೆಸುವ ಹೋರಾಟ ಕಾಂಗ್ರೆಸ್ಸನ್ನು ಬಲಪಡಿಸುವ ಮೂಲಕ ಸಾಧ್ಯವಿಲ್ಲವೆಂಬುದನ್ನು ಅರಿಯಬೇಕೆಂದು ಸಿಪಿಐ(ಎಂ) ಆತನಿಗೆ ಹೇಳುತ್ತಿದೆ.

ಒಟ್ಟಿನಲ್ಲಿ ತಮಿಳುನಾಡಿನ ರಾಜಕೀಯ ಒಂದು ಅನಿರ್ಣಾಯಕ ಸ್ಥಿತಿಯಲ್ಲಿದೆ. ಕಾಂಗ್ರೆಸ್(ಐ)-ಎಂ.ಜಿ.ಆರ್.ಮನ್ರಂ ಕೂಟ, ಡಿಎಂಕೆ ನೇತೃತ್ವದ ಕೂಟ, ಜಯಲಲಿತಾ ನೇತೃತ್ವದ ಕೂಟ ಹಾಗೂ ಸಿಪಿಐ(ಎಂ)-ಎಂಡಿಎಂಕೆ ಐಕ್ಯತೆ ಈ ನಾಲ್ಕು ಕೂಟಗಳು ಈಗ ರಂಗದಲ್ಲಿವೆ. ಮುಂಬರುವ ದಿನಗಳಲ್ಲಿ ಇವುಗಳೊಳಗೆ ವಿವಿಧ ವ್ಯತ್ಯಯಗಳು,ವರ್ಗಾವಣೆಗಳು ನಡೆಯಬಹುದು. ಕಾಂಗ್ರೆಸ್(ಐ) ಮತ್ತು ಎಐಡಿಎಂಕೆ ವಿರುದ್ಧ, ಪ್ರಜಾಪ್ರಭುತ್ವ ಮತ್ತು ಜನಗಳ ಹಿತಾಸಕ್ತಿಗಳ ರಕ್ಷಣೆಗಾಗಿ ಒಂದು ನೀತಿಬದ್ಧ ಐಕ್ಯತೆ ಎಷ್ಟು ಅಗತ್ಯವೆಂದು ಬಿಂಬಿಸಲು ಸಿಪಿಐ(ಎಂ) ಪ್ರಯತ್ನಿಸುತ್ತಿದೆ.

ಕಟಿಕಟೆಗೆ ಎಳೆದು ತನ್ನಿ....

ಪುಟ 5ರಿಂದ

ಭರವಸೆ ನೀಡುತ್ತಿದ್ದರು! ಪಾಕಿಸ್ತಾನವನ್ನು ಭಾರತದ ಹಿತಾಸಕ್ತಿಗಳ ವಿರುದ್ಧ ಉಪಯೋಗಿಸುವ ಧೋರಣೆಯನ್ನು ಇದೇ ರೀತಿ ಮುಂದುವರಿಸುತ್ತಿದ್ದರೆ ಅಮೇರಿಕಾದೊಡನೆ ಸಂಬಂಧಗಳು ಎಲ್ಲಾ ರೀತಿಯಲ್ಲಿ ಕೆಡುತ್ತದೆ ಎಂದು ಭಾರತ ಸರಕಾರ ಈಗ ಸ್ಪಷ್ಟವಾಗಿ ಸಾರಬೇಕು. ವಿಳಂಬ ಮಾಡದೆ ಭಾರತ-ಅಮೇರಿಕಾ ಮಿಲಿಟರಿ ಸಹಕಾರವನ್ನು ರಾವ್ ಸರಕಾರ ರದ್ದು ಮಾಡಬೇಕು.

'ಪೃಥ್ವಿ' ಸಮೀಪಗಾಮಿ ಕ್ಷಿಪಣಿಗಳನ್ನು ಭಾರತೀಯ ಸೇನೆ ನೆಲೆಗೊಳಿಸುವ ಪ್ರಶ್ನೆಯ ಮೇಲೆ ಕಾಂಗ್ರೆಸ್ ಸರಕಾರ ಇನ್ನು ನೆವಗಳ ನ್ನೊಡ್ಡಿ ತಪ್ಪಿಸಿಕೊಳ್ಳುವಂತಿಲ್ಲ. ಅಗ್ನಿ ಕ್ಷಿಪಣಿ ಕಾರ್ಯಕ್ರಮಕ್ಕೆ ತಡೆ ಹಾಕಬೇಕೆಂದು ಅಮೇರಿಕನ್ ಒತ್ತಾಯಕ್ಕೆ ನಾಚಿಕೆಯಿಲ್ಲದೆ ಮಣಿದಿದ್ದು ಅದನ್ನು ಬದಲಿಸಬೇಕು. ಭಾರತ ಯಾವ ದೇಶದೊಡನೆ ಹೇಗೆ ಅತ್ಯಾಧುನಿಕ ತಂತ್ರಜ್ಞಾನವನ್ನು ವಿನಿಮಯ ಮಾಡಿಕೊಳ್ಳಬೇಕು, ವರ್ಗಾಯಿಸಿಕೊಳ್ಳಬೇಕು ಎಂಬುದರ ಬಗ್ಗೆ ನಿರ್ಧರಿಸುವಾಗ ಅಮೇರಿಕಾದ ಅನುಮೋದನೆ ಅಥವಾ ನಿರಾಕರಣೆಗೆ ಕಿವಿಗೊಡಬೇಕೇಕೆ? ಭಾರತದೊಂದಿಗೆ ಸಮಾನತೆಯ ಆಧಾರದ ಮೇಲೆ ವ್ಯವಹಾರ ಮಾಡಲು ಸಿದ್ಧರಿರುವ ಚೀಣೋ ಇರಾನ್, ರಶ್ಯಾ ಮತ್ತಿತರ ಎಲ್ಲಾ ದೇಶಗಳೊಂದಿಗೆ ಸಂಬಂಧಗಳನ್ನು ಸುಧಾರಿಸಿಕೊಳ್ಳುವ ಪ್ರಜ್ಞಾಪೂರ್ವಕ ಪ್ರಯತ್ನ ನಡೆಯಬೇಕು. ಭಾರತದ ರಾಷ್ಟ್ರೀಯ ಹಿತಾಸಕ್ತಿಗಳನ್ನು ಈಡೇರಿಸಬಲ್ಲ ಧೋರಣೆಯೆಂದರೆ ಇದು ಮಾತ್ರ.

ಬಿಜೆಪಿ ತನ್ನ ಇತ್ತೀಚಿನ ವಿದೇಶಾಂಗ ಧೋರಣೆ ಕುರಿತ ಪ್ರಬಂಧದಲ್ಲಿ ಅಮೇರಿಕಾ ಭಾರತ ಮತ್ತು ಪಾಕಿಸ್ತಾನವನ್ನು ಒಂದೇ ರೀತಿಯಲ್ಲಿ ಕಾಣುವ ಧೋರಣೆಯನ್ನು ತ್ಯಜಿಸಿದರೆ ಅದರೊಡನೆ "ಸಾಮರಿಕ ಸಹಕಾರ"ಕ್ಕೆ ಸಿದ್ಧ ಎಂದಿದೆ. ಅದರ ಪಾಕಿಸ್ತಾನವನ್ನು ತನ್ನ ಮಿತ್ರ ಎಂದು ಪರಿಗಣಿಸುವುದನ್ನು ಬಿಟ್ಟರೆ ಭಾರತ ಅಮೇರಿಕಾದ ಕಿರಿಯ ಪಾಲುದಾರನಾಗಲು ಸಿದ್ಧ ಎಂದ ಹಾಗಾಯಿತು. ಈ ರೀತಿಯ ಧೋರಣೆಯಿಂದ ಬಿಜೆಪಿ ತನ್ನ ಸಾಮ್ರಾಜ್ಯಶಾಹಿ-ಪರ ಮನೋಧರ್ಮವನ್ನು ದೃಢಪಡಿಸಿದೆಯಷ್ಟೆ. ಪಾಕಿಸ್ತಾನದ ಈ ಅಂಶನ್ನು ಬದಿಗಿಟ್ಟು ನೋಡಿದರೂ ಭಾರತ ಒಂದು ಆರ್ಥಿಕ ಶಕ್ತಿಯಾಗಿ ಅಥವಾ ಮಿಲಿಟರಿ ಶಕ್ತಿಯಾಗಿ ಸ್ವತಂತ್ರ ಸಾಮರ್ಥ್ಯ ಪಡೆಯದಂತೆ ತಡೆಗಟ್ಟುವ ನಿಟ್ಟಿನಲ್ಲೇ ಅಮೇರಿಕಾದ ವರ್ತನೆಯಿದೆ. ಈ ವಿಷಯದಲ್ಲಿ ಚೌಕಾಶಿ ಅಥವಾ ರಾಜೀ ಸಾಧ್ಯವೇ?

ಅಮೇರಿಕಾದೆದುರು ಮೊಣಕಾಲೂರಿರುವ, ಅದನ್ನು ಸದಾ ಖುಷಿ ಪಡಿಸುವ ಧೋರಣೆಯ ನರಸಿಂಹರಾವ್ ಸರಕಾರವನ್ನು ಕಟಿಕಟೆಗೆ ತರಬೇಕು. ರಾವ್ ಸರಕಾರದ ವಿರುದ್ಧ ಜನಾಂದೋಲನ ಹರಿಯಬಿಡುವಲ್ಲಿ ಇದೊಂದು ಪ್ರಧಾನ ಪ್ರಶ್ನೆಯಾಗಬೇಕು.